# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ ಸಂಚಿಕೆ ೪೪ - ೨೦೨೩




KARNATAKA CULTURAL ORGANIZATION BRINDAVANA (KCOB) NJ, USA

## ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಪರಿವಿಡಿ

ಅಧ್ಯಕ್ಷರ ಅಪೂರ್ವ ಅಂಕಣ.................................೧

ಅಹಿಂಸೆ..........................................................೫

ಹಿನ್ನೋಟ.......................................................೭

ಬರಹಗಳು.....................................................೧೭

ಕವನಗಳು.....................................................೨೪

ಪ್ರತಿಭೆ..........................................................೩೩

ಚಿನ್ನರ ಮುತ್ತುಗಳು.......................................೩೮

ಕ್ಯಾಮೆರಾ ಕಣ್ಣು...............................................೪೧

# ಸಂಪಾದಕೀಯ

ಅಪೂರ್ವ ತಂಡದ ಬೃಂದಾವನ ವಾಣಿಯ ನಲ್ಮೆಯ ಸ್ವಾಗತ!!

ಬೃಂದಾವನ ವಾಣಿಯ  ತಂಡದಿಂದ ಎಲ್ಲ ಸಹೃದಯ  ಕನ್ನಡ ಬಾಂಧವರಿಗೆ ಹೊಸ ವರುಷದ ಹಾಗು ಯುಗಾದಿಯ ಹಾರ್ದಿಕ ಶುಭಾಶಯಗಳು. ಹಲವು ವರ್ಷಗಳ ನಂತರ ನಿಮ್ಮೊಡನೆ ಮತ್ತೊಮ್ಮೆ ಬೃಂದಾವನ ವಾಣಿ ಮೂಲಕ ಮನದ ಮಾತುಗಳನ್ನು ಹಂಚಿಕೊಳ್ಳಲು ಸಂತಸವಾಗುತ್ತಿದೆ.
ಬೃಂದಾವನ ವಾಣಿ ಹೊಸ ರೂಪು-ರೇಷೆಗಳೊಂದಿಗೆ ನಿಮ್ಮ ಮಡಿಲಿಗೆ ಬರಲಿದೆ. ನಿಮ್ಮೆಲ್ಲರ ಸಹಕಾರ ಅತ್ಯಗತ್ಯ ಹಾಗು ಅಭಿಮಾನದ feedback ಬೃಂದಾವನ ವಾಣಿಯ ಮುಂದಿನ ಸಂಚಿಕೆಗಳಿಗೆ ಮಾರ್ಗದರ್ಶಕ.

ಬೃಂದಾವನ ವಾಣಿಯ ಸಣ್ಣ ಬದಲಾವಣೆಗಳಲ್ಲಿ ಮೊದಲಿಗೆ ದ್ವೈಮಾಸಿಕ ಸಂಚಿಕೆಯಾದ ವಾಣಿ ಇನ್ನುಮುಂದೆ ತ್ರೈಮಾಸಿಕ ಸಂಚಿಕೆಯಾಗಿ ಪ್ರಕಟಣಗೊಳ್ಳಲಿದೆ. ವರ್ಷದ ಪ್ರತೀ ಸಂಚಿಕೆಯು ನೂತನ ಹೆಸರೊಂದಿಗೆ ಗುರುತಿಸಿಕೊಳ್ಳಲಿದೆ.
ಈ ಸಂಚಿಕೆ "ಚೈತ್ರದ ಭೃಂಗ" ನಿಮ್ಮೆಲ್ಲರ ಮನಸ್ಸನ್ನು ಈ ಭೃಂಗ ಸೆರೆಗೊಳ್ಳಲಿದೆ ಎನ್ನುವ ಆಶಯ ನಮ್ಮದು.

ಈ ಬಾರಿಯ ಚಳಿಗಾಲ ಅಂತ ಬಿರುಸಾಗೇನು ಇಲ್ಲದಿದ್ದರೂ, ಮೈ ಕೊರಿವ ಚಳಿಗೇನು ಕಮ್ಮಿ ಇರಲಿಲ್ಲ..
ಡಿಸೆಂಬರ್ ನಲ್ಲಿ ಬಂದ nor-ester ನಿಂದಾಗಿ ಸ್ವಲ್ಪ ದಿನಗಳ ಕಾಲ Ice and  snow ಯಿಂದ  ಶೀತದ  ಚಳಿ ಇದ್ದರು, ನಂತರ ದಿನಗಳಲ್ಲಿ ಬಹಳವಾಗಿ ಸಾಧಾರಣ ಹವಾಮಾನದಿಂದಾಗಿ  ಸ್ವಲ್ಪ ಬೇಗನೆ ಚೈತ್ರ ಬಂದಂತ ಅನುಭವವಾಯಿತು.

2023-ಜನವರಿ ತಿಂಗಳಿನಲ್ಲಿ, ಹಾವೇರಿಯಲ್ಲಿ ೮೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಶ್ರೀ ದೊಡ್ಡರಂಗೇಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಸಾವಿರಾರು ಜನರು ಸೇರಿ ಆಚರಿಸಿದ ಸಮ್ಮೇಳನದಲ್ಲಿ ಮೂರು ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಹಲವಾರು ಸುಮಧುರ ಗೀತೆಗಳನ್ನು ಬರೆದಿರುವ ಶ್ರೀ ದೊಡ್ಡರಂಗೇಗೌಡರಿಗೆ  ಸಲ್ಲಿರುವ ಈ ಅಧ್ಯಕ್ಷತೆಯ ಗೌರವ ಬಹಳವಾಗಿ ಅಭಿನಂದನೀಯ.

ಬೃಂದಾವನದ ಅಪೂರ್ವ ತಂಡ ಕಳೆದ ತಿಂಗಳಿನಲ್ಲಿ ಹಲವಾರು online ಕಾರ್ಯಕ್ರಮಗಳನ್ನು ಮಾಡಿದರು.  ಸಂಕ್ರಾಂತಿಯಂದು ಪ್ರಾರಂಭವಾದ ಸಾಹಿತ್ಯ ತಂಡದ "ಕನ್ನಡ ಕಾರಂಜಿ ವೇದಿಕೆಗೆ" ಮೊದಲಿಗೆ ಶ್ರೀ ಗೋವಿಂದನ್ ಅವರಿಂದ ಉದ್ಘಾಟನೆ, ನಂತರದ "ನಿನ್ನೊಲುಮೆಯಿಂದಲೆ" ಎನ್ನುವ ಶ್ರೀ ಕೆ ಎಸ್ ನರಸಿಂಹಸ್ವಾಮಿ ಅವರ ನೆನಪಿನ ಸ್ಮರಣೆಯ  ಕಾರ್ಯಕ್ರಮ, ಬೃಂದಾವನ ಚಾವಡಿಯಲ್ಲಿ ಪುಸ್ತಕ ಓದುವ ಕಾರ್ಯಕ್ರಮ "ಕರ್ವಾಲೋ". ಇನ್ನು ಹಲವಾರು ಕಾರ್ಯಕ್ರಮಗಳು ಚಾರಿಟಿಯಲ್ಲಿ, ನೊಂದವರ ಕಣ್ಣೀರು ಒರಿಸುವ ಸಣ್ಣ ಪ್ರಯತ್ನಗಳಿಗೆ ನಿಮ್ಮೆಲ್ಲರ ಸಹಕಾರ ಅಭಿನಂದದಾಯಕ.

ಕರ್ನಾಟಕದಲ್ಲಿ ಈಗಾಗಲೇ ಚುನಾವಣೆ ಬಿಸಿ ಏರುತ್ತಿದೆ. ಮೇ 13 ನೇ ತಾರೀಕು ರಾಜ್ಯದಲ್ಲಿ ಯಾವ ಪಕ್ಷ ಚುಕ್ಕಾಣಿ ಹಿಡಿಯುತ್ತದೆ ಎಂದು ಇಡೀ ದೇಶವೇ ಕಾತುರತೆಯಿಂದ ಕಾಯುತ್ತಿದೆ. ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಬಿಜೆಪಿ ಮತದಾರರ ಮನವೊಲಿಸಿಕೊಳ್ಳಲು ಪ್ರಯತ್ನಿಸಿದೆ. ಕಾಂಗ್ರೆಸ್ ಪಕ್ಷ ಶ್ರೀ ಸಿದ್ದರಾಮಯ್ಯ / ಡಿ ಕೆ ಶಿವಕುಮಾರ್ ನೇತೃತ್ವದಲ್ಲಿ ರಣರಂಗದ ರೂಪುರೇಷೆಗಳನ್ನು ಹೆಣೆಯುತ್ತಿದೆ. ಪ್ರಾದೇಶಿಕ ಪಕ್ಷವಾದ ಜೆಡಿಎಸ್ ಸಹ ಶ್ರೀ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ರಾಷ್ಟ್ರೀಯ ಪಕ್ಷಗಳ ಚಕ್ರವ್ಯೂಹ ಬೇಧಿಸಿ king maker ಆಗುವ ಕನಸುಗಳೊಂದಿಗೆ ತಮ್ಮ ಪಡೆಯನ್ನು ಸಿದ್ದಗೊಳಿಸತೊಡಗಿದೆ.. ಇದೆಲ್ಲದರ ನಡುವೆ ರಾಷ್ಟ್ರೀಯ ನಾಯಕರ ಪಡೆಗಳು ಇನ್ನೊಂದು ತಿಂಗಳು ಕರ್ನಾಟಕದಲ್ಲಿ ಜಾಂಡಾ ಹೂಡಿ ಮತದಾರರ ಮನ ಒಲೈಸುವ ಕೆಲಸ ಮಾಡಲಿದ್ದಾರೆ.  ಈಗಾಗಲೇ ಮೈಸೂರು - ಬೆಂಗಳೂರು ನಡುವೆ ಷಷ್ಟ- ಪಥದ ರಸ್ತೆ, ಹಾಗು ಭಾರತದ ಈಶಾನ್ಯ ರಾಜ್ಯಗಳದ ನಾಗಾಲ್ಯಾಂಡ್ , ತ್ರಿಪುರ , ಮೇಘಾಲಯ ಚುನಾವಣೆಯ ಗೆಲುವಿನ ಬೆನ್ನಲ್ಲೇ ಪ್ರಧಾನಿ ಶ್ರೀನರೇಂದ್ರ ಮೋದಿ ಅವರು ಕರ್ನಾಟಕದ ಸಾರಸತ್ವದ ಮುನ್ನಡೆಗೆ ಹಸಿರು ನಿಶಾನೆ ತೋರಿದ್ದಾರೆ ಹಾಗು ಶ್ರೀರಾಹುಲ್ ಗಾಂಧಿ ಅವರ ಭಾರತ್ ಜೋಡೋ ಯಾತ್ರಾ , ಅವರ ಪಾರ್ಲಿಮೆಂಟ್ನಿಂದ ಆದ ಅನಿರೀಕ್ಷಿತ ನಿರ್ಗಮನ ಇನ್ನು ಹಲಾವಾರು ಘಟನೆಗಳು ಜನರ  ಒಲವು ಯಾವ ಪಕ್ಷದ ಮೇಲೆ ಇದೆ  ಎಂದು ತಿಳಿಯುವ ಕುತೂಹಲ ಸಾರ್ವಜನಿಕವಾಗಿದೆ. ನಿಮ್ಮ ಅನಿಸಿಕೆ ಏನು ಎಂದು ನಮಗೆ ತಿಳಿಸಿ ಹೇಳಿ. ಮುಂದಿನ ಭಾರಿ ನಾವು ಸೇರಿದಾಗ ಕರ್ನಾಟಕದ ನೂತನ ಮುಖ್ಯಮಂತ್ರಿಗಳ ಪ್ರಮಾಣ ವಚನ ಆಗಿರುತ್ತದೆ. ಯಾರೇ ಆದರೂ ಕನ್ನಡ ನಡೆ - ನುಡಿ - ಜಲ - ಭಾಷೆ ಸಂರಕ್ಷಣೆ ಮಾಡಿಲಿ ಎಂದು ಆಶಿಸೋಣವೇ ?

ಪ್ರಧಾನ ಸಂಪಾದಕರು
ಕೆ. ರಾಘವೇಂದ್ರ



**ಉಷಾ ಗಣಪತಿ**



**ಕೆ.ರಾಘವೇಂದ್ರ**



**ಪವಿತ್ರಾ ರಾಜೀವ್**



**ಚಂದ್ರ**



**ಗಾಯತ್ರಿ**

# ಅಧ್ಯಕ್ಷರ ಅಪೂರ್ವ ಅಂಕಣ

**ಬೃಂದಾವನದ ಬಂಧು ಬಾಂದವರಿಗೆಲ್ಲರಿಗೂ ನಮಸ್ಕಾರ ನಮಸ್ಕಾರ ನಮಸ್ಕಾರ.**

ನಮ್ಮ ಬೃಂದಾವನದ ಹೂದೋಟದಲ್ಲಿ, ವಸಂತಕಾಲದ ಸೌರಭ ಸ್ಫೂರ್ತಿಯ ಜೊತೆ, ನಿಮ್ಮೆಲ್ಲರ ಮೈತ್ರಿಯಿಂದ ಪ್ರಸನ್ನರಾದ ಅಭಿಮಾನಿಗಳ ಸಮ್ಮಿಲನದ ಸಂಭ್ರಮದಲ್ಲಿ, ಬೃಂದಾವನದ ಪ್ರಗತಿಯನ್ನು ಮುಂದುವರೆಸಲು ನಮ್ಮೆಲ್ಲರಿಗೂ ಅಪೂರ್ವ ಅವಕಾಶವನ್ನು ನೀಡಿರುವ ನಿಮ್ಮೆಲ್ಲರಿಗೂ ತುಂಬುಹೃದಯದ ಧನ್ಯವಾದಗಳು.

ಅಪೂರ್ವ ತಂಡದ ಪದಾಧಿಕಾರಿಗಳು ತಮ್ಮ-ತಮ್ಮ ಕೆಲಸ, ಕಾರ್ಯಗಳಲ್ಲಿ ತೊಡಗುತ್ತಿದ್ದಂತೆಯೇ, ಮುಂದಿನ ಕಾರ್ಯಕ್ರಮದ ಸಿದ್ಧತೆ ಭರದಿಂದ ನಡೆಯಿತು.

ಸೂರ್ಯನ ಮೊದಲ ಕಿರಣದಿಂದ ನಮ್ಮ ದಿನಚರಿ ಪ್ರಾರಂಭವಾಗುವಂತೆ, ಬೃಂದಾವನದಲ್ಲೂ ಮೊದಲ ಕಾರ್ಯಕ್ರಮವಾದ ಮಕರ ಸಂಕ್ರಾಂತಿಯ ಸಂಭ್ರಮಕ್ಕೆ ತಯಾರಿ ನಡೆಸಿದೆವು. ಈ ಸಲ ಸಂಕ್ರಾಂತಿಯ ಸೊಬಗಿನ ಜೊತೆ, ಸಾಹಿತ್ಯದ ಅಪೂರ್ವ ಸಂಗಮ, ಹಾಗೂ ಭಾರತದ ಗಣರಾಜ್ಯೋತ್ಸವವನ್ನು, ಈ-ಮುಖೇನ ಆಚರಿಸಿದೆವು. ನಮ್ಮ ಆಧ್ಯಾತ್ಮಿಕ ಬೆನ್ನೆಲುಬಾಗಿ, ಧಾರ್ಮಿಕ ನೆರಳಾಗಿರುವ ಶ್ರೀ ಕೃಷ್ಣವೃಂದಾವನದ ಗುರುಗಳಾದ ಶ್ರೀ ಯೋಗಿಂದ್ರ ಭಟ್ ಅವರ ಹಿತವಚನದೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಿಲಾಯಿತು. ಈ ಸಲದ ವಿಶೇಷವೇನೆಂದರೆ, ನಮ್ಮ ಬೃಂದಾವನದ ಸದಸ್ಯರಿಗಾಗಿ ಏರ್ಪಡಿಸಿದ್ದ 'ಸಂಕ್ರಾಂತಿ ಸಡಗರ' ಸ್ಪರ್ಧೆಯಲ್ಲಿ ಭಾಗವಹಿಸಿ, ಸಾಗರದಾಚೆ, ಸಾವಿರಾರು ಮೈಲು ಭಾರತದಿಂದ ದೂರ ಇದ್ದರೂ, ಅಷ್ಟೇ ಅದ್ದೂರಿಯಾಗಿ ಸಂಕ್ರಾಂತಿಯನ್ನು ಬಹಳ ಸಂಭ್ರಮದಿಂದ ಆಚರಿಸಿದ ಅಪೂರ್ವ ವಿಡಿಯೊಗಳನ್ನು ನಮ್ಮ ಬೃಂದಾವನಿಗರು ಕಳುಹಿಸಿದ್ದರು.

ಬೃಂದಾವನ ಕನ್ನಡ ಕೂಟವು ಸ್ಥಳೀಯ ಹಾಗೂ ಕರುನಾಡಿನ ಸಾಹಿತಿಗಳನ್ನು ಬೃಂದಾವನದ ಕಾರ್ಯಕ್ರಮಗಳಲ್ಲಿ, ಅದರಲ್ಲೂ ಸಾಮಾನ್ಯವಾಗಿ ಗಣೇಶೋತ್ಸವದಂದು ಬರಮಾಡಿಸಿಕೊಳ್ಳುವುದು ರೂಢಿ ಇತ್ತು. ಜೊತೆಗೆ, ನಾವು ಪ್ರಕಟಿಸುತ್ತಿದ್ದ ಬೃಂದಾವನ ವಾಣಿ -ದ್ವೈಮಾಸಿಕ ಸಂಚಿಕೆಯನ್ನು ಓದಿ ಆನಂದಿಸುವ ಅವಕಾಶವೂ ಓದುಗರಿಗೆ ಇತ್ತು. ಆದರೆ ಸಾಹಿತ್ಯಾಸಕ್ತರಿಗಾಗಿ ವರ್ಷಪೂರ್ತಿ ಸಾಹಿತ್ಯಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಆಯೋಜಿಸುವ ಸದುದ್ದೇಶದೊಂದಿಗೆ, ಹಾಗೂ ಬೃಂದಾವನ ಕನ್ನಡ ಕಲಿಸೋಣ ಶಾಲೆಗಳ ಮಕ್ಕಳಲ್ಲಿ, ಕನ್ನಡ ಭಾಷೆಯ ಮೇಲೆ ಒಲವು, ಆಸಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ, ಬೃಂದಾವನ ಕನ್ನಡ ಕಾರಂಜಿಯ ಅಪೂರ್ವ ಸಾಹಿತ್ಯ ವೇದಿಕೆ ಸೃಷ್ಟಿಯಾಯಿತು. ಈ ವೇದಿಕೆಯನ್ನು, ಇದೇ ಸಂಕ್ರಾಂತಿಯ ಶುಭ ಸಮಾರಂಭದಲ್ಲಿ ಹವ್ಯಾಸಿ ನಾಟಕಕಾರರಾದ ಶ್ರೀ ಎಚ್. ಬಿ. ಗೋವಿಂದನ್ ಅವರು ಉದ್ಘಾಟಿಸಿದರು. ಇದನ್ನು ಮುಂದುವರೆಸುತ್ತಾ, ಫೆಬ್ರುವರಿ ತಿಂಗಳಿನಲ್ಲಿ, ಬೃಂದಾವನದಲ್ಲೆಲ್ಲರೂ, ಶ್ರೀ ಕೆ. ಎಸ್. ನರಸಿಂಹಸ್ವಾಮಿಯವರ ಸ್ಮರಣೆಯಲ್ಲಿ, "ನಿನ್ನೊಲುಮೆಯಿಂದಲೆ" ಕಾರ್ಯಕ್ರಮದಲ್ಲಿ ಭಾಗವಹಿಸಿದರು.

"ನಾನು ಸ್ವರ್ಗ ಹೇಗಿರುತ್ತದೆ ಎಂದು ಊಹಿಸಿಕೊಂಡಾಗ, ಅದೊಂದು ಪುಸ್ತಕಾಲಯದಂತೆ ಕಾಣಿಸುತ್ತದೆ" ಎಂಬ ಜಾರ್ಜ್ ಲೂಯಿಸ್ ಬೋರ್ಜಸ್ ಅವರ ಮಾತಿನಂತೆ, ಪುಸ್ತಕಗಳು ನೀಡುವ ಸುಖ, ಓದುಗನಿಗೆ ಮಾತ್ರ ಅರ್ಥವಾಗಲು ಸಾಧ್ಯ

ವೃತ್ತಿಗೆ ಸಂಬಂಧಿತ ಲೇಖನಗಳು, ಚುಟುಕು ಬರಹಗಳನ್ನು ಓದುವವಳು ನಾನು. ದಿನನಿತ್ಯ ಹಲವು ಸುದ್ದಿ-ಸಮಾಚಾರಗಳ ಈ -ಪತ್ರಿಕೆಗಳನ್ನು ಓದುವ ಅಭ್ಯಾಸ ಇಟ್ಟುಕೊಂಡವಳು ನಾನು. ಹಲವಾರು ಪುಸ್ತಕಗಳನ್ನು ಓದಲು ಶುರು ಮಾಡಿ, ಒಂದೂ ಪುಸ್ತಕವನ್ನು ಓದಿ ಪೂರ್ಣಗೊಳಿಸದೇ ಇರಲು, ಹಲವು ಕಾರಣಗಳನ್ನೂ ಕೊಟ್ಟಿರುವುದೂ ಉಂಟು.  ಓದುವ ಆಸಕ್ತಿಯಿದ್ದೂ, ತಮ್ಮ ಕ್ರಿಯಾತ್ಮಕ ದಿನಚರಿಯಲ್ಲಿ, ಪುಸ್ತಕ ಓದಿ ಪೂರ್ಣಗೊಳಿಸದೇ ಇರುವ ನನ್ನಂತವರನ್ನು, ಪುಸ್ತಕವನ್ನು ಓದಿ ಮುಗಿಸಲು ಉತ್ತೇಜನ ನೀಡುವ ಉದ್ದೇಶದಿಂದ, ಕಳೆದ ತಿಂಗಳು, ಬೃಂದಾವನದಲ್ಲಿ ಪುಸ್ತಕ ಚಾವಡಿ ಆರಂಭಗೊಂಡಿದೆ. ಈ ಪುಸ್ತಕ ಚಾವಡಿಯಲ್ಲಿ ಮೊದಲನೆಯ ಬಾರಿ ಭೇಟಿಯಾದಾಗ , ಹವ್ಯಾಸಿ ಓದುಗರು, ಶ್ರೀ ಪೂರ್ಣ ಚಂದ್ರ ತೇಜಸ್ವಿ ಅವರ ಲೇಖನ ಶೈಲಿಯ ಬಗ್ಗೆ ಹಾಗೂ  ಅವರ ಕರ್ವಾಲೋ ಪುಸ್ತಕದ ಬಗ್ಗೆ ಅವಲೋಕನ ನಡೆಸಿದರು. ತಮ್ಮ ಶಾಲಾ-ಕಾಲೇಜುಗಳಲ್ಲಿ ಓದಿದ ನೆನಪುಗಳನ್ನು ಸವಿಯುತ್ತಾ ಈ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು..

ಬೃಂದಾವನಿಗರು, ಸಹಾಯ ಹಸ್ತ ನೀಡುವುದರಲ್ಲಿ ಎತ್ತಿದ ಕೈ. ಸಂಕ್ರಾಂತಿಯ ಎಳ್ಳು, ಬೆಲ್ಲ ನೀಡುವ ಜೊತೆಗೆ, ನಮ್ಮ ಬೃಂದಾವನದ ಚಾರಿಟಿ ಯೋಜನೆಯಲ್ಲಿ, ೧೦ ಕೈ-ಕೃತಕ ಕಾಲುಗಳನ್ನು ಅಳವಡಿಸುವ ಗುರಿಯನ್ನಿಟ್ಟುಕೊಂಡಿದ್ದೆವು. ಶ್ರೀ ನಾರಾಯಣ ಸಂಸ್ಥೆಯ ಜೊತೆಗೆ, ನೀವೆಲ್ಲರೂ, ಬಲಗಾಲಿಟ್ಟು, ಬಲಗೈ ಜೋಡಿಸಿ ದೇಣಿಗೆ ನೀಡಿದ ಫಲವಾಗಿ, ಸುಮಾರು ಮೂರುಪಟ್ಟು-ಅಂದರೆ ೨೮ ಕೃತಕ ಕೈ- ಕಾಲುಗಳನ್ನು ಅಳವಡಿಸಲು ಸಾಧ್ಯವಾಯಿತು.  ನಿಮ್ಮ ಈ ಉದಾತ್ತ ಸೇವೆಗೆ ಕೃತಜ್ಞತೆ ಸಲ್ಲಿಸುತ್ತಿದ್ದೇವೆ.
ಅದರ ಜೊತೆಗೆ, ಟರ್ಕಿ ದೇಶದ ಭೂಕಂಪ ನಿರಾಶ್ರಿತರ ಸಹಾಯಾರ್ಥವಾಗಿಯೂ, ಉದಾರವಾಗಿ ಧನಸಹಾಯ ಮಾಡಿದ ತಮ್ಮೆಲ್ಲರಿಗೂ, ಹೃದಯಪೂರ್ವಕ ನಮಸ್ಕಾರಗಳು.


ಫೆಬ್ರುವರಿ ತಿಂಗಳಲ್ಲಿ ನಮ್ಮ ಬೃಂದಾವನದಲ್ಲಿ, Drive -to -dine ಸಲುವಾಗಿ ಬೃಂದಾವನದಲ್ಲಿ ದಂಪತಿಗಳು, ಸ್ನೇಹಿತರೂ, ನಿಗದಿತ ಉಪಹಾರಗೃಹಗಳಲ್ಲಿ, ಸುಮಧುರ ಸ್ನೇಹ ಸಮ್ಮಿಲನದ ಸಲುವಾಗಿ ಭೇಟಿಯಾದರು;  ಬೃಂದಾವನದ ಮಕ್ಕಳು ಪ್ರೀತಿ-ಉತ್ಸಾಹದಿಂದ ನರ್ಸಿಂಗ್ ಹೋಮ್- ನಲ್ಲಿರುವವರಿಗೆ ವ್ಯಾಲೆಂಟೈನ್ ಸಂದೇಶವನ್ನು ಕಳುಹಿಸಿದರು. ಅದನ್ನು ಸ್ವೀಕರಿಸಿದ ವಯೋವೃದ್ಧರ ಮುಖದಲ್ಲಿನ ಸಂತಸ, ನೋಡುವವರಿಗೂ  ಮುದ ನೀಡಿತು; ಯುವ ದಂಪತಿಗಳಿಗಾಗಿ "Match made in heaven " ಕಾರ್ಯಕ್ರಮದಲ್ಲಿ, ನವದಂಪತಿಗಳು ಉತ್ಸಾಹದಿಂದ ಭಾಗವಹಿಸಿ ಎಲ್ಲರಿಗೂ ಮನೋರಂಜನೆ ನೀಡಿದರು. ಅದರ ಜೊತೆಗೆ, ಬೃಂದಾವನದಲ್ಲಿ ಸುಮಾರು  ೪೦ ದಂಪತಿಗಳು ಯಾವುದೋ ಪೆಟ್ಟಿಗೆಯಲ್ಲಿ, ಈ-ಮೋಡದಲ್ಲಿ, ಇನ್ನೆಲ್ಲೋ, ಅಡಗಿದ್ದ ಮದುವೆಯ ಚಿತ್ರಗಳನ್ನು ಹುಡುಕಿ, ಕಳುಹಿಸಿದ್ದರು.  ಅವುಗಳನ್ನು ನಾವು ನೋಡಿ, ಯಾರು-ಯಾರು ಎಂದು ಊಹಿಸುವಷ್ಟರಲ್ಲಿ, ಎಲ್ಲರ ಆ ಸಿಹಿದಿನಗಳ ಸವಿನೆನಪುಗಳನ್ನು ಮತ್ತೆ ಮರುಕಳಿಸುವ ಅವಕಾಶ ಒದಗಿತು.

ಮಾರ್ಚ್ ತಿಂಗಳಿನ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಲುವಾಗಿ ಕನ್ನಡ ಸಿನೆಮಾತಾರೆ, ಶ್ರೀಮತಿ ಸುಮನ್ ನಗರ್ಕರ್ ಅವರು, ಮುಸ್ಸಂಜೆಯಲ್ಲಿ,  ನಮ್ಮ ಜೊತೆ ಎರಡು ತಾಸು ನಗುನಗುತ್ತಾ  ಹರಟೆ-ಪ್ರಶ್ನೋತ್ತರದಲ್ಲಿ ಕಳೆದದ್ದು, ನಮ್ಮ ಅದೃಷ್ಟ.

ಹೀಗೆಯೇ, ಯುವ ಬೃಂದಾವನ ತಂಡ "Heartfulness" ಅವರ ಜೊತೆಗೂಡಿ, ಚೊಚ್ಚಲ ಕಾರ್ಯಕ್ರಮದಲ್ಲಿ ವೈಯಕ್ತಿಕ ಬೆಳವಣಿಗೆಯ ಜೊತೆ, ಪರಿಸರ ರಕ್ಷಣೆಯ ಗುರಿಯಲ್ಲಿ ಕಾರ್ಯ ನಿರ್ವಹಿಸಿದರು. ನಮ್ಮ ಯುವ ಬೃಂದಾವನ ತಂಡ ಇನ್ನೂ ಹಲವಾರು "ಸ್ವಾಮಿ ಕಾರ್ಯ, ಸ್ವ-ಕಾರ್ಯ" ಎನ್ನುವಂತೆ, ಸ್ವಯಂ-ಸೇವೆಯ ಜೊತೆ ಪ್ರೆಸಿಡೆನ್ಶಿಯಲ್ ವಾಲಂಟಿಯರ್ ಸರ್ವಿಸ್ (PVSAward)ಪ್ರಶಸ್ತಿ ಪಡೆಯುವ ಗುರಿಯೊಂದಿಗೆ, ಇನ್ನೂ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಯೋಜನೆಯಿದೆ.

ನಮ್ಮ ಬೃಂದಾವನವು ಇರುವುದು ನಿಮ್ಮೆಲ್ಲರಿಗಾಗಿ! "ಹೊಸ ಚಿಗುರು, ಹಳೇ ಬೇರು ಕೂಡಿರಲು ಮರಸೊಬಗು" ಎನ್ನುವಂತೆ, ಬೃಂದಾವನದ ಸದಸ್ಯರಿಗಾಗಿ, ಕೆಲವು ಕಾರ್ಯಕ್ರಮಗಳನ್ನು, ನವೀಕೃತಗೊಳಿಸಿ, ಇನ್ನೂ ಕೆಲವು ಹೊಸ ಕಾರ್ಯಕ್ರಮಗಳನ್ನು ಹಮ್ಮುವ ಅಪೂರ್ವ ಹುಮ್ಮಸ್ಸಿನಿಂದ, ಈ ವರ್ಷವನ್ನು ಪ್ರಾರಂಭಿಸಿದ್ದೇವೆ. ತಾವೆಲ್ಲರೂ, ಇವುಗಳಲ್ಲಿ ಭಾಗವಹಿಸಿ, ಈ ಯೋಜನೆಗಳನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತೇವೆ.

ಎಲ್ಲಾದರೂ ಇರಿ, ಎಂತಾದರೂ ಇರಿ, ಬೃಂದಾವನ ಕಾರ್ಯಕ್ರಮಗಳಲ್ಲಿ ಭಾಗಿಯಾಗಿರಿ.
ನಮ್ಮೀ ಅಪೂರ್ವ ತಂಡವು ನಿಮ್ಮೆಲ್ಲರ ಸುಮಧುರ ಸ್ನೇಹ ಸಮ್ಮಿಲನದಿಂದ ಮುಂದುವರೆಯಲಿ ಎಂದು ಆಶಿಸುತ್ತಾ,



**ಅರ್ಚನಾ ಆಚಾರ್ಯ**
**ಅಧ್ಯಕ್ಷರು, ಅಪೂರ್ವ ತಂಡ, ಬೃಂದಾವನ, ನ್ಯೂ ಜೆರ್ಸಿ.**




KARNATAKA CULTURAL ORGANIZATION BRINDAVANA (KCOB) NJ, USA

# ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಅಹಿಂಸೆ



**ಶ್ರೀ ಯೋಗೀಂದ್ರ ಭಟ್ ಉಳಿ.** ಶ್ರೀ ಕೃಷ್ಣವೃಂದಾವನ, ನ್ಯೂಜೆರ್ಸಿ.

ನಾವು ಹಿಂಸೆಮಾಡುವವರಲ್ಲ. ಯಾರಿಗೂ ತೊಂದರೆ ಕೊಡುವವರಲ್ಲ. ನಮ್ಮ ಪಾಡಿಗೆ ನಾವು ನಿರುಪದ್ರವಿಗಳಾಗಿ ಬದುಕುತ್ತಿದ್ದೇವೆ ಎಂದು ನಾವೆಲ್ಲರೂ ಅಂದುಕೊಂಡಿರುತ್ತೇವೆ. ಆದರೆ ನಮಗೆ ಬೇರೆಯವರಿಂದ ತೊಂದರೆಯಾಗಿರುವ ಅನೇಕ ಸಂದರ್ಭಗಳನ್ನು ಮಾತ್ರ ನಾವೆಂದಿಗೂ ಮರೆಯುವುದಿಲ್ಲ. ಆಗಾಗ ನೆನಪಿಸಿಕೊಳ್ಳುತ್ತೇವೆ.

ಹಾಗೆಯೇ ನಮ್ಮ ಜೀವನಕ್ರಮವನ್ನೊಮ್ಮೆ ನಾವು ಸೂಕ್ಷ್ಮವಾಗಿ ವಿಮರ್ಶಿಸಿ ನೋಡಬೇಕು. ಆಗ ನಮ್ಮಿಂದಲೂ ಅನೇಕರಿಗೆ ಹಿಂಸೆಯಾಗಿರುವುದು, ಆಗುತ್ತಿರುವುದು ಅರಿವಿಗೆ ಬರಬಹುದು. ಮಕ್ಕಳಾಗಿರುವಾಗ ಹೆತ್ತವರಿಗೆ, ಬೆಳೆಯುವಾಗ ಒಡನಾಡಿಗಳಿಗೆ, ಶಿಕ್ಷಕರಿಗೆ, ಯೌವನದಲ್ಲಿ ಸ್ನೇಹಿತರಿಗೆ, ಬಂಧು ಮಿತ್ರರಿಗೆ, ಸಹೋದ್ಯೋಗಿಗಳಿಗೆ ಮುಂದೆ ವೃದ್ಧಾಪ್ಯದಲ್ಲಿ ಮಕ್ಕಳಿಗೆ ಹೀಗೆ ಒಂದಲ್ಲ ಒಂದು ರೀತಿಯಲ್ಲಿ ತಿಳಿದೋ ತಿಳಿಯದೆಯೋ ನಮ್ಮಿಂದಲೂ ಅನೇಕರಿಗೆ ಅನೇಕ ರೀತಿಯಲ್ಲಿ ಹಿಂಸೆಗಳು ಸಂಭವಿಸಿರಬಹುದು.

ಕನಿಷ್ಠಪಕ್ಷ ನಾವು ಕುಡಿಯುವ ನೀರು, ಉಸಿರಾಡುವ ಗಾಳಿ, ನಡೆದಾಡುವ ಮಣ್ಣಿನಲ್ಲಿರುವ ಜೀವರಾಶಿಗಳಿಗಾದರೂ ಒಂದಿನಿತು ತೊಂದರೆಯಾಗದಂತೆ ಬದುಕುವುದು ನಮ್ಮಿಂದ ಸಾಧ್ಯವೇ? ನಡೆದಾಡುವಾಗ ನಮ್ಮ ಕಾಲಡಿಯನ್ನು ನಾವೆಷ್ಟು ಗಮನಿಸುತ್ತೇವೆ? ಚೆನ್ನಾಗಿ ಸೋಸಿದ ನೀರನ್ನೇ ನಾವು ಕುದಿಸಿದರೂ ಕಣ್ಣಿಗೆ ಕಾಣದ ಅನೇಕ ಸೂಕ್ಷ್ಮ ಜೀವಿಗಳ ಮರಣವಾಗುತ್ತದಂತೆ!



Photo by Harjeetsinghnarang/Wikipedia/Creative Commons

ಅದು ಅನಿವಾರ್ಯತೆಯಿಂದ ಸಂಭವಿಸಿರಬಹುದು. ಅಥವಾ ನಮ್ಮ ಗಮನಕ್ಕೆ ಬರದೇ ಹೋಗಿರಬಹುದು. ಏನೇ ಆಗಲಿ, ನಮ್ಮಿಂದಲೂ ಇತರ ಜೀವಿಗಳಿಗೆ ತೊಂದರೆಯಾಗುತ್ತಿರುವುದಂತೂ ಪರಮಸತ್ಯ. ಪ್ರಾಯಃ ಪ್ರಪಂಚದ ವ್ಯವಸ್ಥೆಯಿರುವುದೇ ಹೀಗೆಯೇ. ಎಲ್ಲ ಜೀವಿಗಳೂ ಪರಸ್ಪರ ಪರಾವಲಂಬಿಗಳು. ಈ ಜಗತ್ತಿನಲ್ಲಿ ಯಾರಿಗೂ ಸ್ವಲ್ಪವೂ ಹಿಂಸೆಯಾಗದಂತೆ ಬದುಕುವುದು ಬಹುಶಃ ಯಾರಿಗೂ ಸಾಧ್ಯವಿಲ್ಲ.

ನೋವಾಗಬೇಕು, ನಾಶವಾಗಬೇಕು ಎಂದು ಉದ್ದೇಶಪೂರ್ವಕವಾಗಿ ಮಾಡಿದ ದುಷ್ಕೃತ್ಯಗಳನ್ನು ಮಾತ್ರ ಹಿಂಸೆ ಎನ್ನುವಂತಿಲ್ಲ. ಅನಿವಾರ್ಯವಾಗಿ, ಅಚಾತುರ್ಯದಿಂದ, ನಿರ್ಲಕ್ಷದಿಂದ ಅಥವಾ ಗೊತ್ತಿಲ್ಲದೆ ಸಂಭವಿಸುವ ಸಾವು ನೋವುಗಳೂ ಹಿಂಸೆಯೇ. ಬಿಸಿಬಿಸಿ ಎಣ್ಣೆಯನ್ನು ಉದ್ದೇಶಪೂರ್ವಕವಾಗಿ ಮೈಮೇಲೆ ಸುರಿದರೂ ಅಥವಾ ಅಚಾನಕ್ಕಾಗಿ ಕೈ ಜಾರಿ ಮೈಮೇಲೆ ಬಿದ್ದರೂ ಆಗುವ ನೋವಿನಲ್ಲಿ ವ್ಯತ್ಯಾಸವಿಲ್ಲ ತಾನೇ? ಬೂಟುಕಾಲಿನಿಂದ ಬೇಕೆಂದೇ ಒದ್ದರೂ ಅಥವಾ ಗೊತ್ತಿಲ್ಲದೆ ಒದ್ದರೂ ದೈಹಿಕವಾಗಿ ಆಗುವ ನೋವು ಮಾತ್ರ ಒಂದೇ ರೀತಿ.

ಹಿಂಸೆಯೆಂದರೆ ಪ್ರಾಣಿಹಿಂಸೆ. ನಾನು ಯಾವ ಪ್ರಾಣಿಯನ್ನೂ ಹಿಂಸಿಸಲಿಲ್ಲ. ನಾನು ಸಸ್ಯಾಹಾರಿ ಆದ್ದರಿಂದ ಅಹಿಂಸಾಪರ ಎನ್ನುವುದು ಕೆಲವರ ಅಭಿಮತ. ಆದರೆ ಕೇವಲ ಆಹಾರಕ್ರಮದಿಂದ ಹಿಂಸೆ-ಅಹಿಂಸೆಗಳನ್ನು ನಿರ್ಧರಿಸುವುದು ಸಮಂಜಸವಲ್ಲ. ಏಕೆಂದರೆ ನಾನು ಯಾವಪ್ರಾಣಿಯನ್ನೂ ಕೊಲ್ಲಲಿಲ್ಲ . ಸತ್ತ ಪ್ರಾಣಿಯ ಮಾಂಸವನ್ನಷ್ಟೇ ತಿಂದೆ ಎಂದು ಮಾಂಸಾಹಾರಿಗಳೂ ತಮ್ಮ ಅಹಿಂಸಾಪರತೆಯನ್ನು ಸಮರ್ಥಿಸಿಕೊಳ್ಳಬಹುದಲ್ಲವೇ? ಹಾಗೆಯೇ ನಾವೆಲ್ಲರೂ ಬದುಕಲು ಅವಲಂಬಿಸಿರುವ ಧಾನ್ಯ-ಸಸ್ಯಗಳಿಗೂ ಜೀವವಿದೆಯಲ್ಲವೇ? ಕತ್ತರಿಸುವ, ಬೇಯಿಸುವ, ಕುಟ್ಟುವ, ಅರೆಯುವ ಇತ್ಯಾದಿ ಪ್ರಕ್ರಿಯೆಗಳಿಂದ ಅವುಗಳಿಗೆ ನೋವು ನೀಡುವುದು ಕೂಡ ಹಿಂಸೆಯೇ ಎನ್ನುತ್ತವೆ ನಮ್ಮ ಶಾಸ್ತ್ರ ಗ್ರಂಥಗಳು! ' ಖಂಡಿನೀ ಪೇಷಿಣೀ ಚುಲ್ಲೀ ಉದಕುಂಭೀ ಚ ಮಾರ್ಜನೀ, ಪಂಚ ಸೂನಾ ಗೃಹಸ್ಥಸ್ಯ ತಾಭಿಃ ಸ್ವರ್ಗಂ ನ ವಿಂದತಿ'

ಬಹುಶಃ ಈ ಜಗತ್ತಿನಲ್ಲಿ ನಾವು ಬದುಕಲು ನಡೆಸುವ ಎಲ್ಲ ಪ್ರಕ್ರಿಯೆಗಳೂ ಒಂದು ರೀತಿ ವ್ಯಾಪಾರವಿದ್ದಂತೆ. ಒಬ್ಬನಿಗೆ ಲಾಭವಾಯಿತೆಂದರೆ ಇನ್ನೊಬ್ಬರಿಗೆ ನಷ್ಟವಾಗಲೇ ಬೇಕು. ನಮ್ಮ ಸಂತಸವನ್ನು ಸಂಭ್ರಮಿಸುವ ಭರದಲ್ಲಿಇತರರಿಗಾಗುವ ನೋವನ್ನು ನಾವು ಗಮನಿಸುವುದೇ ಇಲ್ಲ. ನಾವು ಗೆದ್ದೆವೆಂದು ಬೀಗುತ್ತಿರುವಾಗಲೇ ಪಕ್ಕದಲ್ಲಿ ಇನ್ನೊಬ್ಬನು ಸೋತೆನೆಂದು ಕೊರಗುತ್ತಿರುತ್ತಾನೆ.

ಜೀವನದಲ್ಲಿ ಬಹಳ ಕಷ್ಟಪಟ್ಟು ನಾವೊಂದು ಮನೆಕಟ್ಟಿದೆವು, ನಮ್ಮ ಸಂಸಾರಕ್ಕೆ ಇನ್ನು ನೆಮ್ಮದಿ ಎಂದು ನಾವು ಸಂತಸಪಡುವಾಗಲೇ ಅದೆಷ್ಟೋ ಸಣ್ಣ ಪುಟ್ಟ ಜೀವಿಗಳು ತಮ್ಮ ನೆಲೆಯನ್ನು ಕಳೆದುಕೊಂಡು ದುಃಖದಿಂದ ಪರಿತಪಿಸುತ್ತವೆಯಂತೆ. ಏಕೆಂದರೆ ನಮ್ಮ ಒಂದು ಮನೆಗೋಸ್ಕರ ನಾವು ಭೂಮಿ ಅಗೆಯುವಾಗ, ಕಲ್ಲು ಒಡೆಯುವಾಗ, ಮರ ಕಡಿಯುವಾಗ ನೂರಾರು ಮುಗ್ಧ ಜೀವಿಗಳ , ಪ್ರಾಣಿ ಪಕ್ಷಿಗಳ ಮನೆಗಳನ್ನು ನಾವು ನಾಶ ಮಾಡಿರುತ್ತೇವೆ! ನಮ್ಮ ನೆಮ್ಮದಿಗೋಸ್ಕರ ಅವುಗಳ ಸಂಸಾರದ ಸಂತಸವನ್ನು ಕಿತ್ತುಕೊಂಡಿರುತ್ತೇವೆ!

ಎಷ್ಟೇ ದೊಡ್ಡ ಅಹಿಂಸಾವಾದಿಯಾದರೂ ತನ್ನ ಮನೆಯೊಳಗೆ ಇರುವೆ, ಇಲಿ, ಜಿರಳೆಗಳು ತುಂಬಿಕೊಂಡರೆ ನಿರ್ದಾಕ್ಷಿಣ್ಯವಾಗಿ ವಿಷವನ್ನುಣಿಸಿ ನಿರ್ನಾಮಗೊಳಿಸಿಬಿಡುತ್ತಾನೆ. ತನಗೆ ಕಚ್ಚಿದ ಸೊಳ್ಳೆಯನ್ನು ಅಲ್ಲಿಯೇ ಹಿಚುಕಿ ಸಾಯಿಸುತ್ತಾನೆ. ತನ್ನ ಮೈಯೊಳಗೆ ಸೇರಿ ಅನಾರೋಗ್ಯಕ್ಕೆ ಕಾರಣವಾದ ವೈರಾಣುಗಳನ್ನು ಸಂಹರಿಸಲು ಖಂಡಿತವಾಗಿಯೂ ಔಷಧಿಯನ್ನು ಸೇವಿಸುತ್ತಾನೆ. ಪ್ರತಿಯೊಬ್ಬನೂ ತನ್ನ ಆತ್ಮರಕ್ಷಣೆಗೆ ಪ್ರಯತ್ನಿಸಲೇ ಬೇಕು. ಅದು ಆಪದ್ಧರ್ಮ. ತಾನು ಬದುಕಿದ್ದರೆ ತಾನೆ ಅಹಿಂಸಾದಿ ಧರ್ಮಗಳ ಆಚರಣೆ?


ಭೂಮಿಯನ್ನು ಬಗೆಯದೆ ಬಿತ್ತನೆ ಸಾಧ್ಯವಿಲ್ಲ. ಕಳೆ ಕೀಳದೆ ಬೆಳೆಯನ್ನುಳಿಸುವುದು ಸಾಧ್ಯವಿಲ್ಲ. ಕಬ್ಬನ್ನು ಕಡಿಯದೆ ಸಕ್ಕರೆಯಿಲ್ಲ. ಕೆಚ್ಚಲನ್ನು ಹಿಂಡದೇ ಹಾಲಿಲ್ಲ. ತಾಯಿಯನ್ನು ನೋಯಿಸದೆ ಹುಟ್ಟೇ ಇಲ್ಲ. ಒಟ್ಟಿನಲ್ಲಿ ಹಿಂಸೆಯಿಲ್ಲದ ಬದುಕೇ ಈ ಭೂಮಿಯಲ್ಲಿಲ್ಲ. ಆದರೆ ಅದರ ಪ್ರಮಾಣವನ್ನು ಕಡಿಮೆಗೊಳಿಸಲು ನಾವು ಪ್ರಾಮಾಣಿಕವಾಗಿ ಪ್ರಯತ್ನಿಸಬಹುದು. ಅದಷ್ಟೇ ನಾವು ನಮ್ಮ ಜೀವನದಲ್ಲಿ ಪಾಲಿಸಬಹುದಾದ ಅಹಿಂಸೆ.

ನಾವು ಮಗುವಾಗಿದ್ದಾಗ ನಮ್ಮನ್ನು ಹೆತ್ತು ಹೊತ್ತ ತಾಯಿಯ ಮೇಲೆ ನಮ್ಮ ಪೂರ ಭಾರವನ್ನಿರಿಸಿ, ಹಠಮಾಡಿ, ಕಾಡಿದ್ದು, ನಿದ್ದೆಗೆಡಿಸಿದ್ದು ಹಿಂಸೆಯೆಂದು ನಮಗೆ ಅನಿಸಿರಲಿಲ್ಲ. ಅರ್ಥವಾಗಿರಲಿಲ್ಲ. ಆದರೆ ನಾವು ದೊಡ್ಡವರಾದ ಮೇಲೆ ಅವರ ಸುಖ ಸಂತೋಷದ, ನೆಮ್ಮದಿಯ ಜವಾಬ್ದಾರಿಯನ್ನು ಹೊತ್ತು ಕೊಳ್ಳುವುದೇ ಆ ಹಿಂಸೆಗೆ ಪ್ರತಿಯಾಗಿ ನಾವು ಮಾಡಿಕೊಳ್ಳಬಹುದಾದ ಪರಿಹಾರ. ಮನೆಕಟ್ಟಿದಾಗ, ಅಹಾರ ತಯಾರಿಸುವಾಗ ನಮ್ಮಿಂದ ನಡೆದ ಹಿಂಸೆಗೆ ಪ್ರತಿಯಾಗಿ ನಿತ್ಯವೂ ಸಾಧ್ಯವಾದಷ್ಟು ಜೀವಿಗಳ, ಪ್ರಾಣಿ ಪಕ್ಷಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುವುದು, ಕಡಿದದ್ದಕ್ಕಿಂತ ಹೆಚ್ಚಿನ ಗಿಡ ಮರಗಳನ್ನು ನೆಟ್ಟು ಪೋಷಿಸುವುದು ಇತ್ಯಾದಿ ಸೇವೆಗಳೇ ನಮ್ಮ ಅನಿವಾರ್ಯ ಹಿಂಸಾಚರಣೆಗಳಿಗೆ ಪ್ರತಿಯಾಗಿ ನಾವು ಮಾಡಿಕೊಳ್ಳ ಬಹುದಾದ ಪ್ರಾಯಶ್ಚಿತ್ತ.

ಹೀಗೆ ನಮಗೋಸ್ಕರ ಕಷ್ಟಪಟ್ಟವರನ್ನು, ತ್ಯಾಗಮಾಡಿದವರನ್ನು ಸ್ಮರಿಸಿ ಸಕಾಲದಲ್ಲಿ ಅವರಿಗೆ ನೆರವಾಗುವುದು ಪ್ರತ್ಯುಪಕಾರವಾದರೆ, ಯಾವುದೇ ಫಲಾಪೇಕ್ಷೆಯಿಲ್ಲದ ಇತರರ ನೆಮ್ಮದಿಗೋಸ್ಕರ ಯಥಾಶಕ್ತಿ ನಮ್ಮ ಸುಖ ಸಂತೋಷಗಳನ್ನು ತ್ಯಾಗ ಮಾಡುವುದೇ ನಿಜವಾದ ಮನುಷ್ಯ ಧರ್ಮ. ಅಹಿಂಸೆಯ ಮರ್ಮ.


ಹಿನ್ನೋಟ
ಚೈತ್ರದ ಭೃಂಗ......

# ಅಪೂರ್ವ ಸಂಕ್ರಾಂತಿ



**ಸತ್ಯನಾರಾಯಣ್ ಕೃಷ್ಣಮೂರ್ತಿ, ನ್ಯೂಜೆರ್ಸಿ**

"ಎಳ್ಳು ಬೆಲ್ಲ ಬೀರಿ ಒಳ್ಳೆ ಮಾತಾಡೋಣ"! ಆಹಾ ಎಷ್ಟು ಅರ್ಥಪೂರ್ಣ ವಾದ ನುಡಿ ಇದು! ಸೂರ್ಯ ಮಕರ ರಾಶಿಗೆ ಪ್ರವೇಶಿಸಿದ ಈ ಕ್ಷಣ ಮಕರ ಸಂಕ್ರಮಣ! ಭೂದೇವಿಗೆ ನಮಿಸಿ, ಬೆಳೆದ ಬೆಳೆಗಳನ್ನು ದೇವರಿಗೆ ಸಮರ್ಪಿಸಿ, ಬಂಧು ಬಳಗದೊಂದಿಗೆ ಹಂಚಿಕೊಂಡು, ಸದಾ ಒಳ್ಳೆಯ ಮಾತುಗಳನ್ನೇ ಆಡುತ್ತಾ ಸಂತೋಷ ಪಡುವ ಸಂಭ್ರಮದ ಈ ದಿನ ಮಕರ ಸಂಕ್ರಾಂತಿ. ಎಳ್ಳು ಬೆಲ್ಲ ಬೀರುತ್ತಾ ಆಡುವ ಈ ಮಾತು ನಮ್ಮ ಕರ್ನಾಟಕದ ಮನೆ ಮನೆಗಳಲ್ಲೂ ಚಿರಪರಿಚಿತ ! ಮಕರ ಸಂಕ್ರಾಂತಿ ಕರ್ನಾಟಕದಲ್ಲಿ ಮಾತ್ರವಲ್ಲ ದೇಶದ ವಿವಿಧ ಭಾಗಗಳಲ್ಲಿ ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತದೆ. ಮತ್ತು ಆಚರಿಸಲ್ಪಡುತ್ತದೆ. ಪ್ರತಿವರ್ಷ ಜನವರಿ 14 ಅಥವಾ 15 ರಂದು ಬರುವ ಸಂಕ್ರಾಂತಿ, ಕೇವಲ ಸುಗ್ಗಿಯ ಕಾಲವಷ್ಟೇ ಅಲ್ಲ ಚಳಿಗಾಲದ ಮಬ್ಬು ಕಾರ್ಮೋಡಗಳನ್ನು ಚದುರಿಸಿ, ಸೂರ್ಯನ ಕಾಂತಿಯಿಂದ ಬೆಳಕನ್ನು, ಬಿಸಿಲನ್ನು ನಿರೀಕ್ಷಿಸುವ ಗಿಡ-ಮರ, ಪ್ರಾಣಿ-ಪಕ್ಷಿಗಳಾದಿಯಾಗಿ ನಮ್ಮೆಲ್ಲರ ಮನಗಳನ್ನು ಹಿಗ್ಗಿಸುವ ಕಾಲವು ಹೌದು.

ಇದೇ ಜನವರಿ ಮಾಸದಲ್ಲಿ ಬರುವ ಇನ್ನೊಂದು ಹಬ್ಬವೆಂದರೆ, ಭಾರತದ ಗಣ ರಾಜ್ಯೋತ್ಸವ! ಸಂಕ್ರಾಂತಿ, ಸಾಂಪ್ರಾದಾಯಿಕ ಹಬ್ಬವಾದರೆ, ಗಣತಂತ್ರ ದಿವಸ ಸಾಂವಿಧಾನಿಕ ಹಬ್ಬ! ನಮ್ಮ ಹೆಮ್ಮೆಯ ಭಾರತ ರಾಷ್ಟ್ರವು, ಸಂವಿಧಾನವನ್ನು ಅಧಿಕೃತವಾಗಿ ಜಾರಿಗೊಳಿಸಿ ಅಳವಡಿಸಿಕೊಂಡ ಮಹಾನ್ ದಿನ!

ಪ್ರತಿ ವರ್ಷವೂ ಬರುವ ಈ ಸಂಕ್ರಾಂತಿ ಹಾಗೂ 74 ನೇ ಗಣರಾಜ್ಯೋತ್ಸವವನ್ನು, ಹೊಸ ವರ್ಷಕ್ಕೆ ಹೊಸ ಮುನ್ನುಡಿ ಬರೆವಂತೆ ಅಮೆರಿಕಾದ ನ್ಯೂ ಜೆರ್ಸಿಯ ಬೃಂದಾವನ ಕನ್ನಡ ಕೂಟ ಬಹಳ ಅಪೂರ್ವವಾಗಿ ಮತ್ತು ಅರ್ಥಪೂರ್ಣವಾಗಿ ಜನವರಿ 29, 2023 ರಂದು ಆಚರಿಸಿತು. ಇದು 2023 ಮತ್ತು 2024 ರ ಅವಧಿಗೆ ಬೃಂದಾವನ ಕನ್ನಡ ಕೂಟದ ಸಾರಥ್ಯ ವಹಿಸಿರುವ "ಅಪೂರ್ವ" ತಂಡದ ಚೊಚ್ಚಲ ಕಾರ್ಯಕ್ರಮವೂ ಹೌದು! ನೂತನ ತಂಡದ ಅಧ್ಯಕ್ಷರಾದ ಶ್ರೀಮತಿ ಅರ್ಚನಾ ಆಚಾರ್ಯ ಅವರು ಈ ಕಾರ್ಯಕ್ರಮದ ನಿರೂಪಣೆಯ ಜವಾಬ್ದಾರಿಯನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದರು. ಸಕಲ ಕಲಾ ನೈಪುಣ್ಯರಾದ ಇವರು, ತಮ್ಮ ಕೋಮಲ ಕಂಠದಲ್ಲಿ ವಿಘ್ನನಿವಾರಕನಾದ ಶ್ರೀ ವಿಘ್ನೇಶ್ವರನ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಿದರು. Zoom ನಲ್ಲಿ ಬಿತ್ತರಗೊಂಡ ಈ ಕಾರ್ಯಕ್ರಮ, Facebook ಮತ್ತು Youtube ಚಾನೆಲ್ ಗಳಲ್ಲೂ ಏಕಕಾಲದಲ್ಲಿ ಪ್ರಸಾರವಾಗುತ್ತಿತ್ತು.



ಬೃಂದಾವನ ಕನ್ನಡ ಕೂಟದ ಮಕ್ಕಳು ಎರಡೂ ದೇಶಗಳ ರಾಷ್ಟ್ರಗೀತೆಯನ್ನು ಹಾಡಿ, ಸಾವಿರಾರು ಮೈಲು ದೂರದ ಹೊರನಾಡಿನಲ್ಲಿದ್ದರೂ ಕರುನಾಡ ಕಂಪನ್ನು ಎಲ್ಲೆಡೆ ಪಸರಿಸುವಂತೆ, ಬೃಂದಾವನ ಸಂಕೇತ ಗೀತೆಯಾದ "ಕನ್ನಡದ ಕುಲದೇವಿ ಕಾಪಾಡು ಬಾ ತಾಯೆ" ಗೀತೆಯನ್ನು ಸುಶ್ರಾವ್ಯವಾಗಿ ಹಾಡಿದ್ದು ಕಾರ್ಯಕ್ರಮಕ್ಕೆ ನಾಂದಿಯಾಗಿ ವೀಕ್ಷಕರ ಹೃದಯವನ್ನು ಗೆದ್ದಿತು.



ಪದ್ಧತಿಯನ್ನು ಹಲವಾರು ವರ್ಷಗಳಿಂದ ರೂಢಿಸಿಕೊಂಡು ಬಂದಿದೆ. ಆಧ್ಯಾತ್ಮಿಕ ಬೆನ್ನೆಲುಬಾಗಿ, ಧಾರ್ಮಿಕ ನೆರಳಾಗಿ, ತಮ್ಮ ಜ್ಞಾನ ಜ್ಯೋತಿಯ ಬೆಳಕಿನಿಂದ ಯಾವಾಗಲೂ ಸನ್ಮಾರ್ಗದರ್ಶನ ನೀಡುವ ನ್ಯೂ ಜೆರ್ಸಿಯ ಶ್ರೀ ಕೃಷ್ಣ ವೃಂದಾವನ ದ ಗುರುಗಳಾದ ಶ್ರೀ ಯೋಗಿಂದ್ರ ಭಟ್ ಅವರು ನೂತನ ತಂಡಕ್ಕೆ ಹಾಗು ಇಲ್ಲಿನ ಎಲ್ಲ ಸದಸ್ಯರಿಗೂ ಆಶೀರ್ವಚನವನ್ನು ನೀಡಿದರು. ಸಂಕ್ರಾಂತಿ ಹಬ್ಬದ ಸಾಂಪ್ರದಾಯಿಕ ಆಚರಣೆಗಳ ಮೂಲ ಉದ್ದೇಶವನ್ನು ಬಹಳ ವೈಜ್ಞಾನಿಕವಾಗಿ, ತರ್ಕಬದ್ಧವಾಗಿ, ಚಿಕ್ಕದಾಗಿಯಾದರೂ ಬಹಳ ಚೊಕ್ಕದಾಗಿ ಮನಸ್ಸುಗಳಿಗೆ ನಾಟುವಂತೆ ತಿಳಿ ಹೇಳಿದರು. ನಮ್ಮ ಪೂರ್ವಜರು ಸೂರ್ಯನ ಸುತ್ತ ಭೂಮಿಯ ಪರಿಕ್ರಮಣಿಸುವ ಒಂದು ವರ್ಷ ಕಾಲವನ್ನು ಎರಡು ಭಾಗ - ದಕ್ಷಿಣಾಯಣ ಮತ್ತು ಉತ್ತರಾಯಣಗಳಾಗಿ ವಿಂಗಡಿಸಿದ್ದಾರೆ.

ಸಂಕ್ರಾಂತಿಯಿಂದ ಶುರುವಾಗುವ ಉತ್ತರಾಯಣ ಕಾಲದಲ್ಲಿ, ಸೂರ್ಯನ ಪ್ರಖರತೆ ದಿನೇ ದಿನೇ ಆರು ತಿಂಗಳುಗಳ ಕಾಲ ಹೆಚ್ಚಾಗುತ್ತಾ ಹೋಗುತ್ತದೆ. ಇದನ್ನು ಸಮತೋಲನ ಮಾಡಿಸುವ ದಕ್ಷಿಣಾಯಣ ಕಾಲವು ಸಂಕ್ರಾಂತಿಯ ಹಿಂದಿನ ದಿನಕ್ಕೆ ಮುಗಿಯುತ್ತದೆ. ನಮ್ಮ ಜೀವನದಲ್ಲೂ ಕಷ್ಟ-ಸುಖ, ಸೋಲು-ಗೆಲುವು, ನೋವು-ನಲಿವು ಸಮತೋಲನದಿಂದ ಕೂಡಿರುತ್ತದೆ. ಇವು ಯಾವುದೇ ಬಂದಾಗಲೂ ನಾವು ಸಮಚಿತ್ತದಿಂದ ಸ್ವೀಕರಿಸಿ, ಸಂಕ್ರಾಂತಿಯ ಸಂದರ್ಭದಲ್ಲಿಎಳ್ಳು ಬೆಲ್ಲವನ್ನು ಬೀರುವಂತೆ ಸುಖ ಸಂತೋಷಗಳನ್ನು ನಮ್ಮ ಪ್ರೀತಿ ಪಾತ್ರರ ಜೊತೆ ಸದಾ ಹಂಚಿಕೊಳ್ಳಬೇಕೆಂದು ಹೇಳಿದರು. ಎಳ್ ಮತ್ತು ನೆಯ್ ಪದಗಳ ಸಂಧಿಯಿಂದಾಗಿ ಎಣ್ಣೆ ಪದ ಹುಟ್ಟಿಕೊಂಡಿತು.  ಎಳ್ ಅಂದರೆ ಎಳ್ಳು ಮತ್ತು ನೆಯ್ ಅಂದರೆ ಜಿಡ್ಡು. ಎಳ್ಳಿನ ಜಿಡ್ಡೆ ಈ ಎಣ್ಣೆ! ಋಣಾತ್ಮಕ ಅಂಶಗಳನ್ನು ಹೊಡೆದೋಡಿಸುವ ಶಕ್ತಿ ಈ ಎಳ್ಳಿಗಿದೆ. ಹಬ್ಬಗಳ ದಿನ, ಮೈ ಎಲ್ಲಾ ಎಣ್ಣೆ ಹಚ್ಚಿಕೊಂಡು ಅಭ್ಯಂಜನ ಸ್ನಾನ ಮಾಡಿದಾಗ ದೇಹ ಶುಭ್ರವಾಗುತ್ತದೆ. ಇದೇ ಎಣ್ಣೆಯು ದೀಪವನ್ನು ಬೆಳಗುವ ದಿವ್ಯ ಇಂಧನವಾಗಿಯೂ ಉಪಯೋಗಿಸಲ್ಪಡುತ್ತದೆ. ಈ ಎಳ್ಳಿನಲ್ಲಿರುವ ಜಿಡ್ಡಿನ ಅಥವಾ ಅಂಟಿನ ಅಂಶ, ಜೀವನದಲ್ಲಿ ನಮ್ಮ ಬಂಧು ಮಿತ್ರರೊಡನೆ ಬಾಂಧವ್ಯ ಹಿಡಿದಿಟ್ಟುಕೊಳ್ಳುವ ತತ್ವವನ್ನು ಸಾರುತ್ತದೆ. ಇಂತಹ ಎಳ್ಳನ್ನು ಬೀರಿದಾಗ, ಇದು ನಮ್ಮ ಸಂಬಂಧವನ್ನು ವೃದ್ಧಿಸುವ ಹಾಗು ಜೀವನದಲ್ಲಿ ಬೆಳಕನ್ನು ಹೆಚ್ಚಿಸುವ ಧನಾತ್ಮಕ ಅಂಶವನ್ನು ತೋರುತ್ತದೆ ಎಂದು ಬಹಳ ಮನೋಜ್ಞವಾಗಿ ವಿವರಿಸಿ, ನೂತನ ತಂಡದ ಅಪೂರ್ವ ಯಶಸ್ಸಿಗೆ ಶುಭ ಹಾರೈಸಿದರು.



ಬೃಂದಾವನ ಕನ್ನಡ ಕೂಟದ ಮಕ್ಕಳು ಎರಡೂ ದೇಶಗಳ ರಾಷ್ಟ್ರಗೀತೆಯನ್ನು ಹಾಡಿ, ಸಾವಿರಾರು ಮೈಲು ದೂರದ ಹೊರನಾಡಿನಲ್ಲಿದ್ದರೂ ಕರುನಾಡ ಕಂಪನ್ನು ಎಲ್ಲೆಡೆ ಪಸರಿಸುವಂತೆ, ಬೃಂದಾವನ ಸಂಕೇತ ಗೀತೆಯಾದ "ಕನ್ನಡದ ಕುಲದೇವಿ ಕಾಪಾಡು ಬಾ ತಾಯೆ" ಗೀತೆಯನ್ನು ಸುಶ್ರಾವ್ಯವಾಗಿ ಹಾಡಿದ್ದು ಕಾರ್ಯಕ್ರಮಕ್ಕೆ ನಾಂದಿಯಾಗಿ ವೀಕ್ಷಕರ ಹೃದಯವನ್ನು ಗೆದ್ದಿತು.



ಬೃಂದಾವನ ಕನ್ನಡ ಕೂಟದ ಅನೇಕ ಸದಸ್ಯರು, ತಮ್ಮ-ತಮ್ಮ ಮನೆಗಳಲ್ಲಿ ಮನೆಗಳಲ್ಲಿ, ಹೊಸ ಬಟ್ಟೆಗಳನ್ನು ತೊಟ್ಟು, ಸಂಕ್ರಾಂತಿ ಪೂಜೆಯನ್ನು ಶಾಸ್ತ್ರೋಕ್ತವಾಗಿ, ಸಂಪ್ರದಾಯಬದ್ಧವಾಗಿ ಸಡಗರದಿಂದ ಆಚರಸಿದ್ದರು. ಸಂಕ್ರಾಂತಿ ಸಡಗರ ಸ್ಪರ್ಧೆಯ ಭಾಗವಾಗಿ, ಅವರು ಪ್ರೀತ್ಯಾದರಗಳಿಂದ ಕಳಿಸಿದ ಹೊಸ ವರ್ಷ, ಸಂಕ್ರಾಂತಿ ಹಬ್ಬದ ಶುಭಾಶಯಗಳನ್ನು, ವಿಡಿಯೋ ಹಾಗೂ ಛಾಯಾಚಿತ್ರಗಳೊಂದಿಗೆ ಈ ಸಂದರ್ಭದಲ್ಲಿ ಪ್ರದರ್ಶಿಸಲಾಯಿತು. ಶ್ರೀಮತಿ ಬಾಂಧವ್ಯ ನಾಡಗೌಡ ಅವರು ತಮ್ಮ ಸಂಕ್ರಾಂತಿ ಹಬ್ಬವನ್ನು ಕಲಾತ್ಮಕವಾಗಿ ಆಚರಿಸಿ ಕಳುಹಿಸಿದ ವಿಡಿಯೊ ಬಹುಮಾನ ಪಡೆದು ಕೊಂಡಿತು.

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ!!

ಶ್ರೀ ಡಿ. ವಿ. ಗುಂಡಪ್ಪ ವಿರಚಿತ ಮಂಕುತಿಮ್ಮನ ಕಗ್ಗದ ಮೇಲಿನ ಸಾಲುಗಳ ಪ್ರೇರಣೆಯಿಂದ, ಬೃಂದಾವನ ಈ ವರ್ಷದ ಮೊದಲ ಚಾರಿಟಿ ಯೋಜನೆಯನ್ನು ನಮ್ಮ ಮುಂದಿಟ್ಟಿತು. ಕರ್ನಾಟಕದಲ್ಲಿ ಶ್ರೀ ನಾರಾಯಣ ಸೇವಾ ಸಂಸ್ಥಾನದ ವತಿಯಿಂದ, ಅಪಘಾತಗಳಲ್ಲಿ ಕೈ ಕಾಲು ಕಳೆದು ಕೊಂಡ ಆರ್ಥಿಕವಾಗಿ ಹಿಂದುಳಿದವರಿಗೆ ಕೃತಕ ಕೈ ಕಾಲುಗಳನ್ನು ಜೋಡಿಸುವ ನಡೆಯುವ ಶಿಬಿರನಡೆಯಲಿದ್ದು, ಆ ಶಿಬಿರದ 10 ಜನ ಫಲಾನುಭವಿಗಳಿಗೆ ಬೃಂದಾವನ ಅಪೂರ್ವ ತಂಡದಿಂದ ಆರ್ಥಿಕ ನೆರವನ್ನು ನೀಡುವ ಧ್ಯೇಯದೊಂದಿಗೆ, ಇಲ್ಲಿನ ಕನ್ನಡಿಗರಿಂದ ದೇಣಿಗೆ ಸಂಗ್ರಹ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಅಧ್ಯಕ್ಷರಾದ ಅರ್ಚನಾ ಆಚಾರ್ಯ ಅವರು, ನೊಂದವರ ಮುಖದಲ್ಲಿ ಮಂದಹಾಸವನ್ನು ತರಿಸುವ ಈ ಮಹತ್ಕಾರ್ಯದಲ್ಲಿ ಉದಾರ ದೇಣಿಗೆ ನೀಡುವಂತೆ ಸದಸ್ಯರೊಂದಿಗೆ ವಿನಂತಿಸಿಕೊಂಡರು.

ಬೃಂದಾವನ ಕನ್ನಡ ಸಂಘ, ಸಂಗೀತ, ಸಾಹಿತ್ಯ, ಸಂಸ್ಕೃತಿ, ಶೈಕ್ಷಣಿಕ ವಿಚಾರಗಳ ಅಪೂರ್ವ ಸಂಗಮ ಎಂದರೆ ಅದು ಅತಿಶಯದ ಮಾತಲ್ಲ! ಸಾಹಿತ್ಯದ ವಿಷಯಕ್ಕೆ ಬಂದರೆ ಇಲ್ಲಿರುವ ಪ್ರತಿಯೊಬ್ಬ ಸದಸ್ಯರೂ ಒಂದಲ್ಲ ಒಂದು ರೀತಿಯಲ್ಲಿ ಸಾಹಿತ್ಯಾಸಕ್ತರೇ ಹಾಗೂ ಉದಯೋನ್ಮುಖ ಹವ್ಯಾಸಿ ಸಾಹಿತಿಗಳೇ. ಎಲ್ಲರನ್ನೂ ಒಂದೇ ವೇದಿಕೆಯಡಿಯಲ್ಲಿ ಕರೆತಂದು, ನಿರಂತರವಾಗಿ ಸಾಹಿತ್ಯದ ರಸದೌತಣವನ್ನು ಬಡಿಸುವ ನಿಟ್ಟಿನಲ್ಲಿ "ಬೃಂದಾವನ ಕನ್ನಡ ಕಾರಂಜಿ - ಅಪೂರ್ವ ಸಾಹಿತ್ಯಕ್ಕೆ ಅಂದವಾದ ವೇದಿಕೆಯನ್ನು", ಖ್ಯಾತ ಹವ್ಯಾಸಿ ನಾಟಕಕಾರದ ಶ್ರೀ ಎಚ್. ಬಿ. ಗೋವಿಂದನ್ ಅವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು. ಹಾಸ್ಯ ಸಾಹಿತ್ಯದ ದಿಗ್ಗಜರಾದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಸೋದರಳಿಯ ಹಾಗು ಕನ್ನಡದ ಶ್ರೇಷ್ಠ ಸಾಹಿತಿ ಶ್ರೀ ಪು. ತಿ. ನ ಅವರ ಅಳಿಯಂದಿರೂ ಆಗಿರುವ ಶ್ರೀ ಎಚ್. ಬಿ. ಗೋವಿಂದನ್ ಅವರ ಜೊತೆ "ಹಾಸ್ಯ ಸಂವಾದ" ವನ್ನು, ಅಪೂರ್ವ ತಂಡದ ಸಾಹಿತ್ಯ ಅಂಗದ ಮುಖ್ಯಸ್ಥರಾದ ನ್ಯೂ ಜೆರ್ಸಿಯ ಶ್ರೀ ರಾಘವೇಂದ್ರ ಕುಂದಲಗುರ್ಕಿಯವರು ನೆರವೇರಿಸಿಕೊಟ್ಟರು. ನ್ಯೂ ಜೆರ್ಸಿಯ ಶ್ರೀಮತಿ ಉಷಾ ಗಣಪತಿ ಹಾಗೂ ಶ್ರೀ ಭಾಸ್ಕರ್ ತೈಲಗೇರಿ ಅವರು ಈ ಸಂವಾದದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.




ಕನ್ನಡ ಅನರ್ಥ ಕೋಶದ ಪಿತಾಮಹರೇ ಆದ, ಶ್ರೀ ನಾ. ಕಸ್ತೂರಿ ಅವರ ಬಗೆಗಿನ ಸ್ವಾರಸ್ಯಕರ ಅಂಶಗಳನ್ನು ಶ್ರೀ ಭಾಸ್ಕರ್ ತೈಲಗೇರಿಯವರು ಪ್ರಸ್ತುತಪಡಿಸಿದರು. ಮೂಲತಃ ಕೇರಳದವರಾಗಿ ಮಲೆಯಾಳಂ ಮಾತೃಭಾಷೆಯಾದರೂ, ಉನ್ನತ ವ್ಯಾಸಂಗಕ್ಕಾಗಿ ಮೈಸೂರಿಗೆ ಬಂದು, ಶಿಕ್ಷರಾಗಿ, ಕನ್ನಡ ಕಲಿತು ಕನ್ನಡ ಅನರ್ಥ ಕೋಶ ರಚಿಸಿದ ಆ ಪ್ರತಿಭೆಯ ಬಗ್ಗೆ ಅಂದು ಕೇಳಿದವರಿಗೆಲ್ಲ, ನಮ್ಮ ಕಸ್ತೂರಿ ಕನ್ನಡದ ಹಿರಿಮೆಯ ಬಗ್ಗೆ ಇರುವ ಅಭಿಮಾನ ಇಮ್ಮಡಿಯಾಗಿದ್ದುದರಲ್ಲಿ ಆಶ್ಚರ್ಯವೇ ಇಲ್ಲ. ವಿಶೇಷ ಹಾಸ್ಯಾರ್ಥಗಳನ್ನು ಕೊಡುವ ನಾ. ಕಸ್ತೂರಿಯ ಕೆಲವೊಂದು ಪದಾರ್ಥ(ಪದ + ಅರ್ಥ) ಗಳನ್ನು ಭಾಸ್ಕರ್ ಈ ಕೆಳಕಂಡಂತೆ ತಿಳಿಸಿಕೊಟ್ಟರು

ಇಗ್ನೇಶ್ವರ - ತನ್ನ ಹೆಸರಿನ ಉಚ್ಚಾರಣೆಗೆ ಒದಗುವ ವಿಘ್ನಗಳನ್ನು ನಿವಾರಿಸಲಾಗದ ಒಂದು ದೇವತೆ.
ಇತ್ಯಾದಿ - ಮುಂದಕ್ಕೆ ಬರೆಯಲು ಬುದ್ಧಿ ಓಡದಿದ್ದರೆ, ಈ ಪದವನ್ನುಪಯೋಗಿಸಿ ಬಚಾವಾಗಬಹುದು.
ಇದು - ಭಾಷನಕಾರರ ಆಸರೆ; ಇದು ಮಾಡಲು ಇದೇ ಇಲ್ಲದೇ ಹೋದರೆ, ಅವರು ಇದು ಇದು ಎಂದು ಬಹಳ ಇದು ಇದಾಗಿ ಮಾಡಬಹುದಾಗಿದೆ.
ಈಜಾನುಬಾಹು - ಈಜುವುದಕ್ಕನುಕೂಲವಾಗುವಷ್ಟು, ಉದ್ದವಾದ ಬಾಹುಗಳನ್ನುಳ್ಳವನು.
ಉತ್ತರಕ್ರಿಯೆ - ಪರೀಕ್ಷೆಗಳಲ್ಲಿ ಉತ್ತರ ಬರೆಯುವ ಕೆಲಸ.
ಚರಣಾಗತ - ಕಾಲಿಗೆ ಬಿದ್ದವ.
ಚಿತ್ರಹಿಂಸೆ - ಸಿನಿಮಾ ನೋಡುವವರಿಗಾಗುವ ಹಿಂಸೆ.
ನಾಶೀರ್ವಾದ - ಶಾಪ.
ಬೂತಚೇಷ್ಟೆ - ಪೋಲಿಂಗ್ ಬೂತ್ ಸುತ್ತ ಹುರಿಯಾಳುಗಳು ಮಾಡುವ ಚೇಷ್ಟೆ.
ಬೇತಾಳ - ರಾಗಜ್ಞಾನವಿದ್ದರೂ ಕೆಲವು ಸಂಗೀತಗಾರರಿಗೆ ತಾಳಜ್ಞಾನವೇ ಇರುವುದಿಲ್ಲ.
ಭಾವಜೀವಿ - ಅಕ್ಕನ ಮನೆಯಲ್ಲಿದ್ದು ಕಾಲೇಜು ವ್ಯಾಸಂಗ ನಡೆಸುವ ಹುಡುಗ.
ಷಾರ್ಪನಖಿ - ಚೂಪಾದ ಉಗುರು ಹೊಂದಿರುವ ಹೆಣ್ಣು.
ಸುಸ್ತಾದ್ - ಹೇಳಿಕೊಟ್ಟು ಹೇಳಿಕೊಟ್ಟು ಸುಸ್ತಾದ ಪೈಲ್ವಾನ, ಅಥವಾ, ಗುರು.
ಸ್ವಗತ - ನಾಟಕದಲ್ಲಿ ಒಬ್ಬರನ್ನುಳಿದು ಮಿಕ್ಕೆಲ್ಲರಿಗೂ ಕೇಳಿಸುವಂತೆ ಕೂಗಬೇಕಾದ ಮಾತು.
ಹನುಮಾನ - ಸೀತೆಯೇ, ಮಾಂಡೋದರಿಯೇ, ಎಂಬ ಕಪಿ ಸಂದೇಹ.
ಹರಿಹರ - ಒಬ್ಬ ಕನ್ನಡ ಕವಿ, ತುಂಬಾ ರಗಳೆ ಮಾಡಿದವನು.
ಅನರ್ಥ ಕೋಶದ ಮೇಲಿನ ಉದಾಹರಣೆಗಳನ್ನು ಭಾಸ್ಕರ್ ವಿವರಿಸುತ್ತಿದ್ದಾಗ, ನಾವೆಲ್ಲಾ ನಕ್ಕು ನಕ್ಕು ಸುಸ್ತೋ ಸುಸ್ತು. ನಾ ಕಸ್ತೂರಿಯ ಈ ಹಾಸ್ಯಮಯ ಕ್ರಿಯಾಶೀಲತೆ ನಿಜಕ್ಕೂ ಅವರಿಗಿದ್ದ ಅಪ್ರತಿಮ ಪ್ರತಿಭೆಯೇ ಸರಿ!

ಈ ಹಾಸ್ಯ ಸಂವಾದವನ್ನು ಮತ್ತೊಂದು ಸ್ಥರಕ್ಕೆ ತೆಗೆದು ಕೊಂಡು ಹೋದದ್ದು, ಅಂದಿನ ವಿಶೇಷ ಆಹ್ವಾನಿತರಾಗಿದ್ದ ಶ್ರೀ ಎಚ್ ಬಿ ಗೋವಿಂದನ್. ಕನ್ನಡ ಸಾಹಿತ್ಯವನ್ನು ಅಂದಿನ ದಿನಗಳಲ್ಲಿ ವಿರೋಧಿಸುತ್ತಲೇ ಹಾಸ್ಯ ಸಾಹಿತ್ಯ ದಿಗ್ಗಜರಾಗಿದ್ದ ಶ್ರೀ ಬೀ.Chi ಅವರ ಬಗ್ಗೆ ಆಮೂಲಾಗ್ರವಾಗಿ ತಿಳಿಸಿಕೊಟ್ಟರು! ಅವರ ಜನನ, ಜೀವನದ ಅನೇಕ ಸ್ವಾರಸ್ಯಕರ ಸಂಗತಿಗಳನ್ನು ತಿಳಿಸಿಕೊಟ್ಟ ಇವರು, ಬೀ.Chi ತಮ್ಮ ದೈನಂದಿನ ಜೀವನದಲ್ಲಿ ಹಾಸ್ಯ ದೃಷ್ಟಿಕೋನದಲ್ಲಿ ಹೇಗೆ ನೋಡುತ್ತಿದ್ದರು ಎಂಬುದರ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು. ಇದರ ಜೊತೆಗೆ ತಮ್ಮ ಹವ್ಯಾಸಿ ಪ್ರವೃತ್ತಿಯಾದ ನಾಟಕ ರಂಗದ ಬಗ್ಗೆಯೂ ತಮ್ಮ ಕಂಚಿನ ಕಂಠದಲ್ಲಿ ಮಾತನಾಡಿದರು. ಹಲವಾರು ವರ್ಷಗಳ ಹಿಂದೆ ಅಭಿನಯಿಸಿದ್ದ ನಾಟಕದ ಸಂಭಾಷಣೆಯನ್ನು ಯಾವುದೇ ಪುಸ್ತಕದ ಸಹಾಯವಿಲ್ಲದೇ, ನಿರರ್ಗಳವಾಗಿ ಹೇಳಿದ ರೀತಿಯಂತೂ ಅದ್ಭುತವಾಗಿತ್ತು ಹಾಗೂ ಇವರಿಗೆ ನಾಟಕ ರಂಗದ ಬಗ್ಗೆ ಇರುವ ಅಪಾರ ಅಪ್ಯಾಯತೆ, ಗೌರವ ಮತ್ತು ನಿಷ್ಠೆಗಳನ್ನು ತೋರಿಸುತ್ತಿತ್ತು.

ಒಟ್ಟಿನಲ್ಲಿ, ಈ ಹಾಸ್ಯ ಸಂವಾದ, ಮುಂದೆ ಬೃಂದಾವನದ ಅಂಗಳದಲ್ಲಿ ನಡೆಯುವ ಹತ್ತು ಹಲವಾರು ಸಾಹಿತ್ಯಾತ್ಮಕ ಕಾರ್ಯಕ್ರಮಗಳಿಗೆ ಮುನ್ಸೂಚನೆಯಾಗಿತ್ತು.

ಭಾರತದ ಎಪ್ಪತ್ತಾಲ್ಕನೆಯ ಗಣರಾಜ್ಯೋತ್ಸವದ ಅಂಗವಾಗಿ ಯುವ ಬೃಂದಾವನದ ಸದಸ್ಯರಾದ ಕು. ಅನನ್ಯ ಕಟ್ಟಿಮನಿ, ಕು. ಅನಘ ಪ್ರಸಾದ್, ಕು. ಅದಿತಿ ಪ್ರಸಾದ್, ಕು. ಧನ್ವಿ ಸತ್ಯಪ್ರಸಾದ್, ಕು. ಪೂರ್ವಿ ಶೇಖರ್, ಕು. ನವಿಷ್ಕಾ ಮಂಜುನಾಥ್, ಕು. ಥನಿಷ್ಕಾ ಮಂಜುನಾಥ್, ಕು. ದಿಯಾ ರಜನೀಶ್ ಹಾಗೂ ಚಿರಂಜೀವಿ ರೇಯಾಂಶ್ ರಜನೀಶ್ ದೇಶಭಕ್ತಿಗೀತೆಗಳಿಗೆ ನರ್ತಿಸಿ, ಹೊರದೇಶದಲ್ಲಿದ್ದರೂ ನಮ್ಮ ಭಾರತ ದೇಶದ ಮೇಲೆ ಕಿಂಚಿತ್ತೂ ಕಡಿಮೆಯಾಗದ ಭಕ್ತಿಯನ್ನು ಪ್ರದರ್ಶಿಸಿದರು. ಕಾರ್ಯಕ್ರಮಾಂತ್ಯದಲ್ಲಿ ಶ್ರೀಮತಿ ಅರ್ಚನಾ ಆಚಾರ್ಯ ಅವರು, ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗಹಿಸಿದ ಹಾಗು ತೆರೆ ಮರೆಯಲ್ಲಿ ಹಲವಾರು ವಾರಗಳಿಂದ ಈ ಕಾರ್ಯಕ್ರಮದ ಯಶಸ್ಸಿಗೆ ಅಹರ್ನಿಶಿ ದುಡಿದ ಬೃಂದಾವನದ ಎಲ್ಲ ಸದಸ್ಯರಿಗೂ ತಮ್ಮ ವಂದನೆಗಳನ್ನು ಸಮರ್ಪಿಸಿ ಈ ವರ್ಷದ ಮೊದಲ ಕಾರ್ಯಕ್ರಮಕ್ಕೆ ತೆರೆ ಎಳೆದರು.

ಒಟ್ಟಿನಲ್ಲಿ ಬೃಂದಾವನದ ನೇತೃತ್ವ ವಹಿಸಿರುವ ಅಪೂರ್ವ ತಂಡದ ಮೊದಲ ಸಂಕ್ರಾಂತಿ ಸಂಭ್ರಮ ಸಡಗರ ಕಾರ್ಯಕ್ರಮ ಅಭೂತಪೂರ್ವವಾಗಿ ಮೂಡಿಬಂದಿತ್ತು. ಈ ಕಾರ್ಯಕ್ರಮವನ್ನು ಯುಟ್ಯೂಬ್ ನಲ್ಲಿ ನೋಡಲು, ಈ ಕೊಂಡಿಯನ್ನು ಕ್ಲಿಕ್ಕಿಸಿ:

https://www.youtube.com/live/nrxYfBVcpDY?feature=share



# ನಿನ್ನೊಲುಮೆಯಿಂದಲೆ

**ಉಷಾ ಗಣಪತಿ, ನ್ಯೂಜೆರ್ಸಿ**


“ನೀನೊಲುಮೆಯಿಂದಲೇ" ಶೀರ್ಷಿಕೆ ಕೇಳಿದ ಕೂಡಲೇ ಮುಖದಲ್ಲೊಂದು ಕಿರುನಗೆ ಹಾಗು ಮನದಲ್ಲಿ ಪ್ರೀತಿಯ ಭಾವ. ಇದೆಲ್ಲದರ ಜೊತೆಗೆ ನಮ್ಮ ಗಮನಕ್ಕೆ ಬರುವ ಏಕೈಕ ವ್ಯಕ್ತಿ ಪ್ರಣಯ ಕವಿ ಎಂದೇ ಖ್ಯಾತಿ ಪಡೆದಿರುವ ಶ್ರೀ ಕೆ.ಸ್. ನರಸಿಂಹಸ್ವಾಮಿ. ಅವರೊಂದಿಗೇ ಬರುವ ಮಧುರವಾದ 'ಮೈಸೂರು ಮಲ್ಲಿಗೆ' ಪ್ರಣಯ ಕವನ ಸಂಕಲನ.

ಬೃಂದಾವನ ಕನ್ನಡ ಕಾರಂಜಿ ತಂಡದವರು, ನಮ್ಮ ಪ್ರಣಯ ಕವಿ ಶ್ರೀ ಕೆ.ಸ್. ನರಸಿಂಹಸ್ವಾಮಿಯವರ ಸ್ಮರಣೆಯಲ್ಲಿ "ನೀನೊಲುಮೆಯಿಂದಲೇ" - ಭಾವಪೂರ್ಣ ನೆನಪುಗಳು ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು, ಇದರಲ್ಲಿ ನಡೆದ ಮೈಸೂರು ಮಲ್ಲಿಗೆ ಪುಸ್ತಕ ಚಿಂಥನೆ ಕಾರ್ಯಕ್ರಮದ ತುಣುಕುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ಮೊದಲಿಗೆ, ಸಾಹಿತ್ಯ ಬೃಂದಾವನದ ಶ್ರೀ ರಾಘವೇಂದ್ರ ಅವರು ಕಾರ್ಯಕ್ರಮದ ರೂಪುರೇಷೆಗಳನ್ನು ತಿಳಿಸಿದರು.

ಶ್ರೀ ಕೆ ಎಸ್ ನರಸಿಂಹಸ್ವಾಮಿ ಅವರ ಮೈಸೂರು ಸಂಕಲನದ "ನಿನ್ನೊಲುಮೆಯಿಂದಲೆ" ಕವನದ ಅರ್ಥದೊಂದಿಗೆ ಅದರ ವಾಚನ ಮಾಡಿ ಕಾರ್ಯಕ್ರಮಕ್ಕೆ ಪ್ರಾರಂಭದ ಪರದೆಯನ್ನು ಎಳೆದರು.

ನಂತರ , ಕಾರ್ಯಕ್ರಮದ ಮಾದರಿಗಾಗಿ ಕೆಲವು ಹಾಡುಗಳ ವಾಚನ ಹಾಗು ಗಾಯನವನ್ನು ಅಹೀಶ್ ಭಾರದ್ವಾಜ್ ಅವರು, ನಮ್ಮೆಲ್ಲರ ಅಚ್ಚುಮೆಚ್ಚಿನ ಹಾಡು 'ದೀಪವು ನಿನ್ನದೇ ಗಾಳಿಯು ನಿನ್ನದೇ', ಇದರ ಬಗ್ಗೆ ಅರ್ಥಪೂರ್ಣ ವಿವರಣೆಯೊಂದಿಗೆ ತಮ್ಮ ಅನಿಸಿಕೆ ಯನ್ನು ತಿಳಿಸಿದರು . ಆಹಾ !! ಎಂಥ ಅದ್ಭುತ ಅರ್ಥಪೂರ್ಣವಾದ ಸಾಹಿತ್ಯ !, ಇದನ್ನು ನಮ್ಮೆಲ್ಲರ ಪ್ರೀತಿಯ ಕುಮಾರಿ ಆಕಾಂಕ್ಷ ಬಹಳ ಸೊಗಸಾಗಿ ಹಾಡಿದರು. ಮೈಸೂರು ಮಲ್ಲಿಗೆಯ ಒಂದೊಂದು ಕವನಗಳು ಮೈಮರೆಸುವಂಥದು, ನಮ್ಮನ್ನು ಮತ್ತೊಂದು ಲೋಕಕ್ಕೆ ಕರೆದೊಯ್ಯುವ ಶಕ್ತಿ "ಮೈಸೂರು ಮಲ್ಲಿಗೆ" ಕವನ ಸಂಕಲನಕ್ಕೆ ಇದೆ .ಮತ್ತೊಂದು ಸುಂದರವಾದ ಹಾಡು "ಹಕ್ಕಿಯ ಹಾಡಿಗೆ ಧನಿ ಗೂಡಿಸುವ ಆಸೆ " ಓಹ್!! ಎಂಥ ಸುಂದರವಾದ ಭಾವಾರ್ಥವುಳ್ಳ ಕವನ, ಇದನ್ನು ಅನಿಲ್ ಭಾರದ್ವಾಜ್ ಅವರು ನಿರೂಪಣೆ ಮಾಡಿ ಹಾಗು ಅದಕ್ಕೆ ದೀಪ್ತಿ ಗಡ್ ಅವರ ಸುಮಧುರ ಕಂಠ ದಿಂದ ಧ್ವನಿ ಗೂಡಿಸಿದರು.



ಶ್ರೀ ಕೆ ಎಸ್ ನರಸಿಂಹಸ್ವಾಮಿ

ಹೀಗೇ ಕೆ.ಎಸ್. ನ. ಅವರ ಕವನಗಳನ್ನು ಎಣಿಸುತ್ತಾ ಹೋದರೇ ಒಂದೇ ..ಎರಡೇ .. ನೂರಾರು.

ಸುಮನಾ ಅವರು ಹಾಡಿದ "ನೀ ಬರುವ ದಾರಿಯಲ್ಲಿ ಹಗಲು ತಂಪಾಗಿ" ಬಹಳ ಚೆನ್ನಾಗಿತ್ತು. ಹಾಡಿನಲ್ಲಿ ಬರುವ ಪ್ರಕೃತಿ ವರ್ಣನೆಯನ್ನು ಶ್ರೀ ನರಸಿಂಹ ಮೂರ್ತಿ ಯವರು ಅಚ್ಚುಕಟ್ಟಾಗಿ ನಿರೂಪಿಸಿದರು. ನಮ್ಮ ಅಚ್ಚು ಮೆಚ್ಚಿನ ಗುರುಗಳಾದ ಶ್ರೀ ಗುರುರಾಜ್ ಕರ್ಜಗಿ ಮತ್ತು ಕೆ.ಎಸ್. ನರಸಿಂಹ ಸ್ವಾಮಿ ಅವರ ಒಡನಾಟದ ಅನುಭವ ಕಥೆಯನ್ನು ಮೂರ್ತಿ ಯವರು ಬಹಳ ಸುಂದರವಾಗಿ ಹೇಳಿದರು.

ಮತ್ತೊಂದು ಮಧುರವಾದ ಹಾಡು ನಮ್ಮೆಲರ ಪ್ರೀತಿಯ ಶ್ರೇಯಸ್ ಅವ್ರು ಧ್ವನಿಯಲ್ಲಿ. "ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹನೆ ಒಳಗೆ ಬರಲಪ್ಪಣೆಯೆ ದೊರೆಯೆ' ಈ ಹಾಡಿನ ಸ್ವಾರಸ್ಯಕರವಾದ ವಿವರಣೆ ನಂತರ ಹೇಳಿದರು.

ನಮ್ಮ ಬುಕ್ ಕ್ಲಬ್ - "ಬೃಂದಾವನ ಚಾವಡಿ" 'ಪುಸ್ತಕದಿಂದ ಮಸ್ತಕಕ್ಕೆ'ಎನ್ನುವ ವಿಶೇಷ ಶೀರ್ಷಿಕೆ ಯನ್ನು ನಮ್ಮ ಶ್ರೀ ಭಾಸ್ಕರ್ ಅವ್ರು ಎಲ್ಲರಿಗು ಅದರ ಪರಿಚಯ ಮಾಡಿಸಿದರು ಹಾಗು ಜನಪ್ರಿಯವಾದ ಟಿ.ನ್. ಸೀತಾರಾಮ್ ಅವರ ಮಾಯಾಮೃಗಾ ಧಾರಾವಾಹಿಯಾ ಶೀರ್ಷಿಕೆ ಹಾಡು ಕೆ.ಎಸ್. ನರಸಿಂಹಸ್ವಾಮಿ ಅವರ ಕವನದಲ್ಲಿ ಒಂದು ಎಂದು ತಿಳಿಸಿದರು. ಆ ಹಾಡಿನ ಸಾಹಿತ್ಯ ಎಂಥ ಅರ್ಥ ಪೂರ್ಣವಾದದ್ದು ಅಲ್ಲವೇ.

ಕಾರ್ಯಕ್ರಮಕ್ಕೆ ಕಳಶಪ್ರಾಯವಾಗಿ ಶ್ರೀ. ಬಾಲಾಸುಬ್ರಮಣ್ಯಮ್, ಕೆ.ಸ್. ನರಸಿಂಹ ಸ್ವಾಮಿ ಅವರ ಪುತ್ರ ಹಾಗು ಮೊಮ್ಮಗಳು ಮಾಲಿನಿ ರಘು ಅವರ ಅನುಭವ ಸಾರ ಹಾಗು ತಾವು ಕಳೆದ ತಂದೆ -ತಾತನವರೊಡೆನೆಯ ಸಮಯದ ಮೆಲಕು , ಒಡನಾಟದ ಮಾತುಗಳನ್ನು ನಮ್ಮೊಂದಿಗೆ ಹಂಚಿಕೊಂಡರು ಇದು ಎಲ್ಲರಿಗೂ ಹೊಸ ಅನುಭವವಾಗಿತ್ತು. ಇದರಿಂದ ಕಾರ್ಯಕ್ರಮದ ಕಳೆ ಹೆಚ್ಚಾಯಿತು. ಇದರೊಂದಿಗೆ, ಶ್ರೀಯುತ ಕೆ.ಏಸ್. ನರಸಿಂಹ ಸ್ವಾಮಿ ಅವರ ಭಾವಪೂರ್ಣ ನಮನ ಕಾರ್ಯಕ್ರಮವು ಮೈಸೂರು ಮಲ್ಲಿಗೆ ಕವನ ಸಂಕಲನದ ಭಾವದೊಂದಿಗೆ ಮುಕ್ತಾಯಗೊಂಡಿತು.

ಕಾರ್ಯಕ್ರಮದ ಕೊನೆಗೆ ಬೃಂದಾವನದ ಅಧ್ಯಕ್ಷರಾದ ಶ್ರೀಮತಿ ಅರ್ಚನಾ ಆಚಾರ್ಯ ಎಲ್ಲರಿಗೂ ವಂದನಾರ್ಪಣೆ ಮಾಡಿದರು.ಇದರಲ್ಲಿ ಪಾಲುಗೊಂಡ ಹಲವಾರು ಸಾಹಿತ್ಯ ಪ್ರೇಮಿಗಳು ಕಾರ್ಯಕ್ರಮದ ಬಗ್ಗೆ ತಮ್ಮ ಸಂತಸ ಹಂಚಿ ಕೊಂಡರು,ಮೋಕ್ಷಗೊಂಡಂ ಶ್ರೀ ಶೇಷಾದ್ರಿ ಅವರು Valentine’s Day ಆಚರಣೆ ಮಾಡುವ ಸಂದರ್ಭದಲ್ಲಿ ಕವಿ ಕೆ ಎಸ್ ನ ಅವರ ಚಿಂತನೆ ಬಹಳ ಸಮಯೋಜಿತ ಅಂತ ಹರ್ಷ ವ್ಯಕ್ತ ಪಡಿಸಿದರು. ಸಾಹಿತ್ಯ ಕಲಾಪ ಹಾಗು ಕವಿ ಚಿಂತನೆ
ಎಲ್ಲರಿಗೂ ಮರೆಯಲಾರದ ನೆನಪುಗಳು.

ಎಲ್ಲರಿಗು ಅನಂತ ಧನ್ಯವಾದಗಳು.



# ಬೆಳದಿಂಗಳ ಬಾಲೆಯೊಡನೆ ಒಂದು ಸುಂದರ ಸಂಜೆ

**ವಿ. ಪ್ರಸನ್ನ ಕುಮಾರ್**, ನ್ಯೂಜೆರ್ಸಿ



ನ್ಯೂಜೆರ್ಸಿಯ ಬೃಂದಾವನ ಕನ್ನಡ ಕೂಟದ ನೂತನ ಕಾರ್ಯಕಾರಿ ಸಮಿತಿ "ಅಪೂರ್ವ" ತಂಡದ ಮೊಟ್ಟ ಮೊದಲ ಮುಖತಃ ಕಾರ್ಯಕ್ರಮ, ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಚಿಕ್ಕದಾಗಿ ಚೊಕ್ಕವಾಗಿ ಆಚರಿಸಲು ಮಾರ್ಚ್ ೧೮ ರಂದು ಪ್ರಿನ್ಸ್ಟನ್ ನಲ್ಲಿ ಇರುವ ದಿ ಮಿಂಟ್ ರೆಸ್ಟೋರಂಟ್ ನಲ್ಲಿ "ಬೆಳದಿಂಗಳ ಬಾಲೆ" ಶ್ರೀಮತಿ ಸುಮನ್ ನಗರ್ಕರ್ ಅವರನ್ನು ಮುಖತಃ ಭೇಟಿ ಮಾಡುವ ಸುಯೋಗದಿಂದ ಆರಂಭವಾಯ್ತು...

ನಿಗದಿಯಾದ ಸಮಯಕ್ಕೆ ಸರಿಯಾಗಿ ಆಗಮಿಸಿದ "ಬೆಳದಿಂಗಳ ಬಾಲೆ" ಸುಮನ್ ನಗರ್ಕರ್ ಹಾಗು ಅವರ ಪತಿ ಗುರು ತಮ್ಮ ನಗುವಿನ ಮೂಲಕ ನಮ್ಮೆಲ್ಲರ ನಡುವೆ ರೆಸ್ಟೋರಂಟ್ ಒಳಗಡೆಯೇ ಬೆಳದಿಂಗಳನು ಹರಡಿದರು. ಅವರಿಗೆ ಸುಂದರ ಗುಲಾಬಿ ಹೂಗಳ ಗುಚ್ಚವನ್ನು ನೀಡಿ ಸ್ವಾಗತಿಸಿದವರು ರೆಸ್ಟೋರಂಟ್ ಮಾಲಿಕರಾದ ಶ್ರೀಮತಿ ಸಪ್ನ ಹಾಗು ಶ್ರೀ ಮನೋಹರ್...




ಇದಾದ ನಂತರ ಸುಮನ್ ನಗರ್ಕರ್ ಅವರ ಆಗಮನಕ್ಕೆ ಕಾತುರದಿಂದ ಕಾಯುತ್ತಿದ್ದ ಬೃಂದಾವನ ಸದಸ್ಯರು ಅವರನ್ನು ಭೇಟಿ ಮಾಡಿ ಅವರ ಮುತ್ತಿನಂತ ಮಾತುಗಳನ್ನು ಕೇಳುವ ಸರದಿ. ಗ್ರೂಪ್ ಫೋಟೊ ಹಾಗು ಸೆಲ್ಫಿಗಳನ್ನುತೆಗೆದುಕೊಂಡ ನಂತರ ಅವರನ್ನು ಅಲ್ಲಿಗೆ ಕರೆತಂದಿದ್ದ ಶ್ರೀ ಮಲ್ಲಿಕ್ ಪ್ರಸಾದ್, ಸುಮನ್ ನಗರ್ಕರ್ ಹಾಗು ಅವರ ಪತಿ ಗುರು ಅವರನ್ನು ಪರಿಚಯಿಸಿದರು. ನಟನೆಯಲ್ಲದೆ ಹಿಂದುಸ್ತಾನಿ ಹಾಡುಗಾರಿಕೆ ಹಾಗು ಮ್ಯಾರಥೊನ್ ಅನ್ನು ತಮ್ಮ ಜೀವನಕ್ಕೆ ಅಳವಡಿಸಿಕೊಂಡಿರುವ ಸುಮನ್ ನಗರ್ಕರ್ ಅವರ ಜೀವನೋತ್ಸಾಹವನು ಕಂಡು ಬೆಕ್ಕಸ ಬೆರಗಾದವರು ಹಲವರಾದರೆ ಸ್ಪೂರ್ತಿಗೊಂಡು ಮಾರನೆಯ ದಿನದಿಂದಲೇ ಮ್ಯಾರಥೊನ್ ತರಬೇತಿ ಪಡೆಯಲು ಉತ್ತೇಜಿತರಾದ ಮಂದಿ ಕೆಲವರು...



ನಂತರ ಮಾತನಾಡಿದ ಸುಮನ್ ಅವರು, ತಮ್ಮ ಮುಖವನ್ನು ತೋರಿಸದೆಯೇ "ಬೆಳದಿಂಗಳ ಬಾಲೆ" ಯಾಗಿ ಹೆಸರು ಮಾಡಿದ್ದ ಅವರಿಗೆ "ಅ ಸಿನಿಮಾದಲ್ಲಿ ನಿಮ್ಮ ನಟನೆ ಅದ್ಭುತವಾಗಿತ್ತು" ಅಂತ ಹೇಳಿದ ಪ್ರೇಕ್ಷಕರೊಬ್ಬರ ಬಗ್ಗೆ ನಮಗೆ ತಿಳಿಸಿದಾಗ ಎಲ್ಲರೂ ನಗೆಗಡಲಿನಲ್ಲಿ ಮುಳುಗಿದರು. ನೆಗಟಿವ್ ರೋಲ್, ತಂಗಿಯ ಪಾತ್ರ , ಚಿಕ್ಕ ಪಾತ್ರ , ಮುಖವನ್ನೇ ತೋರಿಸದೆ ಇರುವ ಪಾತ್ರ ಅಂತ ಯೋಚಿಸದೆ ಒಳ್ಳೆಯ ನಿರ್ದೇಶಕರು ಕರೆದಾಗ ಪಾತ್ರ ವಹಿಸುತಿದ್ದೆ ಎಂದು ತಿಳಿಸಿದರು ಸುಮನ್. ನಿಷ್ಕರ್ಷ, ನಮ್ಮೂರ ಮಂದಾರ ಹೂವೆ, ಮುಂಗಾರಿನ ಮಿಂಚು ಮುಂತಾದ ಚಲನ ಚಿತ್ರಗಳಲ್ಲಿ ನಟಿಸಿ ಜನರ ಮೆಚ್ಚುಗೆ ಪಡೆದಿದ್ದು ಹಲವಾರು ವರ್ಷಗಳ ನಂತರ ನಾಗತಿಹಳ್ಳಿ ಚಂದ್ರಶೇಖರ್ ಅವರ ಇಷ್ಟಕಾಮ್ಯ ಚಿತ್ರದಲ್ಲಿ ನಟಿಸಿದ್ದರ ಬಗ್ಗೆ ತಿಳಿಸಿದರು. ಅವರೆ ನಿರ್ಮಿಸಿದ ಬಬ್ರು ಹಾಗು ಈಗ ನಿರ್ಮಿಸುತ್ತಿರುವ ಬ್ರಾಹ್ಮಿ ಚಿತ್ರದ ಬಗ್ಗೆ ತಿಳಿಸಿ, ತಮ್ಮ ಹೊಸ ಚಿತ್ರಕ್ಕೆ ನಮ್ಮೆಲ್ಲರ ಬೆಂಬಲ ಕೋರಿದರು. ನಮ್ಮೆಲ್ಲರ ಕೋರಿಕೆಯಂತೆ ಒಂದು ಭಾವಗೀತೆಯನ್ನು ಕೂಡ ಹಾಡಿದರು ಸುಮನ್ !!!

ಸುಮರು ೯೦ ನಿಮಿಷಗಳ ಕಾಲ ಅಲ್ಲಿ ನೆರೆದಿದ್ದ ೪೦-೫೦ ಮಂದಿ ಬೃಂದಾವನಿಗರ ಜೊತೆ ಸರಸವಾಗಿ ಮಾತನಾಡಿಕೊಂಡು ಎಲ್ಲರ ಮನ ಗೆದ್ದರು ಸುಮನ್ ಹಾಗು ಗುರು ದಂಪತಿಗಳು. ಎಲ್ಲರ ಪ್ರಶ್ನೆಗಳಿಗೆ ಸೂಕ್ತವಾಗಿ ಉತ್ತರ ನೀಡಿದರು. ದಿ ಮಿಂಟ್ ರೆಸ್ಟೋರಂಟ್ ನಲ್ಲಿ ಸಪ್ನ ಹಾಗು ಮನೊಹರ್ ಅವರು ಶುಚಿ ರುಚಿಯಾದ ಅಡುಗೆಯನ್ನು ಮಾಡಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಕೊನೆಯಲ್ಲಿ ನಮ್ಮ ಬೃಂದಾವನ ಕನ್ನಡ ಕೂಟದ ಸಾಂಸ್ಕೃತಿಕ ನಿರ್ದೇಶಕರಾದ ಶ್ರೀಮತಿ ನಾಗಶ್ರೀ ಬದರಿ ಅವರು ಸುಮನ್ ಅವರಿಗೆ ನೆನಪಿನ ಕಾಣಿಕೆ ನೀಡಿದರೆ ಅಧ್ಯಕ್ಷರಾದ ಶ್ರೀಮತಿ ಅರ್ಚನಾ ಆಚಾರ್ಯ ಅವರು ವಂದನಾರ್ಪಣೆ ಮಾಡಿದರು...ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನ ಒಬ್ಬ ಪ್ರತಿಭಾನ್ವಿತ ಯಶಸ್ವಿ ಮಹಿಳೆಯೊಡನೆ ನಡೆಸಿಕೊಟ್ಟ "ಅಪೂರ್ವ" ತಂಡದ ಅಮೋಘವಾದ ಈ ಕಾರ್ಯಕ್ರಮಕ್ಕೆ ಧನ್ಯವಾದಗಳು...

ಬೆಳದಿಂಗಳ ಬಾಲೆಯ ಜೊತೆ ಒಂದು ಸಂಜೆ ಕಳೆದು   ಬೆಳದಿಂಗಳ ಚಳಿಯಲ್ಲಿ ಮನೆಗಳಿಗೆ ಹೊರಟಾಗ ಬಂದವರಿಗೆಲ್ಲಾ ಅದೇನೊ ಅವ್ಯಕ್ತವಾದ ಆನಂದ.. ಸಮಾಧಾನ.. ಸಂತೃಪ್ತಿಯ ಭಾವನಂದ...



# ಬರಹಗಳು

ಚೈತ್ರದ ಬೃಂಗ.....



# ಜೀವದುಸಿರು ಹುಸಿ ಗಾಳಿಯಾದಾಗ

## ಅಧ್ಯಾಯ-೧

ಮೂಲ: **ಪಾಲ್ ಕಲಾನಿಧಿ** ಅನುವಾದ: **ದಾಶರಥಿ ಘಟ್ಟು .** **ನ್ಯೂಜೆರ್ಸಿ.**

**ಪರಿಪೂರ್ಣ ಆರೋಗ್ಯದೊಂದಿಗೆ ನಾನು ಆರಂಭಿಸುತ್ತೇನೆ**

ವೈದ್ಯಕೀಯ ಶಾಲೆ ಬದುಕಿನ ಅರ್ಥ, ಹುಟ್ಟು ಮತ್ತು ಸಾವುಗಳ ಬಗೆಗಿನ ನನ್ನ ತಿಳುವಳಿಕೆಯನ್ನು ಹೆಚ್ಚು ಹರಿತಗೊಳಿಸಿತು. ಪದವಿ ಪೂರ್ವ ದಿನಗಳಲ್ಲಿ ಮಾನವೀಯ ಸಂಬಂಧಗಳ ಬಗ್ಗೆ ನಾನು ಬರೆದ ಲೇಖನ, ವೈದ್ಯ-ರೋಗಿಯ ಸಂಬಂಧಗಳ ಹಿನ್ನೆಲೆಯಲ್ಲಿ ನನಗೆ ಅನುಭವಾತ್ಮಕ ವಾಗಿ ಅರಿವಾಗತೊಡಗಿತು. ವೈದ್ಯಕೀಯ ವಿದ್ಯಾರ್ಥಿಗಳಾಗಿ, ನಾವು ಸಾವು, ನೋವು, ನರಳಿಕೆಗಳನ್ನು ಮುಖಾಮುಖಿ ನೋಡತೊಡಗಿದೆವು. ನಮ್ಮ ಶೈಕ್ಷಣಿಕ ಅಭ್ಯಾಸದಲ್ಲಿ ರೋಗಿಗಳ ಆರೈಕೆ ಅವಿಭಾಜ್ಯ ಅಂಗವಾಗಿತ್ತು. ಎಲ್ಲಾ ಮಾಡುತ್ತಿದ್ದೂ, ಅವುಗಳ ಜವಾಬ್ದಾರಿ ನಮ್ಮ ಮೇಲಿರಲಿಲ್ಲ. ಆದರೆ ಮುಂದೊಂದು ದಿನ ಜವಾಬ್ದಾರಿಯ ಭೂತ ನಮ್ಮ ಬೆನ್ನ ಮೇಲಿರುತ್ತದೆ ಎಂಬ ಅರಿವು ನಮಗಾಗುತ್ತಿತ್ತು. ವೈದ್ಯಕೀಯ ವಿದ್ಯಾರ್ಥಿಗಳು ಮೊದಲ ಎರಡು ವರ್ಷಗಳನ್ನು ತರಗತಿಯ ಕೋಣೆಗಳಲ್ಲಿ ಓದಿ-ಬರೆಯುತ್ತಾ, ಅಭ್ಯಾಸ ಮಾಡುತ್ತಾ, ತಮ್ಮ ಸಹಪಾಠಿಗಳೊಂದಿಗೆ ಬೆರೆತು ಮಜಾ ಮಾಡುತ್ತಾ ಕಳೆಯುತ್ತಾರೆ; ಆ ಎರಡು ವರ್ಷದ ಅಭ್ಯಾಸ, ಪದವಿ ಪೂರ್ವ ಶಿಕ್ಷಣದ ವಿಸ್ತರಣೆಯಂತೆ ತೋರುತ್ತದೆ ಅಷ್ಟೇ. ಆದರೆ ನನ್ನ ಗೆಳತಿ ಲೂಸಿ (ಮುಂದೆ ಅವಳು ನನ್ನ ಜೀವನದ ಸಂಗಾತಿಯಾದಳು), ಈ ಶೈಕ್ಷಣಿಕ ತರಬೇತಿಯ ಅರ್ಥವನ್ನು ಕಾಲೇಜಿನ ಮೊದಲ ವರ್ಷದಲ್ಲೇ ತಿಳಿದುಕೊಂಡಿದ್ದಳು. ಅವಳದು ಮಿತಿಯಿಲ್ಲದೆ ಪ್ರೀತಿಸುವ ಸಾಮರ್ಥ್ಯ. ಅದು ನನಗೆ ಪಾಠವಾಯಿತು. ಒಂದು ಸಂಜೆ ಮನೆಯಲ್ಲಿ ಸೋಫಾದ ಮೇಲೆ ಕೂತು, EKG ಕಂತೆಯ ಗ್ರಾಫುಗಳನ್ನು ಪರಿಶೀಲಿಸುತ್ತಿದ್ದಾಗ, ಅವಳು ಹಠಾತ್ತನೆ ಗೊಂದಲಕ್ಕೀಡಾಗಿ, ಮಾರಣಾಂತಿಕ arrhythmia ವನ್ನು ಸರಿಯಾಗಿ ಗುರುತಿಸಿದಳು. ಆ ಗ್ರಾಫಿನಿಂದ ಅವಳು ಎಷ್ಟು ಕಂಗೆಟ್ಟಳೆಂದರೆ, ಅದನ್ನು ಗುರುತಿಸಿತ್ತಿದ್ದಂತೆ, ದುಃಖದಿಂದ ಅಳತೊಡಗಿದಳು. ಎಲ್ಲಿಂದ ಆ EKG ಬಂತೋ ಗೊತ್ತಿಲ್ಲ, ಆದರೆ ಆ EKG ಮಾಡಿಸಿಕೊಂಡ ವ್ಯಕ್ತಿ ಬದುಕಂತೂ ಇರುವುದಿಲ್ಲ. ಆ EKG ಗ್ರಾಫಿನ ಅಂಕುಡೊಂಕು ರೇಖೆಗಳು ಬರೀ ಗೆರೆಗಳಲ್ಲ. ಅವು ವೆಂಟ್ರಿಕ್ಯುಲರ್ ಫಿಬ್ರಿಲೇಷನ್ ಹದಗೆಡುವುದನ್ನು ತೋರಿಸುತ್ತಿದ್ದ ಕ್ಷೀಣಿಸುತ್ತಿರುವ ಅಸಿಸ್ಟೋಲ್. ಯಾರೇ ಆಗಲೀ ಅದನ್ನು ನೋಡುತ್ತಿದ್ದಂತೆ ಅಳದೆ ಇರಲು ಸಾಧ್ಯವೇ ಇಲ್ಲ.

ನಾನು ಮತ್ತು ಲೂಸಿ ಯೇಲ್ ಮೆಡಿಕಲ್ ಸ್ಕೂಲಿನಲ್ಲಿ ಕಲಿತೆವು. ಇನ್ನೂ ಆಗ ಷೆಫ್ ನ್ಯೂಲ್ಯಾಂಡ್ ಅಲ್ಲಿ ಅಧ್ಯಾಪಕನಾಗಿದ್ದ.ಅವನ ಪುಸ್ತಕಗಳ ಮುಖಾಂತರ ಮಾತ್ರ ನನಗೆ ಅವನ ಪರಿಚಯ ಇತ್ತು. ನ್ಯೂಲ್ಯಾಂಡ್ ಹೆಸರಾಂತ ಸರ್ಜನ್ ಮತ್ತು ತತ್ವಜ್ಞ. ಬದುಕಿನ ಅಶಾಶ್ವತೆಯ ಬಗ್ಗೆ ಅವನು ಬರೆದ "How We Die" ಎಂಬ ಪುಸ್ತಕ ನಾನು ಪ್ರೌಢ ಶಾಲೆಯಲ್ಲಿ ಕಲಿಯುತ್ತಿದ್ದಾಗಲೇ ಪ್ರಕಟವಾಗಿದ್ದರೂ, ಅದು ನನ್ನ ಕೈ ಸೇರಿದ್ದು ಮೆಡಿಕಲ್ ಸ್ಕೂಲಿನಲ್ಲಿ. ನಾನು ಓದಿದ ಪುಸ್ತಗಳಲ್ಲಿ ನಮ್ಮ ಅಸ್ಥಿತ್ವದ ವಾಸ್ತವವನ್ನು ಸಂಪೂರ್ಣವಾಗಿ ಮತ್ತು ಅತ್ಯಂತ ನೇರವಾಗಿ ಪರಾಮರ್ಶಿಸಿದ ಕೆಲವೇ ಪುಸ್ತಕಗಳಲ್ಲಿ ಇದೂ ಒಂದು. ಪುಟ್ಟ ಕೀಟದಿಂದ ಹಿಡಿದು ಪ್ರಬಲ ಜೀವಿಗಳೆಂದು ಮೆರೆಯುವುವನ್ನೂ ಕೂಡಿಸಿ ಎಲ್ಲಾ ಜೀವಿಗಳೂ, ಒಂದು ದಿನ ಸಾಯಲೇ ಬೇಕು. ಅದು ಪುಟ್ಟ ಮೀನಾಗಿರಬಹುದು ಅಥವಾ ಪುಟಾಣಿ ಚಿಣ್ಣನಾಗಿರಬಹುದು. ಎಲ್ಲಕ್ಕೂ 'ಸಾವು" ಇದೆ.

ಒಂದು ರಾತ್ರಿ ನನ್ನ ಕೋಣೆಯಲ್ಲಿ ಕುಳಿತು ಈ ಪುಸ್ತಕದಲ್ಲಿ ಮುಳುಗಿ ಹೋಗಿದ್ದೆ. ಆಗ ಓದಿದ, ತನ್ನ ಅಜ್ಜಿಯ ಅನಾರೋಗ್ಯದ ಬಗ್ಗೆ ನ್ಯೂಲ್ಯಾಂಡ್ ಬರೆದ ವಿವರಣಾತ್ಮಕ ಮಾತುಗಳು ನನ್ನ ನೆನಪಿನಲ್ಲಿ ಅಚ್ಚಳಿಯದೆ ಉಳಿದಿವೆ. ವೈಯುಕ್ತಿಕ, ವೈದ್ಯಕೀಯ ಮತ್ತು ಆಧ್ಯಾತ್ಮಿಕ ವಿಚಾರಗಳ ಸಮ್ಮಿಶ್ರಣವನ್ನು ನಾವು ಆ ಮಾತುಗಳಲ್ಲಿ ಕಾಣಬಹುದು. ತಾನು ಪುಟ್ಟ ಹುಡುಗನಾಗಿದ್ದಾಗ, ಹೇಗೆ ಅಜ್ಜಿಯ ತೊಗಲಿನ ಮೇಲೆ ಬೆರಳಿನಿಂದ ಒತ್ತಿ, ಮತ್ತೆ ಅದು ತನ್ನ ಮೂಲ ಸ್ಥಿತಿಗೆ ಬರಲು ಎಷ್ಟು ಹೊತ್ತು ತೆಗೆದುಕೊಳ್ಳುತ್ತದೆ ಎಂಬುದನ್ನು ನೋಡುವ ಆಟ ಆಡುತ್ತಿದ್ದುದನ್ನು ನ್ಯೂಲ್ಯಾಂಡ್ ನೆನೆಪಿಸಿಕೊಳ್ಳುತ್ತಾನೆ. ಚರ್ಮ ಸಡಿಲವಾಗುವುದು ಜೀವಿಗಳು ಮುದಿಯಾಗುವ ಪ್ರಕ್ರಿಯೆ. "ವೃದ್ಧಾಪ್ಯದ ಜೊತೆಗೆ, ಉಸಿರಾಟದ ತೊಂದರೆಯೂ ಸೇರಿಕೊಂಡು, ಅಜ್ಜಿ ಕ್ರಮೇಣ ಕಂಜೆಸ್ಟಿವ್ ಹಾರ್ಟ್ ಫೇಲ್ಯೂರ್ ಕಡೆಗೆ ಜಾರಿದಳು.... ಈ ಸ್ಥಿತಿಯಲ್ಲಿ ಮುದಿ ಶ್ವಾಸಕೋಶಗಳ ಮುಪ್ಪಾದ ಅಂಗಾಂಶಗಳಿಂದ, ಮುದಿಯಾಗಿರುವ ರಕ್ತ ಆಮ್ಲಜನಕವನ್ನು ಹೀರುವ ಶಕ್ತಿ ಗಮನಾರ್ಹವಾಗಿ ಕಡಿಮೆಯಾಗುತ್ತದೆ." ಮುಂದುವರೆಯುತ್ತಾ ಅವನು ಬರೆಯುತ್ತಾನೆ, "ಸ್ಪಷ್ಟವಾಗಿ ಗೋಚರಿಸುವುದೇನೆಂದರೆ, ವ್ಯಕ್ತಿಯು ಬದುಕಿನಿಂದ ನಿಧಾನವಾಗಿ ವಿಮುಖವಾಗುವ ಪ್ರಕ್ರಿಯೆ... ಅಜ್ಜಿ ಪ್ರಾರ್ಥನೆ ಮಾಡುವುದನ್ನು ನಿಲ್ಲಿಸಿಬಿಟ್ಟಳು, ಅಷ್ಟೇ ಅಲ್ಲದೆ ವಾಸ್ತವವಾಗಿ ಬೇರೆಲ್ಲಾ ಕಾರ್ಯಗಳನ್ನೂ ನಿಲ್ಲಿಸಿಬಿಟ್ಟಳು". ಅವಳಿಗಾದ ಪಾರ್ಶ್ವವಾಯುವಿನ ಹೊಡೆತದ ನಂತರ, ನ್ಯೂಲ್ಯಾಂಡ್ ಸರ್ ಥಾಮಸ್ ಬ್ರೌನ್ ನ 'ರಿಲಿಜಿಯೊ ಮೆಡಿಸಿ'ಯ "ಎಂತಹ ಹೋರಾಟ ಮತ್ತು ಯಾತನೆಯಿಂದ ನಾವು ಈ ಪ್ರಪಂಚಕ್ಕೆ ಬಂದೆವೋ ನಮಗೆ ಅರಿವಿಲ್ಲ, ಆದರೆ ಈ ಪ್ರಪಂಚದಿಂದ ಹೋಗುವುದು ಅಷ್ಟೇನೂ ನಿರಾಳವಾಗಿ ಆಗುವ ಕೆಲಸವಲ್ಲ", ಎಂಬ ಮಾತುಗಳನ್ನು ನೆನಪಿಸಿಕೊಳ್ಳುತ್ತಾನೆ.

ಸಾವಿನ ನಿರ್ದಿಷ್ಟತೆಯನ್ನು ಕೈಲಾದಷ್ಟು ಅರ್ಥ ಮಾಡಿಕೊಳ್ಳುವ ಪ್ರಯತ್ನದಲ್ಲಿ, ಸಾಹಿತ್ಯ ಮತ್ತು ವೈದ್ಯಕೀಯ ಶಾಸ್ತ್ರದ ಇತಿಹಾಸವನ್ನು ಅಭ್ಯಾಸ ಮಾಡುತ್ತಾ ನಾನು ಸ್ಟ್ಯಾನ್ಫೋರ್ಡ್ ವಿದ್ಯಾಲಯದಲ್ಲಿ ತುಂಬಾ ಸಮಯ ಕಳೆದೆ. ಇದರಿಂದ "ಸಾವು" ಎನ್ನುವುದು ಹೆಚ್ಚು ಜಟಿಲ ಮತ್ತು ಅಜ್ಞಾತವಾಯಿತೇ ಹೊರತು ಹೆಚ್ಚು ಪ್ರಯೋಜನವಾಗಲಿಲ್ಲ. ವಸ್ತುಗಳ ಜೊತೆ ಮುಖಾಮುಖಿಯಾದಾಗ ಮಾತ್ರ ಅವುಗಳನ್ನು ಅರಿಯಲು ಸಾಧ್ಯ ಎಂಬುದನ್ನು ನ್ಯೂಲ್ಯಾಂಡ್ ನ ವಿವರಣೆಗಳು ಮನವರಿಕೆ ಮಾಡಿಕೊಟ್ಟಿತು. ನಾನು ವೈದ್ಯಕೀಯ ಅಭ್ಯಾಸ ಮಾಡತೊಡಗಿದ್ದು, ಸಾವಿನ ನಿಗೂಢತೆಯನ್ನು ಪ್ರಯೋಗಾತ್ಮಕ ಮತ್ತು ಜೈವಿಕ ಆಯಾಮಗಳಲ್ಲಿ ಕಣ್ಣಾರೆ ನೋಡಿ ಅರ್ಥ ಮಾಡಿಕೊಳ್ಳಲು. ಈ ಸಾವು ಎನ್ನುವುದು ಕೆಲವೊಮ್ಮೆ ತೀರಾ ವೈಯುಕ್ತಿಕ ಮತ್ತು ಕೆಲವೊಮ್ಮೆ ಸಂಪೂರ್ಣವಾಗಿ ಸಂಬಂಧವೇ ಇಲ್ಲದ್ದು.

"ಹೌ ವೀ ಡೈ" ಎಂಬ ಕೃತಿಯಲ್ಲಿ ನ್ಯೂಲ್ಯಾಂಡ್ ಬರೆದಿರುವ ತನ್ನ ವೈದ್ಯಕೀಯ ಜೀವನದ ಹೊಸದರಲ್ಲಾದ ಘಟನೆಯ ನೆನಪು ನನಗೆ ಬರುತ್ತದೆ.  ಓ ಆರ್ ನಲ್ಲಿ ನ್ಯೂಲ್ಯಾಂಡ್ ಒಬ್ಬನೇ ಕೆಲಸ ಮಾಡುತ್ತಿದ್ದಾಗ ರೋಗಿಯ ಹೃದಯ ಸ್ಥಬ್ಧವಾಗುತ್ತದೆ. ರೋಗಿಯನ್ನು ಹೇಗಾದರೂ ಉಳಿಸಬೇಕು ಎಂಬ ಉತ್ಕಟತೆಯಿಂದ, ಅವನು ರೋಗಿಯ ಎದೆಯನ್ನು ಬಿಚ್ಚಿ, ರೋಗಿಯ ಹೃದಯವನ್ನು ತನ್ನ ಕೈಯಿಂದ ಹಿಚುಕುತ್ತಾ, ಹೃದಯ ಕ್ರಿಯೆ ಆರಂಭಿಸಲು ಪ್ರಯತ್ನಿಸುತ್ತಾನೆ. ರೋಗಿ ಸಾಯುತ್ತಾನೆ. ನ್ಯೂಲ್ಯಾಂಡ್ ನೆತ್ತರು ಮತ್ತು ಸೋಲನ್ನು ಹೊದ್ದು ನಿಂತಿರುತ್ತಾನೆ!

ನಾನು ಮೆಡಿಕಲ್ ಸ್ಕೂಲ್ ಸೇರುವಷ್ಟರಲ್ಲಿ ತುಂಬಾ ಬದಲಾವಣೆಗಳಾಗಿದ್ದು, ಈಗ ಅಂತಹ ಘಟನೆಗಳನ್ನು ಯೋಚಿಸಲೂ ಸಾಧ್ಯವಿಲ್ಲ. ವೈದ್ಯಕೀಯ ವಿದ್ಯಾರ್ಥಿಗಳಾದ ನಾವು, ಎದೆಯನ್ನು ಸೀಳಿ ಬಿಚ್ಚುವುದಿರಲಿ, ರೋಗಿಯನ್ನು ಮುಟ್ಟಲೂ ಅಪ್ಪಣೆಯಿಲ್ಲ. ಆದರೆ ಇಲ್ಲಿ ಬದಲಾವಣೆಯಾಗದಿರುವುದೆಂದರೆ, ನೆತ್ತರು ಮತ್ತು ಸೋಲುಗಳ ನಡುವೆಯೂ, ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ವೈದ್ಯರು ತೋರುವ ವೀರೋಚಿತ ಮನೋಭಾವ. ನನ್ನ ಪ್ರಕಾರ ಇದೇ ಒಬ್ಬ ವೈದ್ಯನ ನಿಜವಾದ ಪ್ರತೀಕ.

ನಾನು ಸಾಕ್ಷಿಯಾದ ಮೊದಲ ಹುಟ್ಟೇ, ಮೊದಲ ಸಾವೂ ಆಗಿತ್ತು.
ಆಗಷ್ಟೇ ನನ್ನ ಸ್ಟೆಪ್-೧ ಪರೀಕ್ಷೆಗಳನ್ನು ಮುಗಿಸಿದ್ದೆ. ವೈದ್ಯಕೀಯ ಪಠ್ಯಗಳಲ್ಲಿ ಹುದುಗಿ, ಪ್ರಾಧ್ಯಾಪಕರ ಉಪನ್ಯಾಸಗಳ ಟಿಪ್ಪಣಿಗಳನ್ನು ಓದುತ್ತಾ, ಹಾಸಿಗೆಯ ಮೇಲೆ ಮಲಗಿರುವಾಗಲೂ ಫ್ಲಾಶ್-ಕಾರ್ಡ್ ಗಳ ಮೇಲೆ ಬರೆದುಕೊಂಡ ಪಠ್ಯವನ್ನು ಉರು ಹೊಡೆಯುತ್ತಾ- ಎರಡು ವರ್ಷಗಳ ತೀವ್ರ ಅಭ್ಯಾಸ ಮುಗಿದಿತ್ತು. ಮುಂದಿನ ಎರಡು ವರ್ಷ ಆಸ್ಪತ್ರೆ ಮತ್ತು ಚಿಕಿತ್ಸಾಲಯದಲ್ಲಿ ಕೆಲಸ ಮಾಡುತ್ತಾ, ಕಾಯಿಲೆ ಕಸಾಲೆಗಳಿಂದ ನರಳುತ್ತಿರುವವರನ್ನು ಗುಣ ಪಡಿಸಲು ಮೊದಲ ಎರಡು ವರ್ಷ ಕಲಿತ ಪುಸ್ತಕ ಜ್ಞಾನವನ್ನು ಉಪಯೋಗಿಸುವ ಅವಕಾಶಕ್ಕಾಗಿ ಕಾತರದಿಂದ ಎದುರು ನೋಡುತ್ತಿದ್ದೆ.

ಮೊದಲು ನಾನು ಪ್ರಸೂತಿ ಮತ್ತು ಸ್ತ್ರೀ ರೋಗ ಕ್ಷೇತ್ರದಲ್ಲಿ ಕೆಲಸ ಮಾಡತೊಡಗಿದೆ. ಇಲ್ಲಿ ಹೆರಿಗೆ ವಿಭಾಗದಲ್ಲಿ ನನ್ನ ರಾತ್ರಿ ಪಾಳಿ ಪ್ರಾರಂಭವಾಯಿತು. ಸಂಜೆ ಹೆರಿಗೆ ವಿಭಾಗದ ಕಟ್ಟಡದಲ್ಲಿ ನಡೆಯುತ್ತಾ, ಹೆರಿಗೆಯ ಹಂತಗಳನ್ನೂ, ಅವಕ್ಕೆ ಸಂಬಂಧಿಸಿದ ಸರ್ವಿಕ್ ಡೈಲೇಷನ್, ಶಿಶುವಿನ ಹೊರಬರುವಿಕೆಯ ಹಂತಗಳನ್ನೂ ಮನನ ಮಾಡುತ್ತಿದ್ದೆ. ಸಮಯ ಬಂದಾಗ ಅಗತ್ಯಕ್ಕೆ ಬರುವ ಏನೆಲ್ಲಾ ವಿವರಗಳೂ ನನ್ನ ಮನಸ್ಸಿನಲ್ಲಿ ಹಾದು ಹೋಗುತ್ತಿತ್ತು. ಮೆಡಿಕಲ್ ವಿದ್ಯಾರ್ಥಿಯಾಗಿ ನನ್ನ ಕೆಲಸ "ನೋಡಿ" ಕಲಿಯುವುದಾಗಿತ್ತು. ವೈದ್ಯಕೀಯ ಶಿಕ್ಷಣ ಮುಗಿಸಿ ತಾವು ಆರಿಸಿಕೊಂಡ ಕ್ಷೇತ್ರಗಳಲ್ಲಿ ತರಬೇತಿ ಪಡೆಯುತ್ತಿರುವ ರೆಸಿಡೆಂಟ್ ಗಳು, ಮತ್ತು ವರ್ಷಾನುಗಟ್ಟಲೆ ಕೆಲಸ ಮಾಡಿರುವ ಅನುಭವೀ ದಾದಿಯರು ಇಲ್ಲಿ ನಮ್ಮ ಪ್ರಾಥಮಿಕ ಬೋಧಕರು. ಇಷ್ಟೆಲ್ಲಾ ಇದ್ದೂ ನನ್ನ ಮನಸ್ಸು ಭಯದಿಂದ ತುಂಬಿ ಹೋಗಿತ್ತು. ಅಕಸ್ಮಾತ್ತಾಗಿ ತುರ್ತು ಪರಿಸ್ಥಿತಿ ತಲೆದೋರಿ, ನಾನೊಬ್ಬನೇ ಹೆರಿಗೆ ಮಾಡಬೇಕಾಗಿ ಬಂದರೆ, ಏನು ಮಾಡುವುದು ಎಂದು ಗುಂಡಿಗೆ ಡವಗುಟ್ಟುತ್ತಿತ್ತು.

ನಾನು ನನ್ನ ಮೇಲ್ವಿಚಾರಕ ರೆಸಿಡೆಂಟನ್ನು ಭೇಟಿ ಮಾಡಲು, ವೈದ್ಯರ ಲೌನ್ಜಿಗೆ ಹೋದೆ. ಲೌನ್ಜಿನ ಒಳಗೆ ಕಪ್ಪು ಕೂದಲಿನ ತರುಣಿಯೊಬ್ಬಳು ಸೋಫಾದ ಮೇಲೆ ಅಡ್ಡಾಗಿ, ಕೈಯಲ್ಲಿದ್ದ ಸ್ಯಾಂಡ್ ವಿಚ್ಚನ್ನು ಗಬಗಬ ತಿನ್ನುತ್ತಾ, ಲೌನ್ಜಿನಲ್ಲಿದ್ದ ಟಿವಿ ನೋಡುತ್ತಾ, ಯಾವುದೋ ಮೆಡಿಕಲ್ ಜರ್ನಲ್ಲನ್ನು ತಿರುವಿ ಹಾಕುತ್ತಿದ್ದಳು. ನಾನು ನನ್ನ ಪರಿಚಯ ಹೇಳಿದೆ.

"ಓ, ಹಾಯ್", ಅವಳು ಹೇಳಿದಳು. "ನನ್ನ ಹೆಸರು ಮೆಲೀಸಾ. ನಿನಗೇನಾದರೂ ಸಹಾಯ ಬೇಕಿದ್ದರೆ, ನಾನು ಇಲ್ಲಿರುತ್ತೇನೆ ಅಥವಾ ಕಾಲ್ ರೂಮಿನಲ್ಲಿರುತ್ತೇನೆ. ಸದ್ಯಕ್ಕೆ ನೀನು ಇಲ್ಲಿ ದಾಖಲಾಗಿರುವ ಗಾರ್ಸಿಯಾ ಮೇಲೆ ಒಂದು ನಿಗಾ ಇಟ್ಟಿರು. ಅವಳಿಗೆ ೨೨ ವರ್ಷ ವಯಸ್ಸು, ವಾಯಿದೆಗೆ ಮುಂಚಿನ (pre-term) ಹೆರಿಗೆ ಸೂಚನೆಗಳಿಂದ ಅವಳು ಇಲ್ಲಿ ದಾಖಲಾಗಿದ್ದಾಳೆ. ಅವಳಿ ಜವಳಿ ಮಕ್ಕಳು. ಇದನ್ನು ಬಿಟ್ಟರೆ ಮತ್ತೆಲ್ಲಾ ಸಾಮಾನ್ಯವಾಗಿದೆ. ಏನೂ ಆತಂಕವಿಲ್ಲ.

ಸ್ಯಾಂಡ್ ವಿಚ್ಚನ್ನು ಕಬಳಿಸುವುದರ ಮಧ್ಯೆ, ಮೆಲೀಸಾ ವಿವರಗಳ ಮಹಾ ಪೂರವನ್ನೇ ಹರಿಸತೊಡಗಿದಳು: ಗಾರ್ಸಿಯಾ ಹೊಟ್ಟೆಯಲ್ಲಿರುವ ಅವಳಿ ಜವಳಿಗೆ ಇನ್ನೂ ೨೩ ೧/೨ ವಾರಗಳು; ಆ ಶಿಶುಗಳು ಬೆಳೆಯಲು ಸಾಧ್ಯವಾಗುವಂತೆ, ಎಷ್ಟು ಸಾಧ್ಯವಾದರೆ ಅಷ್ಟು ಸಮಯ ಹೆರಿಗೆಯನ್ನು ಮುಂದೂಡಬೇಕು. ಅವಕ್ಕೆ ೨೪ ವಾರಗಳಾದರೂ ಆದರೆ ತುಂಬಾ ಒಳ್ಳೆಯದು. ಆದುದರಿಂದ ಒಂದೊಂದು ದಿನ ಮುಂದೂಡುವುದೂ ಅತ್ಯಂತ ಮಹತ್ವ ಪಡೆಯುತ್ತದೆ. ಕಂಟ್ರಾಕ್ಷನ್ ಆರಂಭವಾಗದಂತೆ ತಾಯಿಗೆ ಅನೇಕ ಔಷಧಗಳನ್ನು ಕೊಡುತ್ತಿದ್ದೇವೆ. ಇತ್ಯಾದಿ...
ನಮ್ಮ ಸಂಭಾಷಣೆ ನಡೆಯುತ್ತಿದ್ದಂತೆ ಮೆಲೀಸಾಳ ಪೇಜರ್ ಗೆ ಕರೆ ಬಂತು.

ಮುಂದುವರೆಯುವುದು....



# ಅಜ್ಜಿ ಮನೆಯ ನೆನಪುಗಳು

**ಪವಿತ್ರಾ ರಾಜೀವ್.** ನ್ಯೂಜೆರ್ಸಿ.

ಸುಮಾರು ಹತ್ತು ವರ್ಷಗಳ ಹಿಂದೆ, ಬೇಸಿಗೆ ರಜೆಗಾಗಿ ಅಮೇರಿಕಾದಿಂದ ಭಾರತಕ್ಕೆ ನಮ್ಮ ಕುಟುಂಬ ಸಮೇತರಾಗಿ ಪ್ರವಾಸ ಹೊರಟೆವು. ಅದು ನನ್ನ ಮೊದಲ ಭಾರತ ಪ್ರವಾಸ. ಮೊದಲ ಬಾರಿಗೆ ಅಜ್ಜಿಯ ಮನೆಗೆ ಹೋಗೋ ಸಂಭ್ರಮದಲ್ಲಿ ನನ್ನ ಮನಸ್ಸು ಖುಷಿಯಿಂದ ತೇಲುತಿತ್ತು. ನನ್ನ ಅಮ್ಮನ ಮನೆಯ ಬಗ್ಗೆ, ಊರಿನ ಬಗ್ಗೆ, ಅಲ್ಲಿನ ಪ್ರಕೃತಿ- ಬೆಟ್ಟ ಗುಡ್ಡಗಳಬಗ್ಗೆ ಹಲವು ಬಾರಿ ಅಮ್ಮನಿಂದ ತಿಳಿದಿದ್ದೆ. ಅಮ್ಮನ ಮಾತು ಕೇಳಿದಾಗೆಲ್ಲ ಅಜ್ಜಿಯ ಮನೆಗೆ ಹೋಗಬೇಕೆಂಬ ಹಂಬಲ ಹೆಚ್ಚಾಗುತಿತ್ತು. ಅಂತೂ ಆ ದಿನ ಇಂದೇ ಬಂದಿಹುದು ಎಂದು ಬಲು ಸಂತೋಷವಾಯಿತು.

ಹದಿನೆಂಟು ಗಂಟೆಗಳ ವಿಮಾನ ಪ್ರಯಾಣದ ನಂತರ, ವಿಮಾನ ನಿಲ್ದಾಣದಿಂದ ಕಾರು ಹಿಡಿದು, ಇನ್ನೂ ನಾಲ್ಕು ಗಂಟೆಗಳ ರಸ್ತೆ ಪ್ರಯಾಣದ ನಂತರ ಅಜ್ಜಿಯ ಮನೆಯನ್ನು ಸೇರಿದೆವು. ಪ್ರಯಾಣ ಮಾಡುವ ದಾರಿಯಲ್ಲಿ ಎಲ್ಲೆಲ್ಲೂ ಹಚ್ಚ ಹಸಿರು, ಮರ, ಗಿಡ, ಪಕ್ಷಿ, ಹೂವು, ನದಿ, ಜಲಪಾತಗಳು. ಇವೆಲ್ಲದರ ವಿಶ್ಲೇಷಣೆ ಅಮ್ಮನಿಂದ ತಿಳಿದಿದ್ದೆ, ಆದರೆ ಅವೆಲ್ಲವನ್ನು ಕಣ್ಣಾರೆ ಕಂಡು ನಿಬ್ಬೆರಗಾದೆ. ಪ್ರಕೃತಿ ಮಾತೆಯ ಸೌಂದರ್ಯವು ನನ್ನ ಮನಸ್ಸಿಗೆ ಆಹ್ಲಾದ, ಉತ್ಸಹ ಮತ್ತು ನೆಮ್ಮದಿಯ ಭಾವ ತಂದಿತು.

ವಿಶಾಲವಾದ ಅಂಗಳ, ಅದರ ಮಧ್ಯೆ ತುಳಸಿ ಬೃಂದಾವನ, ಅಲ್ಲೇ ಪಕ್ಕದಲ್ಲಿ ದನ-ಕರುಗಳ ಸ್ಥಾನ, ಇವೆಲ್ಲವನ್ನೂ ಪೂರ್ಣಗೊಳಿಸಲು ಇದ್ದ ದೊಡ್ಡ ಹಂಚಿನ ತೊಟ್ಟಿ ಮನೆ- ಅದೇ ನನ್ನ ಅಜ್ಜಿ ಮನೆ. ಮೊದಲ ಬಾರಿ ಅಜ್ಜಿಯ ಮನೆಗೆ ಹೋಗೋ ಕಾತುರ, ಅಜ್ಜ- ಅಜ್ಜಿಯರನ್ನ ಭೇಟಿಮಾಡೋ ಆತುರದಲ್ಲಿ, ಕಾರಿನಿಂದ ಇಳಿದು ಮೊದಲು ನಾನೇ ಮನೆಯೊಳಗೆ ಓಡಿದೆನು. ಅಮ್ಮ- ಅಪ್ಪ ಇಬ್ಬರು ಹಿಂದೆ ನಮ್ಮ ಲಗೇಜುಗಳನ್ನು ಹಿಡಿದು ಬಂದರು. ಅಷ್ಟರಲ್ಲಿ ಅಜ್ಜ- ಅಜ್ಜಿ ಇಬ್ಬರೂ ನಾವು ಬರುವ ದಾರಿಯನ್ನೇ ಎದುರು ನೋಡುತಾ, ಸಂತೋಷದಿಂದ ಹೊರಗೆ ಬಂದು ನನ್ನನ್ನು ಅಪ್ಪಿಕೊಂಡರು. ಅವರ ಕಣ್ಣಂಚಿನಲ್ಲಿ ಹನಿನೀರು ಜಿನುಗಿತು. ಅಮ್ಮ - ಅಪ್ಪನನ್ನು  ಕೂಡ ಸಂತೋಷದಿಂದ ಮನೆಯೊಳಗೆ ಬರಮಾಡಿಕೊಂಡರು.

ಅಜ್ಜಿಯು ಒಳಗೆ ಹೋಗಿ ನಮಗೆ ನೀರು ಕುಡಿಯಲು ತಂದು ಕೊಟ್ಟು, ಊಟೋಪಚಾರದ ವ್ಯವಸ್ಥೆ ಮಾಡಲು ಅಡುಗೆ ಮನೆಯೊಳಕ್ಕೆ ಹೋದರು. ಅಷ್ಟರಲ್ಲಿ ಅಜ್ಜ ನಮ್ಮ ಪ್ರಯಾಣದ ಬಗ್ಗೆ ವಿಚಾರಿಸುತ್ತಾ, ಎಲೆ-ಅಡಿಕೆಯನ್ನು ಮೆಲ್ಲುತ್ತಿದ್ದರು. ಅವರ ಬಾಯಿಯಿಂದ ಕೆಂಪಗಿನ ಬಣ್ಣವನ್ನು ಕಂಡು ನಾನು ಒಮ್ಮೆಲೇ ಹೆದರಿ ಅಮ್ಮನ ಬಳಿಗೆ ಓಡಿ, ಮೆಲ್ಲಗೆ ಅಮ್ಮನ ಕಿವಿಯಲ್ಲಿ, " ಅಜ್ಜನ ಬಾಯಿಯಿಂದ ರಕ್ತ ಬರುತಿದೆ", ಎಂದು ಪಿಸುಗುಡುವಷ್ಟರಲ್ಲಿ, ಅಮ್ಮನು ನಗುತಾ, ಅದು ರಕ್ತವಲ್ಲ ಎಲೆ ಅಡಿಕೆ ಮತ್ತುಸುಣ್ಣವೆಂದು, ಅದನ್ನು ತಿನ್ನುವುದರಿಂದ ಬಾಯಿ ಕೆಂಪಗಾಗುವುದೆಂದು ವಿವರಿಸಿದಳು. ಇದನ್ನು ಕೇಳಿ ಮುಗುಳುನಗುತ್ತಾ ಕೈಯಿಂದ ಹಣೆ ಬಡೆದುಕೊಳ್ಳುತಾ ನಾನು ಅಜ್ಜನ ಬಳಿಗೆ ಹೋಗಿ ಅವರ ಬಾಯಿಯನ್ನೇ ಗಮನಿಸುತಿದ್ದೆನು. ಸ್ವಲ್ಪ ಹೊತ್ತಿನ ನಂತರ ಅದು ರಕ್ತವಲ್ಲ ಎಂಬುದು ನನಗೆ ಖಾತ್ರಿಯಾಗಿ ಸಮಾಧಾನವಾಯಿತು.



ಇವೆಲ್ಲದರ ಮಧ್ಯೆ ಸಮಯ ಹೋದದ್ದು ತಿಳಿಯಲೇ ಇಲ್ಲ. ಗಂಟೆ ಸರಿ ಸುಮಾರು ಸಂಜೆ ಎಂಟಾಗಿತ್ತು. ಅಡುಗೆ ಮನೆಯಿಂದ ಅಜ್ಜಿಯು ಊಟಕ್ಕೆ ಎಲ್ಲರು ಬನ್ನಿ ಎನ್ನುವ ಕೂಗು ಕೇಳಿಸಿತು. ನನಗಂತೂ ಬಹಳ ಹಸಿವೆಯಾಗಿ ಹೊಟ್ಟೆ ತಾಳ ಹಾಕುತಿತ್ತು. ಕೂಗು ಕೇಳಿಸಿದ್ದೆ ಸರಿಯೆಂದು ಅಡುಗೆ ಮನೆಗೆ ಧಾವಿಸಿದೆನು. ಒಳಗೆ ಹೋಗಿ ನೋಡಲು ಹಸಿರು ಬಾಳೆ ಎಲೆಗಳನ್ನು ಹಾಕಿ ಅದರ ಮೇಲೆ ವಿವಿಧ ರೀತಿಯ ಪಕ್ವಾನ್ನಗಳನ್ನು ಬಡಿಸಿದ್ದರು. ಎಲೆಯಮೇಲೆ ಹೇಗೆ ಊಟ ಮಾಡುವುದು, ತಟ್ಟೆ ಚಮಚಗಳೆಲ್ಲಿ ಎನ್ನುವ ಪ್ರಶ್ನೆಗಳು ನನ್ನಲಿ ಮೂಡಿದವು. ಅಷ್ಟರಲ್ಲಿ ಅಪ್ಪ- ಅಮ್ಮ- ಅಜ್ಜ ಎಲ್ಲರೂ ಬಂದು ಎಲೆಯ ಮುಂದೆ ಕುಳಿತು ಭೋಜನ ಪ್ರಾರಂಭಿಸಿದರು. ಅವರೆಲ್ಲರೂ ಊಟ ಮಾಡುವುದನ್ನು ನೋಡಿ ನಾನು ಹಾಗೆಯೇ ಅದೇ ಕ್ರಮದಲ್ಲಿ ಊಟ ಮಾಡಿದೆನು. ಈ ರೀತಿ ಭೋಜನ ಮಾಡುವ ಅನುಭವ ಹೊಸದಾಗಿತ್ತು. ಅಜ್ಜಿಯು ಮಾಡಿದ ಎಲ್ಲ ಪಕ್ವಾನ್ನಗಳು ಬಲು ರುಚಿಯಾಗಿತ್ತು, ಅಮೇರಿಕಾದಲ್ಲಿ ಎಂದೂ ಕಾಣದ ಹಾಗು ತಿನ್ನದೇ ಇದ್ದಂತಹ ತಿನಿಸುಗಳು ಅದಾಗಿದ್ದವು. ಆ ರುಚಿಕರ ಆಹಾರವನ್ನು ಸೇವಿಸುತ್ತಾ ನನ್ನ ಮನಸ್ಸು ಹಾಗು ಹೊಟ್ಟೆಗಳೆರಡೂ ಸಂತೃಪ್ತಿಗೊಂಡವು.

ಊಟವಾದ ಬಳಿಕ ಬಾಳೆ ಹಣ್ಣುಗಳನ್ನು ತಿಂದೆವು, ಅಜ್ಜ ಎಲೆ-ಅಡಿಕೆಯನ್ನು ಹಾಕಿಕೊಂಡು ಕುಳಿತರು. ಸ್ವಲ್ಪ ಸಮಯವಾದ ನಂತರ ಅಜ್ಜಿಯು ನಮಗೆ ಮಲಗಲು ಒಂದು ಕೋಣೆಯೊಳಗೆ ಹಾಸಿಗೆಯ ವ್ಯವಸ್ಥೆಯನ್ನು ಮಾಡಿದರು. ಆ ಕೋಣೆಯೊಳಗೆ ಹೋಗಿ ನೋಡಲು ನೆಲದಮೇಲೆ ಹಾಸಿಗೆ, ದಿಂಬು ಮತ್ತು ಹೊದ್ದಿಕೆಗಳನ್ನು ಹಾಕಲಾಗಿತ್ತು. ಅಮೇರಿಕಾದಲ್ಲಿ ಎಂದೂ ನೆಲದಮೇಲೆ ಮಲಗುವ ಅನುಭವವಿಲ್ಲದ್ದರಿಂದ ಅಮ್ಮನ ಬಳಿಗೆ ಹೋಗಿ ನೆಲದಮೇಲೆ ಮಲಗುವುದು ಹೇಗೆಂದು ಆತಂಕದಿಂದ ಕೇಳಿದೆನು. ಆಗ ಅಮ್ಮನು ನನ್ನನ್ನು ಕೋಣೆಯೊಳಗೆ ಕರೆದುಕೊಂಡುಹೋಗಿ ಸಮಾಧಾನಮಾಡಿ, ಆ ಹಾಸಿಗೆಯ ಮೇಲೆ ಮಲಗಿಸಿ, ಹೊದ್ದಿಕೆಯನ್ನು ಹೊದ್ದಿಸಿದಳು. ಈ ಹಾಸಿಗೆಯೂ ನಮ್ಮ ಹಾಸಿಗೆಯ ಹಾಗೆಯೇ ಎಂದು ಅವಳು ಹೇಳುವಷ್ಟರಲ್ಲಿ ನನಗೆ ಈ ಲೋಕದ ಪರಿವೆಯೇ ಇಲ್ಲದೆ ಮಲಗಿದ ಕೂಡಲೇ ನಿದ್ರಾಲೋಕಕ್ಕೆ ಜಾರಿದೆನು.

ಮರುದಿನ ಬೆಳಿಗ್ಗೆ ನಾನು ಏಳುವಷ್ಟರಲ್ಲಿಯೇ ಗಂಟೆ ಎಂಟಾಗಿತ್ತು. ಮನೆಯವರೆಲ್ಲರೂ ಬೇಗನೆ ಎದ್ದು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದ್ದರು. ಅಮ್ಮ ಮತ್ತು ಅಜ್ಜಿಯು ಅಡುಗೆ ಮನೆಯಲ್ಲಿ ಮಾತನಾಡುತ್ತಾ ತಿಂಡಿ ತಿನಿಸುಗಳನ್ನು ತಯಾರಿಸುತ್ತಿದ್ದರು. ಅಜ್ಜ ಹಾಗು ಅಪ್ಪ ಇಬ್ಬರೂ ತೋಟದಕಡೆಗೆ ಹೊರಟಿದ್ದರು. ನಾನು ಬೇಗ ಎದ್ದು ಮುಖ ತೊಳೆದು ಅಜ್ಜನ ಬಳಿಗೆ ಓಡಿ, ಅವರ ಜೊತೆ ತೋಟಕ್ಕೆ ಹೊರಟೆನು. ಅಜ್ಜ ನಮಗೆ ಅವರ ತೋಟದಲ್ಲಿನ ಅಡಿಕೆ, ತೆಂಗು, ಮಾವು, ಹಲಸು ಇವುಗಳ ಬಗ್ಗೆ ವಿವರಿಸಿದರು. ದಾರಿಯಲ್ಲಿ ಕೆಲವು ಮಾವಿನ ಹಣ್ಣು ಮತ್ತು ಹಲಸಿನ ಹಣ್ಣುಗಳನ್ನು ಕೊಯ್ದು ನಮಗೂ ರುಚಿನೋಡಲು ಕೊಟ್ಟರು. ಮೊದಲ ಬಾರಿಗೆ ಹಣ್ಣುಗಳನ್ನು ಮರದಿಂದ ಕಿತ್ತುತಿನ್ನುವ ಅನುಭವ ಬಲು ಸೊಗಸಾಗಿತ್ತು. ಆಹಾ! ಎಂತಹಾ ರುಚಿ-ಸಿಹಿ ಆ ಹಣ್ಣುಗಳಲ್ಲಿ ತುಂಬಿದ್ದವು, ಅದನ್ನು ವರ್ಣಿಸಲು ಅಸಾಧ್ಯ.

ನಾವು ತೋಟದಿಂದ ಬರುವಷ್ಟರಲ್ಲಿ ಮೋಡಕವಿದಂತಾಗಿ ಜೋರು ಮಳೆ ಶುರುವಾಯಿತು. ನಾವೂ ನೆನೆಯುತ್ತಲೇ ಮನೆಗೆ ಓಡಿಬಂದೆವು. ಮಳೆಯಿಂದ ನಮ್ಮ ಉಡುಗೆಗಳೆಲ್ಲ ಒದ್ದೆಯಾಗಿ ನಾವು ನಿಂತಲ್ಲೆಲ್ಲಾ ನೀರು ಜಾರುತ್ತಿತ್ತು. ಹೇಗೂ ನನ್ನ ಉಡುಗೆಯು ನೆನೆದಿರುವುದು ಎಂದು ಯೋಚಿಸಿ ಮಳೆಯಲ್ಲಿ ಆಟವಾಡಲು ಮುಂದಾದೆ. ಮಳೆಯಲ್ಲಿ ನೆಂದ ಆ ಅನುಭವವನ್ನು ನಾನು ಹೇಗೆ ವಿವರಿಸಲಿ. ಆ ಮಣ್ಣಿನ ಸುವಾಸನೆ, ನೀರಿನ ಚಟಪಟ ಸದ್ದು, ತಣ್ಣನೆಯ ಗಾಳಿ, ಗುಡುಗು, ಮಿಂಚು ಅಬ್ಬಬ್ಬಾ. ಸ್ವಲ್ಪ ಸಮಯದ ನಂತರ ಮಳೆನಿಂತುಹೋಗಿ ಸೂರ್ಯ ರಶ್ಮಿಗಳು ಭುವಿಯಮೇಲೆ ಬೀರಿದವು, ಅದರ ಜೊತೆಗೆ ಬಣ್ಣಬಣ್ಣದ ಕಾಮನಬಿಲ್ಲು ಗಗನದಲ್ಲಿ ಮೂಡಿದವು. ಆಹಾ! ಎಂತಹಾ ನಯನ ಮನೋಹರ ದೃಶ್ಯ. ಇವೆಲ್ಲವನ್ನೂ ನೋಡುತ್ತಾ ದಿಗ್ಭ್ರಾಂತನಾಗಿ ನಾನು ನಿಂತಿದ್ದೆನು. ಅಷ್ಟರಲ್ಲಿ ಅಮ್ಮನು ಒಳಗಿನಿಂದ ಬಂದು ನನ್ನನ್ನು ಅಭ್ಯಂಜನಮಾಡಿಸಲು ಕರೆದುಕೊಂಡು ಹೋದಳು. ಸೌದೆ ಒಲೆಯಿಂದ ನೀರನ್ನು ಕಾಯಿಸಿ ನನಗೆ ಸ್ನಾನವನ್ನು ಮಾಡಿಸಿ ಶುಭ್ರ ವಸ್ತ್ರಗಳನ್ನು ತೊಡಿಸಿದಳು. ಸ್ನಾನಾನಂತರ ಅಜ್ಜಿಯು ಮಾಡಿದ ತಿಂಡಿಯನ್ನು ತಿಂದು ಆಡಲು ಅಂಗಳಕ್ಕೆ ಬಂದು ಚಂಡಾಟವನ್ನು ಆಡಿದೆನು.

ಹೇಗೆ ಒಂದೆರಡು ದಿನಗಳು ಕಳೆದವು. ನಂತರ ಒಂದು ದಿನ ನಾನು ಅಂಗಳದಲ್ಲಿ ಆಡುತಿದ್ದ ಸಮಯದಲ್ಲಿ ದೂರದಲ್ಲಿ ಒಂದು ಹಾವು ಚಲಿಸುವುದನ್ನು ಕಂಡು ಹೆದರಿ ಆಟವನ್ನು ಬಿಟ್ಟು ಅಜ್ಜನನ್ನು ಕೂಗುತ್ತ ಒಳಗೆ ಓಡಿದೆನು. ಮನೆಯವರೆಲ್ಲರೂ ನನ್ನ ಬಳಿಗೆ ಬಂದು ಏನಾಯಿತೆಂದು ಕೇಳಲು ನಾನು ಹಾವನ್ನು ಅಂಗಳದಲ್ಲಿ ತೋರಿಸಿದೆನು. ಭಯದಿಂದ ನಾನು ಬೆವರುತ್ತ ಆ ಹಾವಿನ ವಿಷಯ ಅಜ್ಜನಲ್ಲಿ ಕೇಳಲು, ಆಗ ಅಜ್ಜನವರು,ಇಂತಹ ಹಾವುಗಳು ಇಲ್ಲಿ ಓಡಾಡುವುದು ಸಹಜ ಸಾಮಾನ್ಯ, ಅದಕ್ಕೆ ನಾವು ತೊಂದರೆ ಮಾಡದಿದ್ದರೆ ಆ ಜಂತುಗಳೂ ನಮಗೆ ತೊಂದರೆ ಮಾಡುವುದಿಲ್ಲವೆಂದು ವಿವರಿಸಿದರು. ಅವರ ಈ ಮಾತುಗಳನ್ನು ಕೇಳಿ ನನಗೆ, ಪ್ರಕೃತಿಯು ಎಷ್ಟು ಸುಂದರವೋ ಅಷ್ಟೇ ಭಯಾನಕವು ಹೌದು ಎಂದೆನಿಸಿತು. ಪ್ರಾಣಿ- ಪಕ್ಷಿ- ಗಿಡ ಮರಗಳನ್ನು ನಾವು ಕಾಪಾಡಿದರೆ ಅವೂ ಸಹ ನಮ್ಮನ್ನು ಕಣ್ರೆಪ್ಪೆಯಂತೆ ಕಾಯುವುದು ಎಂಬ ಸತ್ಯವು ಅರಿವಾಯಿತು.

ಹೀಗೆ ಒಂದು ವಾರಗಳ ಬಳಿಕ ಆ ಊರಿನ ಮುಖ್ಯಸ್ಥರು ಅಜ್ಜನನ್ನು ಭೇಟಿಯಾಗಲು ನಮ್ಮ ಮನೆಗೆ ಬಂದರು. ಬಂದವರು ನಮ್ಮೆಲ್ಲರನ್ನೂ ಮಾತಾಡಿಸುತ್ತಾ ಊರ ಜಾತ್ರೆ ಹಾಗು ಸ್ಥಳ ದೈವಗಳ ಆರಾಧನಾ ಮಹೋತ್ಸವಗಳ ಮಾಹಿತಿ ನೀಡಿ ನಮ್ಮೆಲ್ಲರನ್ನೂ ಆ ವಿಶೇಷ ಪೂಜೆಗಳಿಗೆ ಆಹ್ವಾನಿಸಿದರು. ಮನೆಯವರೆಲ್ಲರೂ ಸಂತೋಷಗೊಂಡು ದೇವರ ಸೇವೆಯಲ್ಲಿ ಪಾಲ್ಗೊಳ್ಳುವುದಾಗಿ ಹೇಳಿ ಅವರನ್ನು ಸತ್ಕರಿಸಿ ಕಳುಹಿಸಿದೆವು.

ಎರಡು ದಿನಗಳು ಕಳೆದ ನಂತರ ಜಾತ್ರಾ ಮಹೋತ್ಸವವು ಬಂದಿತು. ನಮ್ಮ ಮನೆಯವರೆಲ್ಲರೂ ತಯಾರಾಗಿ ಊರ ಜಾತ್ರೆಯನ್ನು ನೋಡಲು ಹೊರಟೆವು. ಮೊದಲ ಬಾರಿಗೆ ನಾನು ಭಾರತೀಯ ಉಡುಗೆ ತೊಡುಗೆಗಳನ್ನು ಧರಿಸಿದೆನು. ಆ ಬಣ್ಣದ ಅಂಗಿ, ಪೈಜಾಮ, ಕೊರಳಿನ ಮಣಿಹಾರ, ಹಣೆಯ ಮೇಲಿನ ಕುಂಕುಮವನ್ನು ಧರಿಸಿದ ನನ್ನನ್ನು ನಾನೇ ಕನ್ನಡಿಯಲ್ಲಿ ಕಂಡು ಆಶ್ಚರ್ಯ ಚಕಿತನಾದೆನು. ಎಲ್ಲರೂ ತಯಾರಾಗುವ ಹೊತ್ತಿಗೆ ಒಂದು ಕಾರಿನಲ್ಲಿ ಆ ಊರಿನ ಮುಖ್ಯಸ್ಥರೊಬ್ಬರು ನಮ್ಮನ್ನು ಜಾತ್ರೆಗೆ ಕರೆದೊಯ್ಯಲು ಬಂದು ನಮ್ಮನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋದರು. ಅಲ್ಲಿಗೆ ತಲುಪಿದ ನಂತರ ದೇಗುಲ ದರ್ಶನ ಮಾಡಿ, ಊರ ದೇವರಿಗೆ ನಮಸ್ಕರಿಸಿ ರಥೋತ್ಸವವನ್ನು ಕಣ್ತುಂಬಿಕೊಂಡೆವು. ಆಹಾ!! ಎಂತಹ ರಮಣೀಯ ದೃಶ್ಯ, ಎತ್ತ ನೋಡಿದರು ಬಣ್ಣಗಳು, ಹೂವು ಹಣ್ಣು ಗಂಧ ಚಂದನಗಳ ಪರಿಮಳ. ಎಲ್ಲಿ ನೋಡಿದರು ಸಾಗರದ ಹಾಗೆ ಜನ ಜಂಗುಳಿ. ಅಷ್ಟು ಜನರನ್ನು ಎಂದೂ ಕಂಡಿರದ ನಾನು ಹೆದರಿ ಅಮ್ಮನ ಕೈಯನ್ನು ಗಟ್ಟಿಯಾಗಿ ಹಿಡಿದು ಮುಂದೆ ಸಾಗಿದೆನು.

ಜಾತ್ರೆಯ ದರ್ಶನವಾದ ನಂತರ ಪ್ರಸಾದವನ್ನು ಸ್ವೀಕರಿಸಲು ದೇಗುಲದ ಅನ್ನ ಛತ್ರಕ್ಕೆ ಹೋಗಿ ಪ್ರಸಾದವನ್ನು ಸ್ವೀಕರಿಸಿದೆವು. ಆ ಪ್ರಸಾದದ ರುಚಿಯಂತೂ ಅಮೃತದಂತಿತ್ತು. ಇಂದಿಗೂ ನೆನೆದರೆ ಬಾಯಲ್ಲಿ ನೀರೂರುವುದು. ಪ್ರಸಾದದ ನಂತರ ಸ್ಥಳ ದೈವಗಳ ಸ್ಥಾನಕ್ಕೆ ಭೇಟಿ ನೀಡಿ ದೈವಗಳ ಆರಾಧನೆಯನ್ನು ಹಾಗು ದೈವ ನರ್ತಕರ ನರ್ತನವನ್ನು ಕಂಡು ಕೃತಾರ್ಥರಾದೆವು. ನಂತರ ಪ್ರಸಾದವನ್ನು ಸ್ವೀಕರಿಸಿ ಆ ದಿನದ ಅನುಭವಗಳನ್ನು ಮೆಲುಕು ಹಾಕುತ್ತ ಮನೆಗೆ ಬಂದು ತಲುಪಿದೆವು.

ಈ ರೀತಿ ನಾವು ಅಜ್ಜ- ಅಜ್ಜಿಯರ ಮನೆಯಲ್ಲಿ ಹದಿನೈದು ದಿವಸಗಳು ಸಂತೋಷದಿಂದ ಕಾಲಕಳೆದೆವು. ಅಜ್ಜಿಯು ಮಾಡಿದ ರುಚಿಕರ ತಿನಿಸುಗಳನ್ನು ರುಚಿಸುತ್ತಾ, ಅಜ್ಜನ ಅನುಭವದ ಮಾತುಗಳನ್ನು ಕೇಳುತ್ತಾ, ಅವರ ಪ್ರೀತಿಯ ಸವಿಯನ್ನು ಸವಿಯುತ್ತಾ ದಿನಗಳು ಹೇಗೆ ಕಳೆಯಿತೋ ತಿಳಿಯಲೇಯಿಲ್ಲ. ನಾನೂ ಆ ಮನೆಯವನೇ, ಆ ಊರಿನವನೇ ಎನ್ನುವ ಭಾವನೆಯು ಮೂಡಿತ್ತು. ಮತ್ತೆ ಅಮೆರಿಕಾಗೆ ಹಿಂದಿರುಗಬೇಕು ಎನ್ನುವುದೇ ಮರೆತುಹೋಗಿತ್ತು. ಕೊನೆಗೂ ನಾವು ವಾಪಾಸ್ ಆಗುವ ದಿನ ಬಂದೇಬಿಟ್ಟಿತು. ನನ್ನವರು ಅಂದುಕೊಂಡಿದ್ದ ಅಜ್ಜ- ಅಜ್ಜಿ, ನನ್ನದು ಅಂದುಕೊಂಡಿದ್ದ ಮನೆ, ಊರು, ಭಾರತದೇಶ ಎಲ್ಲವನ್ನು ಬಿಟ್ಟು ಹೊರಡುವ ದಿನ.

ನಾವು ಹೊರಡುವ ಮುನ್ನ ಅಜ್ಜ - ಅಜ್ಜಿಯ ಆಶೀರ್ವಾದ ಪಡೆದು, ಅವರನ್ನು ನೋಡುವ ಸಲುವಾಗಿ ಇನ್ನುಮುಂದೆ ವರ್ಷಕ್ಕೊಮ್ಮೆ ಬರುವುದಾಗಿ ಅವರಿಗೆ ಭರವಸೆ ನೀಡಿ ಬಹಳ ದುಃಖದಿಂದ ಹೊರಟೆವು. ನಮ್ಮನ್ನು ಬೀಳ್ಕೊಡುವಾಗ ಅವರ ಕಣ್ಣಂಚಿನಲ್ಲಿ ಕಣ್ಣೀರು ಜಾರಿದವು, ಅದನ್ನು ಕಂಡು ನನ್ನ ಮನಸ್ಸು ಕರಗಿ ನೀರಾಗಿ ಬಹಳ ದುಃಖವಾಯಿತು.

ನಾವು ವಿಮಾನದಲ್ಲಿ ಪ್ರಯಾಣ ಮಾಡಿ ಅಮೆರಿಕಾವನ್ನು ತಲುಪಿದೆವು. ನಮ್ಮ ಮನೆಯನ್ನು ತಲುಪಿದ ನಂತರವೂ ನನಗೆ ಅಜ್ಜಿಯ ಮನೆ ನೆನಪುಗಳು ಆಗಾಗ್ಗೆ ಕಾಡುತ್ತಿದ್ದವು. ಅಂದಿನಿಂದ ಮತ್ತೆ ಯಾವಾಗ ಬೇಸಿಗೆ ರಜೆಯು ಬರುವುದೋ, ಅಜ್ಜಿಯ ಮನೆಗೆ ಯಾವಾಗ ಹೋಗುವೆನೋ ಎಂದು ಕಾತುರದಿಂದ ಕಾಯುತಿದ್ದೆ.

ನೋಡುನೋಡುತ್ತಿದ್ದಂತೆಯೇ ಹತ್ತು ವರ್ಷಗಳು ಉರುಳಿಹೋದವು. ಅಂದಿನಿಂದ ಇಂದಿನವರೆಗೂ ಭಾರತಕ್ಕೆ ಹೋಗಲು ಕಾರಣಾಂತರಗಳಿಂದ ಸಾಧ್ಯವಾಗಲೇ ಇಲ್ಲ. ಅಜ್ಜ - ಅಜ್ಜಿಗೆ ಮಾಡಿದ ಭರವಸೆಯನ್ನು ಪಾಲಿಸಲು ಸಾಧ್ಯವಾಗಲಿಲ್ಲವೆಂಬ ಪಾಪಪ್ರಜ್ಞೆಯು ನನ್ನನ್ನು ಆಗಾಗ್ಗೆ ಕಾಡುವುದಾದರೂ, ಬಾಲಕನಾಗಿದ್ದಾಗ ಅಜ್ಜಿಯ ಮನೆಗೆ ಹೋದಂತಹ ಸವಿ ನೆನಪುಗಳು ಇಂದಿಗೂ ನನ್ನ ಮನದಲ್ಲಿ ಜೀವಂತವಾಗಿರುವುದು. ಅಮೇರಿಕಾಕ್ಕೆ ಮರಳಿದ ನಂತರ ಅಮ್ಮನಿಂದ ಕನ್ನಡವನ್ನು ಓದಲು ಹಾಗು ಬರೆಯಲು ಕಲಿತು ಈ ನನ್ನ ಅನುಭವಗಳನ್ನು ನಿಮ್ಮ ಮುಂದೆ ಬಿಚ್ಚಿಟ್ಟಿದ್ದೇನೆ. ನನ್ನನ್ನು ಆಶೀರ್ವದಿಸಿ.

# ಮಕರ ಸಂಕ್ರಾಂತಿ



**ಅನನ್ಯ ಪ್ರಕಾಶ್. ನ್ಯೂಜೆರ್ಸಿ**

ಮಕರ ಸಂಕ್ರಾಂತಿಯು ಜನವರಿ ತಿಂಗಳಲ್ಲಿ ಆಚರಿಸಲಾಗುವ ಹಿಂದೂಗಳ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ, ಇದನ್ನು ಬಹುತೇಕ ಭಾರತದಾದ್ಯಂತ ಆಚರಿಸಲಾಗುತ್ತದೆ. ಇದನ್ನು ಮುಖ್ಯವಾಗಿ ಜನವರಿ ತಿಂಗಳ 14-15 ರಂದು ಆಚರಿಸಲಾಗುತ್ತದೆ. ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ಸೂರ್ಯನು ಮಕರ ರಾಶಿಯನ್ನು ಪ್ರವೇಶಿಸಿದಾಗ ಮಕರ ಸಂಕ್ರಾಂತಿ ಹಬ್ಬವನ್ನು ಆಚರಿಸಲಾಗುತ್ತದೆ. ಹೆಚ್ಚಾಗಿ ಹಿಂದೂ ಹಬ್ಬವನ್ನು ಚಂದ್ರನನ್ನು ಆಧರಿಸಿದ ಪಂಚಾಂಗದ ಮೂಲಕ ಲೆಕ್ಕ ಹಾಕಲಾಗುತ್ತದೆ. ಆದರೆ ಮಕರ ಸಂಕ್ರಾಂತಿಯನ್ನು ಸೂರ್ಯನನ್ನು ಆಧರಿಸಿದ ಪಂಚಾಂಗದ ಲೆಕ್ಕಾಚಾರದ ಮೂಲಕ ನಿರ್ಧರಿಸಲಾಗುತ್ತದೆ. ಸಂಕ್ರಾಂತಿ ಎಂದರೆ ಸೌರಮಾನದ ಪರ್ವ, ಮಕರ ಮಾಸದ ಆರಂಭದ ದಿನವೇ ಮಕರ ಸಂಕ್ರಾಂತಿ ಹಬ್ಬ.

.







ಈ ಮಂಗಳಕರ ದಿನದಂದು ಜನರು ಪವಿತ್ರ ನದಿಗಳಲ್ಲಿ ಸ್ನಾನ ಮಾಡುವ ಮೂಲಕ ತಮ್ಮ ಪಾಪಗಳನ್ನು ತೊಳೆದುಕೊಳ್ಳುತ್ತಾರೆ ಮತ್ತು ಸೂರ್ಯ ದೇವರನ್ನು ಪೂಜಿಸುತ್ತಾರೆ ಮತ್ತು ಅವರ ಆಶೀರ್ವಾದವನ್ನು ಪಡೆಯುತ್ತಾರೆ. ಜನರು ಈ ದಿನ ದಾನ ಕೂಡ ಮಾಡುತ್ತಾರೆ, ದಾನ ಮಾಡುವುದರಿಂದ ಸೂರ್ಯದೇವನು ಪ್ರಸನ್ನನಾಗುತ್ತಾನೆ ಮತ್ತು ಮೋಕ್ಷ ಪ್ರಾಪ್ತಿಯಾಗುತ್ತದೆ ಎಂದು ನಂಬಲಾಗಿದೆ. ಮಕರ ಸಂಕ್ರಾಂತಿ ತನ್ನದೇ ಆದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ಸಂಕ್ರಾಂತಿಯು ರೈತರ ಪಾಲಿನ ಸುಗ್ಗಿ ಹಬ್ಬವಾಗಿದೆ. ಬೆಳೆಗಳ ಉತ್ತಮ ಫಸಲುಗಳನ್ನು ಪಡೆದ ಸಂತೋಷದಲ್ಲಿ ಮಕರ ಸಂಕ್ರಾಂತಿಯನ್ನು ಆಚರಿಸಲಾಗುತ್ತದೆ. ಇದು ಭೂಮಿ ತಾಯಿಯ ಮೇಲಿನ ಕಾಳಜಿ ಹಾಗೂ ಕೃತಜ್ಞತೆ ಹಾಗೂ ಸಂತೋಷದ ಪ್ರತೀಕವಾಗಿದೆ. ಭಾರತವನ್ನು ಹೊರತುಪಡಿಸಿ, ನೇಪಾಳ, ಬಾಂಗ್ಲಾದೇಶ, ಶ್ರೀಲಂಕಾ ಮತ್ತು ಮಲೇಷಿಯಾದಂತಹ ವಿವಿಧ ದೇಶಗಳಲ್ಲಿ ಇದನ್ನು ಆಚರಿಸಲಾಗುತ್ತದೆ. ಹಬ್ಬದ ದಿನದಂದು ಜನರು ತಮ್ಮ ಸಂಬಂಧಿಕರ ಮನೆಗಳಿಗೆ ಹೋಗುತ್ತಾರೆ ಮತ್ತು ಸಿಹಿತಿಂಡಿಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ.

ಈ ದಿನ ಎಳ್ಳು ಮತ್ತು ಬೆಲ್ಲ ಕೂಡ ಬಹಳ ಮುಖ್ಯ ಹಾಗಾಗಿ ಮನೆಗಳಲ್ಲಿ ಎಳ್ಳು ಮತ್ತು ಬೆಲ್ಲದ ವಿವಿಧ ಸಿಹಿತಿಂಡಿಗಳನ್ನು ತಯಾರಿಸಲಾಗುತ್ತದೆ. ಕರ್ನಾಟಕದಲ್ಲಿ ಸಂಕ್ರಾಂತಿಗೆ ಸಂಬಂಧಪಟ್ಟ ಆಚರಣೆಗಳಲ್ಲಿ ಮುಖ್ಯವಾಗಿ ಕಂಡುಬರುವುದು "ಎಳ್ಳು ಬೆಲ್ಲ". ಮನೆಯಲ್ಲಿ ಎಳ್ಳು ಬೆಲ್ಲವನ್ನು ತಯಾರಿಸಿ ಸುತ್ತಲಿನ ಮನೆಗಳಿಗೆ "ಎಳ್ಳುಹಂಚುವುದು" ಸಂಕ್ರಾಂತಿಯ ಸಂಪ್ರದಾಯ. ಎಳ್ಳಿನ ಜೊತೆಗೆ ಸಕ್ಕರೆ ಅಚ್ಚುಗಳು, ಹಣ್ಣು ಮತ್ತು ಕಬ್ಬಿನ ತುಂಡುಗಳನ್ನು ಸಹ ಬೀರುವುದುಂಟು. ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಿದ ಬೆಲ್ಲ, ಒಣ ಕೊಬ್ಬರಿ, ಹುರಿಗಡಲೆ, ಸಿಪ್ಪೆ ತೆಗೆದ ಕಡಲೇಕಾಯಿ ಬೀಜ ಹಾಗೂ ಹುರಿದ ಬಿಳಿ ಎಳ್ಳನ್ನು ಸೇರಿಸಿ "ಎಳ್ಳು ಬೆಲ್ಲ" ತಯಾರಿಸಲಾಗುತ್ತದೆ. ಹೆಣ್ಣುಮಕ್ಕಳು ಹೊಸ ಬಟ್ಟೆಗಳನ್ನು ಧರಿಸಿ ಒಂದು ತಟ್ಟೆಯಲ್ಲಿ ಎಳ್ಳುಬೆಲ್ಲದೊಂದಿಗೆ ಹತ್ತಿರದ ಜನರನ್ನು ಮತ್ತು ಸಂಬಂಧಿಗಳನ್ನು ಭೇಟಿಯಾಗಿ ಎಳ್ಳುಬೆಲ್ಲವನ್ನು ವಿನಿಮಯ ಮಾಡಿಕೊಳ್ಳುತ್ತಾರೆ. "ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡೋಣ" ಎಂದು ಹೇಳಿಕೊಳ್ಳುತ್ತಾರೆ. ನಮ್ಮ ಮನೆಯಲ್ಲಿ ಸಂಕ್ರಾಂತಿ ಹಬ್ಬದಂದು ಎಳ್ಳು ಬೆಲ್ಲ ತಯಾರಿಸಿ ಸಂಭ್ರಮಿಸುತ್ತೇವೆ. ನಾವು ನಮ್ಮ ಸ್ನೇಹಿತರ ಮನೆಗಳಿಗೆ ಹೋಗಿ ಎಳ್ಳು ಬೆಲ್ಲ ಬೀರಿದೆವು. ನಾನು ಸಂಕ್ರಾಂತಿಯನ್ನು ಆಚರಿಸುವುದು ತುಂಬಾ ಇಷ್ಟಪಡುತ್ತೇನೆ!



# ಕವನಗಳು

ಚೈತ್ರದ ಬೃಂಗ......



**ಡಾ. ಹರಿಕುಮಾರ್- ಬೆಂಗಳೂರು**

## ||ಮಾಯ||

ಮಾಯವಾಯಿತೇಕೆ ಮನಮನಗಳ ಮಿಲನ
ಸ್ವಪ್ರೇರಿತನಾಗಿ ನೀ ಮಾಡಿದ ಕೆಲಸಗಳೆಲ್ಲ
ಅತೃಪ್ತ ಆತ್ಮಗಳು ಅನಾಥ ತಾಣದಲಿ
ಇನ್ನೂ ಹರ್ಷಪಡಲು ಕಾರಣಗಳು ಉಳಿದಿದೆಯೆ?

ಒಂಟಿಯಾಗಿ ಕುಳಿತು ನೀ ಕೇಳುವೆ ಏಕೆ
ಕಡಲ ಭೋರ್ಗರೆತ ಯೋಚಿಸಿದರೆ ಆಗದು
ನಿನ್ನ ಮನ ಹರಿತ ಅರಿಯಬೇಕು
ನೀನಿನ್ನೂ ಪ್ರಕೃತಿಯ ಸಮದ್ದೇಶಗಳ

ಎಲ್ಲ ಹುತ್ತಗಳು ಸರ್ಪಗಳ ಸ್ಥಾನವಲ್ಲ
ಎಲ್ಲ ಮರಗಳೂ ಫಲಗಳ ನೀಡುವುದಿಲ್ಲ
ಜೀವವಿದ್ದೂ ನೀ ಕಲ್ಲಿನ ಬೊಂಬೆಯಾಗದಿರು
ಶವವಾಗುವವರೆಗೆ ನೀ ಏನನ್ನೂ ಚಿಂತಿಸದಿರು

ನೀನು ಕೇವಲ ಏಕಮಾತ್ರ 'ನೀನು'
ಈ ಪರಿಕಲ್ಪನೆ ಪಕ್ವವಾಗಿರಲಿ ಭವಿಷ್ಯದಲಿ
ಭವಿಷ್ಯವಿದ್ದೂ ಭವಿಷ್ಯ ನಶಿಸುವ ಕಾರ್ಯ
ನಿನ್ನಿಂದ ನಿರಂತರವಾಗಿ ಸಾಗುತಿದೆ ನೀನೆ ಸಾಕ್ಷಿ ನಿನ್ನ ದೂರಿಗೆ..!

# ಮಡದಿಯ ಮನವಿ



**ಕಾವ್ಯಶ್ರೀ .ಹೆಚ್ . ಎಲ್.** *ದುಬೈ- ಯು.ಎ.ಇ.*

**||ಮಡದಿಯ ಮನವಿ||**

ನಗುವ ನೊಗವ ಎಳೆಯೋಣ ಬಾರಾ...

ಅಳುತ್ತಾ ಹುಟ್ಟಿದ ನಾವೆಲ್ಲರೂ, ಆ ಅಳುವಿನಿಂದ ಪಸರಿಸಿದ ಸಂತಸದ ನಗುವನ್ನು ಎಂದಿಗೂ ಮರೆಯಬಾರದು ನಲ್ಲ.

ಹಾಲುಣಿಸಿದ ತಾಯಿಯ ಮೊಗವ ನೋಡಿ, ಪುಟ್ಟ ಕೆಂದುಟಿಗಳ  ನಿಮ್ಮ  ನಿಷ್ಕಲ್ಮಶ ನಗು..

ತಂದೆಯ ತೊಳ ತೆಕ್ಕೆಯಲ್ಲಿ ತಣ್ಣನೆ ಮಲಗಿದ್ದಾಗ ನಿಮ್ಮ ಮೊಗದಲ್ಲಿನ ತೃಪ್ತಿಯ ನಗು..

ಅಣ್ಣನು ಅಂಗೈಗೆ ಕಚಗುಳಿ ಇಟ್ಟು ಆಡಿಸಿದಾಗ ಅಳುವಂತೆ ಕಾಣಿಸಿದ ನಿಮ್ಮ ಆನಂದದ ನಗು..

ಹೆಜ್ಜೆಯ ಮೇಲೆ ಹೆಜ್ಜೆಯನಿಟ್ಟು ನಡೆದಾಗ ಜಗತ್ತನ್ನೇ ಗೆದ್ದಂತಿದ್ದ ನಿಮ್ಮ ಗೆಲುವಿನ ನಗು..

ಶಾಲೆಯಲ್ಲಿ ಪದಕ ಪಡೆದಾಗ, ಇಂದ್ರನ ಪದವಿಯ ಪಡೆದಂತಿದ್ದ ನಿಮ್ಮ ಪರಾಕ್ರಮದ ನಗು..

ಪ್ರೇಮದ ಪರವಶದಲ್ಲಿ, ಪರಿವಾರವನ್ನು ಪ್ರಾರಂಭಿಸಿದಾಗಿನ  ನಿಮ್ಮ ಪರಿಪಕ್ವ ನಗು..

ಅಂದದ ಮಕ್ಕಳ ಕಂಡಾಗ, ದಣಿದ ಮೊಗದಲ್ಲಿನ ಚಂದದ ನಗು..

ಆದರೆ, ಈ ಸಂಸಾರದ ಸಾರಥಿಯಾದ ನೀವು ಇತ್ತೀಚಿಗೆ ಏಕೋ ನಿಮ್ಮನ್ನೇ ನೀವು ಅನುಮಾನಿಸಿ, ಅವಮಾನಿಸಿ ನಗುತ್ತಿದ್ದೀರಿ ... .

ಬನ್ನಿ..ಜೀವನದ ನೊಗ ಹೊತ್ತ ನೀವು,

ನಗುವಿನ ನೋಗವನ್ನೂ ಹೊರ ಬನ್ನಿ..

ಆ ನೊಗವನ್ನೆಳೆಯಲು ನಾನಿದ್ದೇನೆ ನಿಮ್ಮ ಜೊತೆ..

ನಗುವಿನ ನೊಗವ ಎಳೆಯೋಣ ಬನ್ನಿ ... .

# ತೇಲಿ ಬಂದನು ಮತ್ತೆ ವಸಂತ



**ಮಧುಕರ್ ರಾವ್.** ಮೈಸೂರು.

**||ತೇಲಿ ಬಂದನು ಮತ್ತೆ ವಸಂತ||**

ನವ ವಸಂತದ ಗಾಳಿ ಬೀಸುತ
ತೇಲಿ ಬಂದನು ಮತ್ತೆ ವಸಂತ
ಹೊಸ ಚಿಗುರು ನಳ ನಳಿಸುತ,
ಬಂತು ಬಂತು ಮತ್ತೆ ವಸಂತ,

ಮೊಗ್ಗು ಅರಳಿ ಕಂಗೊಳಿಸುತ,
ಹೊನ್ನಮಯ ಬೆಳಕು ಚೆಲ್ಲುತ.
ಮಲ್ಲಿಗೆಯ ಘಮಲು ಪರಿಮಳಿಸುತ
ತಂಪನ್ನು ಚೆಲ್ಲಿದೆ ಮತ್ತೆ ವಸಂತ.

ಶೃಂಗಾರದ ಮೈದುಂಬಿ ಪ್ರಕೃತಿಯ ಚಿತ್ತ,
ದುಂಬಿಯು ಜೇಂಕಾರದಿ ಗುನುಗುಡುತ,
ಬಣ್ಣ ಬಣ್ಣದ ಪತಂಗಿಗಳು ಹಾರಾಡುತ,
ಮಧು -ಮಕರಂದವ ಹೀರುತ.

ಎಲ್ಲಿ ನೋಡಿದರಲ್ಲಿ ಹಸಿರಿನ ತಂಪು ಚೆಲ್ಲುತ,
ಕೋಗಿಲೆಯು ಮತ್ತೆ ಮತ್ತೆ ಹಾಡುತ,
ಹೊಸ ವರುಷದ ಹರುಷದ ಹುರುಪು ತುಂಬುತ,
ತಂಗಾಳಿಯಲಿ ತೇಲಿ ಬಂದನು ಮತ್ತೆ ವಸಂತ.



**ಮಧುಕರ್ ರಾವ್.** ಮೈಸೂರು.

**||ಬದುಕು||**

ಬದುಕು ಜೀವನದ ಸ್ವಂತ,

ಆಶಾಭಾವನೆ ಇರಬೇಕು ಜೀವನ
ಪರ್ಯಂತ,

ಕಷ್ಟ ನಷ್ಟದ ಅರಿವು ಬದುಕಿನ ಭಾಗ
ಅಂತ,

ಒಂದಲ್ಲ ಒಂದಿನ ಎಲ್ಲ ಸರಿ ಹೋಗುತ್ತೆ
ಅಂತ,

ಪ್ರಯತ್ನ ಇದ್ದರೆ ಪ್ರತಿಶತ,

ಸನ್ಮಾರ್ಗದ ಸದ್ಭಾವನೆಯ ಚಿತ್ತ,

ಕೈ ಹಿಡಿಯುವವನು ಎಂದಿಗೂ ಭಗವಂತ,

ಅಂದುಕೊಂಡು ಪ್ರತಿ ದಿನ ಬದುಕೋದೆ
ನಿಶ್ಚಿಂತ.



**ಮಧುಕರ್ ರಾವ್.** ಮೈಸೂರು.


## ||ಬ್ಯಾಚುಲರ್ ಬವಣೆ||

ಹುಟ್ಟು ಜಾತಿಯಿಂದಲ್ಲ
ಮಾನವತೆಯ ಪರಿಯಿಂದಲ್ಲ.
ಓದು ಓದು ಮೂವತ್ತಾಯಿತಲ್ಲ,
ಬದುಕು ಹೊತ್ತು ಊರೂರು ಸುತ್ತೆನಲ್ಲ,
ಬ್ಯಾಚುಲರ್ ಬವಣೆ ನನ್ನದಾಯಿತಲ್ಲ.
||ನಾನೊಂದುಕೊಂಡಿದ್ದೇನಿಲ್ಲ,
ನೆನೆದವನು ನಡೆಸಿದಂತೆ ಎಲ್ಲ||

ಅಮ್ಮ ಜಾತಕ ಹಿಡಿದು ಸುತ್ತಾಡಿದಳಲ್ಲ,
ಚಪ್ಪಲಿ ಸವಿಸಿದರೂ ಸೊಸೆ ಸಿಕ್ಕಲಿಲ್ಲ,
ದೋಷ- ದ್ವೇಷ- ದಾರಿದ್ರ್ಯವಿಲ್ಲ.
ಇಲ್ಲಾ ಸಲ್ಲದ ನೆವವ ಸರಿ ಹೊಂದಿಲ್ಲ.
ಎಲ್ಲ ಇದ್ದೂ ಏನೋ ಇಲ್ಲ.
||ನಾನೊಂದುಕೊಂಡಿದ್ದೇನಿಲ್ಲ,
ನೆನೆದವನು ನಡೆಸಿದಂತೆ ಎಲ್ಲ||

ಮನೆಯಿದ್ದರೂ ಮನದೊಡತಿಯಿಲ್ಲ,
ಸುತ್ತಾಡೋಕೆ ಇದ್ದರೂ ಸಂಗಾತಿಯಿಲ್ಲ,
ಆನಂದವಿದ್ದರೇನು ಅನುರಾಗವಿಲ್ಲ,
ಅನುಕಂಪದ ಪ್ರೀತಿಯ ಬಿಕ್ಷೆ ಬೇಕಿಲ್ಲ,
ಹೃದಯವಂತಿಕೆಯ ಹೆಣ್ಣು ಸಿಕ್ಕಿಲ್ಲ,
||ನಾನೊಂದುಕೊಂಡಿದ್ದೇನಿಲ್ಲ,
ನೆನೆದವನು ನಡೆಸಿದಂತೆ ಎಲ್ಲ||

ನಾನಾ ವೃತ್ತಿಯ ಮಾಡಿ
ನಲವತ್ತಾಯಿತಲ್ಲ,
ಪ್ರೀತಿ - ಪ್ರೇಮದ ಅರಿವಿನ ಹುಚ್ಚು
ಹೆಚ್ಚಿಲ್ಲ,
ಕಷ್ಟ ಪಟ್ಟು ಕೂಡಿದ್ದು ಕಂಡವರ
ಪಾಲಾಗಲು ಬಿಡೋಲ್ಲ,
ಹುಟ್ಟಿಸಿದ ದೇವರು ಹೆಣ್ಣು
ತೋರುವನಲ್ಲ,
ನನಗೂ ನಂಬಿಕೆಯ ರಾಯರಿದ್ದಾರಲ್ಲ,
||ನಾನೊಂದುಕೊಂಡಿದ್ದೇನಿಲ್ಲ,
ನೆನೆದವನು ನಡೆಸಿದಂತೆ ಎಲ್ಲ||




# ನೆನಪಿನ ಜಗುಲಿಯಲಿ

**ಡಾ. ಶ್ವೇತಾ ಪ್ರಕಾಶ್.** ಬೆಂಗಳೂರು.

**||ನೆನಪಿನ ಜಗುಲಿಯಲಿ||**

ಮು0ಜಾವಿನಲಿ ಎದ್ದ  ಅಜ್ಜಿ
ಅ0ಗಳ ಸಾರಿಸಿ   ಸೂರ್ಯೋದಯಕ್ಕೆ
ಮುಂಚೆ  ಮನೆ  ಅಂಗಳದಲಿ
ಬಾಗಿಲ ಎದಿರು ಮತ್ತು
ಬೃಂದಾವನದ ಮುಂದೆ  ಎಳೆ ರಂಗೋಲಿ
ಕೆಮ್ಮಣ್ಣಿನಿ0ದ ಸಿ0ಗರಿಸಿ...
ಹಿತ್ತಿಲಿನಲ್ಲಿ
ನಿತ್ಯ  ಕರ್ಮವ ಮುಗಿಸಿ... ನೀರಿನ
ಮನೆ (ಸ್ನಾನದ ಮನೆ ) ಕಡೆ ನಡೆವಾಗ
ಮಡಿಕೋಲಿನಲಿ  ಮಡಿ ಬಟ್ಟೆ
ಗಳನು ಎಳೆದು  ಹಾಕಿಕೊಳ್ಳವುದು
ಮಾಮೂಲಾಗಿ
ನಡೆಯುವ ಕ್ರಿಯೆ.. ನೀರಿನ ಮನೆ
ವೈಭವ ಹೇಳತಿರದು..... ಪಳ ಪಳ
ಹೊಳೆಯುವ  ತಾ0ಬ್ರದ  ಹ0ಡೆ ಅರ್ಧ
ಸೌಧೆಯ ನಿತ್ಯ  ಉರಿಗೆ
ಕಪ್ಪಾದರು....
ಹಬ್ಬ  ಹರಿದಿನಗಳ ನಮ್ಮ
ಅಭ್ಯಂಜನವಾಗುವಾಗ
ಅದಕ್ಕೆ  ಸುಣ್ಣ
ಕೆಮ್ಮಣ್ಣಿನಿ0ದ ಶೃ0ಗಾರ..
ನಡೆಯುತ್ತಿದ್ದ ನೆನಪು
ದೀಪಾವಳಿ  ನೀರು ತು0ಬುವ ಹಬ್ಬ  ..
ಹೆಚ್ಚು  ಕಡಿಮೆ ಕುದಿವ ನೀರು..
ತೋಡಲು
ಹಿಡಿಯಲು ಆಗದೇ  ಒದ್ದಾಡುವಾಗ ...
ಹಿರಿಯರ ನೆರವು ಬೇಕಿತ್ತು

...ನ0ಜಗೂಡಿನ ಪಿಂಕ್  ಹಲ್ಲುಪುಡಿ
ಎಡಗೈ  ಮಧ್ಯೆ  ತೋರು ಬೆರಳಿನಲಿ
ಅದ್ದಿ ಹಲ್ಲು  ಪಳ ಪಳ
ಹೊಳೆವ ಹಾಗೆ ಸ್ಪರ್ಧೆಯ0ತೆ
ಉಜ್ಜುವುದು ಅಮ್ಮ, ದೊಡ್ಡಮ್ಮ
ಯಾರೇ  ಕೇಳಿದರೂ ಈ.... ಈ..    ನಕ್ಕು
ದಂತಪಂಕ್ತಿಯನ್ನು
ತೋರಿಸುವುದು ...  ಇನ್ನು
ಮನೆಕೆಲಸಕ್ಕೆ
ಬರುತ್ತಿದ್ದವರು  ಇದ್ದಿಲನ್ನು
ಕಲ್ಲಿನ ಮೇಲೆ ಉಜ್ಜಿ .    ಪುಡಿ
ಮಾಡಿಕೊ0ಡು ಉಜ್ಜುವುದನು
ನೋಡಿದ್ದ ನೆನಪು... ಚ0ದ್ರಿಕಾ
ಅಥವಾ..ಮೈಸೂರು ಸ್ಯಾಂಡಲ್
...ಒ0ದೇ ಸೋಪು..... ಮನೆ ಮ0ದಿನ
ಹತ್ತು ಹದಿನಾರು ಜನರು
ಬಳಸಿದರೂ  ಸೋಪು ಕರಗದ  ಹಾಗೆ
ನೀರು  ನಿಲ್ಲದ ಹಾಗೆ
ನೋಡಿಕೊಳ್ಳಲು
ಜವಾಬ್ದಾರಿ ... ಜೊತೆಗೆ ಇ0ದಿನ
ಹಾಗೆ ಅಟ್ಯಾಚ್ಡ್ ಬಾತ್ ರೂಮ್
4ಮಂದಿಗೆ 4ಸೋಪ್  ...ಕಂಡೀಷನರ್
ಶ್ಯಾಂಪು ..



ಡಾ. ಶ್ವೇತಾ ಪ್ರಕಾಶ್. ಬೆಂಗಳೂರು.

## ||ನೆನಪಿನ ಜಗುಲಿಯಲಿ||

ಅಬ್ಬಾ…ಅಭ್ಯಂಜನಕ್ಕೆ
ಶೀಗೆಕಾಯಿ ಬೆರೆಸಿದ ಬಟ್ಟಲು …
ಬಿಸಿನೀರು ತೋಡಿ
ತಣ್ಣೀರಿನೊಂದಿಗೆ ಹದಮಾಡಿ …
ತಲೆಗೆ ಎರೆದರೆ…. ಬಿಳಿಪಾಗಿ
ಇದ್ದವರು ಮೆಲ್ಲಗೆ ಮುಖ
ಕಿವಿಗಳು ಕೆಂಪಾಗಿ… ನೀರಿನ
ಮನೆಯಿ೦ದ ಹತ್ತಿಯ ಸೀರೆ
ತು೦ಡೊ೦ದನ್ನು
ಸುತ್ತಿ ಹೊರಬ೦ದರೆ ಮು೦ದಿನ
ಸರದಿ ಯಾರೆಂದು ಮೊದಲೇ
ತೀರ್ಮಾನವಾಗಿರುತ್ತಿತ್ತು …
ಬರುವರು 2ತೆಂಗಿನ ಮೊಟ್ಟೆ
1ಸೌದೆ /ಬೆರಣಿಯನ್ನು ಒಲೆಗೆ
ಹಾಕಿ ಬರಬೇಕು… ಮತ್ತೆ
ದೊಡ್ಡವರು ಹ೦ಡೆಗೆ ಸೇದಿದ
ನೀರನ್ನು ಸುರಿಯುತ್ತಿದ್ದರು …
ಸ್ನಾನವಾದ ಮಕ್ಕಳು ಪಾರಿಜಾತ
ಮಲ್ಲಿಗೆ ಗಳನ್ನು ಬಿಡಿಸಿ ಸಣ್ಣ
ಸೂಜಿಯಲ್ಲಿ ಮಾಲೆ
ಕಟ್ಟಬೇಕಿತ್ತು …ನಡುಮನೆಯ
ಸಾಲಾಗಿ ಹಾಕಿದ ದೇವರ
ಫೋಟೋಗಳಿಗೆ …

ಹಾಗೆ ದೇವರ ಮನೆಯ ಪುಟ್ಟ ಪುಟ್ಟ
ಗಾರೆಯ ಮೆಟ್ಟಿಲು ಮೇಲೆ ಕುಳಿತ
ಸು೦ದರ ಕಳಶಕ್ಕೆ
ಗೌರಿ ಪೆಟ್ಟಿಗೆ ಒಳಗಿನ ವಿಗ್ರಹ
.. ಶ೦ಖ .. ಪಾದುಕೆ…
ಯಾತ್ರೆಯಿ೦ದ ತ೦ದ ಫೋಟೋ ….
ಎಲ್ಲಾ ದೇವರಿಗೂ ಮುಡಿಸಿ…
ಬೆತ್ತದ ತಟ್ಟೆಯಲಿ ಇನ್ನು
ಬಿಡಿ ಹೂ ಇಡುತ್ತಿದ್ದರೂ….
ಮರದಲಿ ಮಾಡಿದ ಪ೦ಚವಾಳ…
ಮಂದ
ಹಾಸನದಲ್ಲಿ ಕೂತ ದೇವರನು ಜೋಡಿ
ದೀಪಗಳ ನಡುವೆ …ಬೆನಕ ಬೆನಕ
ಏಕದಂತ ….ಮ೦ತ್ರ.. ಹೇಳಿದ ಮಧುರ
ನೆನಪು..ನಮಗಿಂತ ಕಿರಿಯರೂ
ತೊದಲು ಮ೦ತ್ರವೇ ಜಗಲಿಯಲ್ಲಿ
ಆಡಿಕೊಳ್ಳುವ ಮಕ್ಕಳ ಅ೦ದಿನ
ತಂತ್ರ ಸರಳವಾಗಿ
ನಡೆಯುತ್ತಿದ್ದ ಪೂಜೆ ತಾತ
ಮುಖುಟ ಉಟ್ಟು ಪೂಜೆ ಮಾಡಿ
ಮಂಗಳಾರತಿಯ ಗಂಟೆ ಜಾಗಟೆ
ಶಬ್ದಕ್ಕೆ … ಸಾಲಾಗಿ ಮನೆಯವರು
ನಿಲ್ಲುತ್ತಿದ್ದೆವು.

ಡಾ. ಶ್ವೇತಾ ಪ್ರಕಾಶ್. ಬೆಂಗಳೂರು.

**||ನೆನಪಿನ ಜಗುಲಿಯಲಿ||**

ಬೇಸಿಗೆ ರಜೆಯ  ಸಮಯದಲ್ಲಿ
ಸುಮಾರು 25 ಮ0ದಿ ಇದ್ದರೂ 7.30
ಯಿ0ದ
8   ಒಳಗೆ ಸ್ನಾನ ಸಂಧ್ಯಾವಂದನೆ ...
ಮುಗಿಯುತ್ತಿತ್ತು ..
ಅಂಗಳದ ಬೃಂದಾವನಕ್ಕೆ  ಪೂಜೆ
ಮಾಡಲು  ಮೇಲು ಕಚ್ಚೆಹಾಕಿದ
ಅಜ್ಜಿ ..ಬ0ದರೆ .ಪೂಜೆ ಮಾಡಿ
ಪ್ರದಕ್ಷಿಣೆ  ಮಾಡುವಾಗ
ಬೃಂದಾವನದ ನಂದನನ್ನೊಂದಿಗೆ
ಸಂಭಾಷಣೆಯ ಮಂತ್ರ (ಬ0ದು
ನೋಡುವೆನು ಗೋವಿ0ದ  ಚೆ0ದದಲಿ
ಸಾರಿಸುವೆನು ಗೋವಿ0ದ..
ರಂಗವಲ್ಲಿ ಇಡುವೆನು  ಗೋದವರಿ
ತೀರ್ಥದಲ್ಲಿ ಸ್ನಾನವನ್ನ
ಮಾಡುವೆನು ಗೋವಿ0ದ.... )
ಹೀಗೊಂದು
ಮ0ತ್ರವೆ0ದು ಅ0ದು ಕೊ0ಡಿದ್ದೆ
ನಾನು... ಮದುವೆಯಾದ ಮೇಲೆ..
ತಿಳಿಯಿತು... ದೇವರೊ0ದಿಗೆ
ಸ0ಬಾಷಣೆ... ಜೊತೆಗೆ  ಗೋವಿಂದನ
ನಾಮಸ್ಮರಣೆ ....  ತುಳಸಿ ಕುಡಿಯ
ಮೇಲೆ ನೀರು ಹಾಕಿ ತೀರ್ಥ ಕುಡಿದು
ತುಳಸಿಗೆ  ಹಚ್ಚಿದ ಅರಿಶಿನ
ಕುಂಕುಮದಿಂದ   ಮಾ0ಗಲ್ಯಾಕೆ
ಕೆನ್ನೆಗೆ ಹರಿಶಿನ ಹೆಚ್ಚಿ
ಹಣೆಯ ನೊಸಲಿಗೆ ಕು0ಕುಮ ಹಚ್ಚಿ
ಕೊ0ಡು ಮುತ್ತೈದ ಭಾಗ್ಯಾವ ಕೋರುವ
ಪದ್ಧತಿ ಎಷ್ಟು ವೈಜ್ಞಾನಿಕ
ಎಂದು ಈಗಿನ ..ವೈಜ್ಞಾನಿಕ
ಸಮೀಕ್ಷೆಯ ವರದಿ  ನಿರ್ಧರಿಸಿದೆ
(ಸಗಣಿ ,ರಂಗೋಲಿ ,ತುಳಸಿ ತೀರ್ಥ
ತುಳಸಿ ಪ್ರದಕ್ಷಿಣೆಯಲ್ಲಿ  ...
ಔಷಧಿಗಳು  ಗುಣ ತಿಳಿದು
ಪರಿಸರವನು ಗೌರವಿಸಿದ  ಸನಾತನ
ಸಂಸ್ಕೃತಿಗೆ ಶರಣಾಗಿದೆ ಮನಸು..
ಜಗುಲಿಯ ಮೇಲೆ  ಕುಳಿತ
ಮೊಮ್ಮಕ್ಕಳಿಗೆ ಪ್ರಸಾದವಾಗಿ
ಕೆ0ಪು.. ಕಲ್ಲುಸಕ್ಕರೆ ಯ
ಪ್ರಸಾದ ವಿನಿಯೋಗ.. ಅದು ನಮ್ಮ
ನಿಮ್ಮ  ಅ0ದಿನ  ಸುಯೋಗವಲ್ಲದೆ
ಮತ್ತೇನು ..


ಪ್ರತಿಭೆ
ಚೈತ್ರದ ಭೃಂಗ.....



# ಮ್ಯೂಸಿಕ್ ಮಾಂತ್ರಿಕ - ವೆಂಕಿ

**ಶ್ರೀಮತಿ ಸವಿತಾ ನಾಗೇಶ್.** ಬೆಂಗಳೂರು

ವೆಂಕಿ, ಅದ್ಭುತ ಯುವ ಕಲಾವಿದರು. ಇವರೊಬ್ಬ ತಬಲಾವಾದಕ, ಸಂಗೀತ ಕಲಾಕಾರ, ಸಾಹಿತಿ, ಆಧ್ಯಾತ್ಮ ಚಿಂತಕ, ಮ್ಯೂಸಿಕ್ ಥೆರಪಿಸ್ಟ್ ಮತ್ತು ಬೋಧಕ. ದೇಶ ವಿದೇಶಗಳಲ್ಲಿ ಹೆಸರು ಮಾಡಿದ್ದರೂ ಸ್ವದೇಶದ ಮೇಲಿನ ಅಭಿಮಾನದೊಂದಿಗೆ ೨೪*೭ ಸಂಗೀತಕ್ಕಾಗಿ ತನು ಮನ ಧನಗಳೊಟ್ಟಿಗೆ ಪ್ರಾಮಾಣಿಕವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಅಪಾರ ಯಶಸ್ಸನ್ನು ಗಳಿಸುತ್ತಿರುವ ಶ್ರೀ ಡಿ ಸಿ ವೆಂಕಟೇಶ್ ಅರ್ಥಾತ್ ವೆಂಕಿಯವರನ್ನು ಮ್ಯೂಸಿಕ್ ಮಾಂತ್ರಿಕ ಎನ್ನಬಹುದು.

ಮೈಸೂರು ಮೂಲದವರಾದರೂ ಹುಟ್ಟಿ ಬೆಳೆದದ್ದೆಲ್ಲ ಬೆಂಗಳೂರಿನಲ್ಲೇ. ಸುಸಂಸ್ಕೃತ ಸಾಂಪ್ರದಾಯಕ ಕುಟುಂಬ. ಶ್ರೀಮತಿ ಪದ್ಮಜ ಎಂ ಆರ್ ಮತ್ತು ಶ್ರೀ ಡಿ ಎಲ್ ಚಂದ್ರಶೇಖರ್ ದಂಪತಿಗಳಿಗೆ ಇಬ್ಬರು ಮಕ್ಕಳು. ಡಿ ಸಿ ವೆಂಕಟೇಶ್ ಹಾಗೂ ಡಿ ಸಿ ರಾಧಿಕಾ (ಕ್ಲಿನಿಕಲ್ ಸೈಕಲಾಜಿಯಲ್ಲಿ ಮಾಸ್ಟರ್ ಡಿಗ್ರಿ) ಭಜನೆ ಸತ್ಸಂಗಗಳಲ್ಲಿ ಸದಾ ನಿರತರಾಗಿರುತ್ತಿದ್ದ ಆಧ್ಯಾತ್ಮ ಮನೆತನ. ಅಜ್ಜಿ ಮನೆಯಲ್ಲೂ ಸಂಗೀತದ್ದೇ ವಾತಾರಣವಿದ್ದುದರಿಂದಲೋ ಏನೋ ಸಂಗೀತ ಸರಸ್ವತಿ ಒಲಿದಿದ್ದಳು, ಇವರಲ್ಲಿ ಬಂದು ನೆಲೆಸಿದ್ದಳು. ದಿವ್ಯನಾಮ ಸಂಕೀರ್ತನೆಯನ್ನು ಹಾಡುತ್ತಾ, ತ್ಯಾಗರಾಜರು ಮತ್ತು ಅವರ ಹಿಂದಿನ ಕಾಲದಲ್ಲಿದ್ದ ವಾಗ್ಗೇಯಕಾರರು ರಚಿಸಿದ ಗೀತೆಗಳನ್ನು ಹಾಡುತ್ತಿದ್ದ ಕುಟುಂಬ ಇವರದು. ಇದೇ ಸಂಸ್ಕಾರ ಈ ಮನೆಯ ಮಕ್ಕಳಿಗೆ ವರದಾನವಾಗೇ ಬಂದಿತು. ಮೂರು ವರುಷದ ವೆಂಕಿ ಚಿಕ್ಕಪ್ಪನ ಹರ್ಮೋನಿಯಂ ಹಿಡಿದು ನುಡಿಸುತ್ತಿದ್ದರೆ ದೇವಸ್ಥಾನಗಳಲ್ಲಿ ಬರುತ್ತಿದ್ದ ಭಕ್ತಾದಿಗಳಿಗೆ ಆಶ್ಚರ್ಯ. ಜೊತೆಗೆ ಮುದ್ದಾದ ಮಗುವಿನ ಸೌಂದರ್ಯಕ್ಕೆ ಸೋಲದ ಮನಸೇ ಇರಲಿಲ್ಲ! ತನ್ನಲ್ಲಿ ಸಾಧಿಸಲಾಗದನ್ನು ಮಕ್ಕಳಲ್ಲಿ ಬೆಳೆಸೋ ಎಲ್ಲ ತಾಯಂದಿರಂತೆ ವೆಂಕಿಯನ್ನೂ ಅವರ ತಾಯಿ ಬೆಳೆಸಿದರು. ೪ನೇ ವಯಸ್ಸಿಗೆ ತಾಯಿ ಹಿಂದೂಸ್ಥಾನಿಗೆ ಸೇರಿಸಿದರು. ಚಿಕ್ಕಪ್ಪ ಡಿ ಎಲ್ ರಾಧಾಕೃಷ್ಣರ ಪ್ರಭಾವದಿಂದ ಆಕಸ್ಮಿಕವಾಗಿ ವೆಂಕಿ ತಬಲ ತರಗತಿಗೂ ಸೇರುವಂತಾಯಿತು. ಶ್ರೀ ನಾಗರಾಜ್ ಗಾಯಕ್‌ವಾಡಾರವರವಿಂದ ಸಂಗೀತಾಭ್ಯಾಸ ಶುಭಾರಂಭವಾಯಿತು. ರಕ್ತಗತವಾಗಿ ಬಂದ ಕಲೆ ಮಗುವಿನಲ್ಲಿ ನೆಲೆ ನಿಲ್ಲಲು ಕಷ್ಟವೇನೂ ಆಗಲಿಲ್ಲ! ಏಳೆಂಟು ವರುಷದ ಬಾಲಕ ಕೀ ಬೋರ್ಡ್ ಕಾರ್ಡ್ಸ್ ನುಡಿಸುವಷ್ಟು ಜಾಣನಾದ. ಕಲಾ ಸರಸ್ವತಿಯ ಅನುಗ್ರಹದಿಂದ ೧೦ ವರುಷದವ ಮ್ಯೂಸಿಕ್ ಕಂಪೋಸ್ ಮಾಡುವಷ್ಟು ಬೆಳೆದರು. ಪರಿಚಿತರೋರ್ವರ ಸಹಾಯದಿಂದ ಪಾಶ್ಚಾತ್ಯ ಸಂಗೀತದ ಹಿಂದೆ ಪಯಣ ಬೆಳೆಸಿದರು. C7, C9 ಇವೆಲ್ಲ ಎಲ್ಲಿ ಸಿಗುತ್ತದೆಂದು ಕೇಳಿ, ಇಂಟರ್‌ನೆಟ್ ಎಂದದ್ದೇ ತಡ ಅದರೊಳಗೆ ಹೊಕ್ಕು, ತನಗೆ ಬೇಕಾದ ಹಲವಾರು ವಿಷಯಗಳನ್ನು ಅಲ್ಲಿಂದ ಹೆಕ್ಕಿ ಆರಿಸಿಕೊಂಡರು. ತನ್ನ ಅರಿವಿನ ಮಿತಿಗೆ ಅವುಗಳನ್ನು ಅಳವಡಿಸಿಕೊಂಡು ಬೆಳೆಯುತ್ತ ಸಾಗಿದರು.

ತನ್ನ ೧೬ನೇ ವಯಸ್ಸಿನಾಗಲೇ ತಬಲದ ವಿದ್ವತ್ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಟ್ಟಿಗೆ ವಿದ್ವಾನ್ ಆದರು. ಹಾಗಂತ ಹಾದಿಯೇನೂ ಸುಲಭವಿರಲಿಲ್ಲ. ಕಾಂಪಿಟೇಷನ್‌ಗಳೆಂದರೆ ಮೂಗೆಳೆಯುತ್ತಿದ್ದು, ಚಿಕ್ಕಂದಿನಿಂದಲೂ ಸಂಗೀತ ಸ್ಪರ್ಧೆಗಳಲ್ಲಿ ಆಸಕ್ತಿ ಇರಲಿಲ್ಲ. ತಾಯಿ ತಂದೆಯರ ಬಲವಂತಕ್ಕೆ ಕೆಲವೊಂದು ಸ್ಪರ್ಧೆಗಳಿಗೆ ಹೋಗಿದ್ದಾಯಿತು. ಬಹುಮಾನಗಳನ್ನು ಗೆದ್ದದ್ದಾಯಿತು. ಶೀಲ್ಡ್ ಸರ್ಟಿಫಿಕೇಟುಗಳ ತಂದು ಶೋಕೇಸಿನ ಅಲಂಕಾರವನ್ನೂ ಹೆಚ್ಚಿಸಿ ಆನಂದಗೊಂಡರು ಅವರಮ್ಮ! ಹಾದಿ ಸಾಗಿತ್ತು. ಪಿಯುಸಿ ಮುಗಿಯೋ ಹೊತ್ತಿಗಾಗಲೇ ಪ್ರೊಫೆಷನಲ್ ತಬಲಾ ಆರ್ಟಿಸ್ಟ್ ಆಗೇಬಿಟ್ಟರು. ಸಂಗೀತದ ಹಲವಾರು ಪ್ರಾಕಾರಗಳಿಗೆ, ನೃತ್ಯ, ಬ್ಯಾಲೆಗಳಿಗೆ ತಬಲ ನುಡಿಸುವಷ್ಟು ನೈಪುಣ್ಯತೆ ಹೊಂದಿದರು. ಬ್ಯಾಲೆ ಹಾಗೂ ಜುಗಲ್ ಬಂಧಿಗಳಿಗೆ ತಬಲ ನುಡಿಸೋದೇನು ಅಷ್ಟು ಸುಲಭದ ಸಂಗತಿಯಲ್ಲ! ಅಲ್ಲೂ ತಮ್ಮ ಪ್ರಾವಿಣ್ಯತೆಯನ್ನು ತೋರುತ್ತಾ ಪ್ರತಿಭಾನ್ವಿತರಾಗಿ ಬೆಳೆದರು.



## ಜೀವನದ ಮೊದಲ ತಿರುವು:

ಕಾಲೇಜಿಗೆ ಹೋಗಿ ಬರುತ್ತಿದ್ದ ಆ ದಿನಗಳಲ್ಲಿ ಚೆನ್ನೈ ಮೂಲದ ಕೃಷ್ಣಮೂರ್ತಿ ದಂಪತಿಗಳ ಪರಿಚಯವಾಯಿತು. ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದರೂ ಕೂಡಾ ಸಂಗೀತದಲ್ಲಿ ಅಪಾರ ಆಸಕ್ತಿ. ದಿನೇ ದಿನೇ ಇವರಿಬ್ಬರ ಸ್ನೇಹ ಹೆಚ್ಚಾಗುತ್ತಾ, ಮಕ್ಕಳಿಲ್ಲದ ಈ ದಂಪತಿಗಳಿಗೆ ಇವನೇ ಮಗನಾದ. ಕೆಲವೊಮ್ಮೆ ಕಾಲೇಜಿಗೆ ಬಂಕ್ ಮಾಡಿ ಇವರ ಮನೆಗೆ ಹೋಗುತ್ತಿದ್ದರು ವೆಂಕಿ. ಊಟ ತಿಂಡಿ ಕೆಲವೊಮ್ಮೆ ನಿದ್ದೆಯೂ ಅವರ ಮನೇಲೇ ಆಗುತ್ತಿತ್ತು. ಇವರ ಪತ್ನಿ ಬ್ಯಾಂಕ್‌ನ ಉನ್ನತ ಹುದ್ದೆಯಲ್ಲಿದ್ದರು. ಪತ್ನಿ ಕೆಲಸಕ್ಕೆ ಹೋದ ನಂತರ ಪತಿರಾಯರು ಗಿಡಗಳಿಗೆ ನೀರು ಹಾಕುತ್ತಾ ಹೂ ಬಿಡಿಸುತ್ತಿದ್ದರು. ಆಗೆಲ್ಲ ಈ ಯುವಕನಿಗೆ ಒಂದಷ್ಟು ಹೋಂವರ್ಕ್ ನೀಡುತ್ತಿದ್ದರು. 'ನನ್ನ ಕೆಲಸ ಮುಗಿಯೋದರೊಳಗೆ ನಿನ್ನ ಕೆಲಸ ಮುಗಿದಿರಬೇಕು ಓಕೆನಾ' ಎನ್ನುತ್ತಿದ್ದರು. ಹುರುಪಲ್ಲಿ ಅವರು ಕೊಡುತ್ತಿದ್ದ ಅಷ್ಟೂ ಮ್ಯೂಸಿಕ್ ನೊಟೇಷನ್ಸ್(ಸ್ವರಗಳು) ಮುಗಿಸಿ ಕೂರುತ್ತಿದ್ದ ಹುಡುಗನ ಶ್ರದ್ಧೆ ಆಸಕ್ತಿ ಕಂಡು ತಮ್ಮಲ್ಲಿದ್ದ ಅಷ್ಟೂ ಸಂಗೀತವನ್ನು ಧಾರೆಯೆರೆದರು. ಅವರು ಕೊಡುತ್ತಿದ್ದ ಹೋಂವರ್ಕ್ಗಳಿಂದಾಗಿ ರಿವೈಂಡ್ ಫಾರ್ವರ್ಡ್ ಮಾಡಿ ಮಾಡಿ ಕ್ಯಾಸೆಟ್ಟುಗಳೇ ಹೋಗಿ ಬಿಡುತ್ತಿದ್ದವು ಎಂದು ನೆನೆಸಿಕೊಂಡರು. ಸಂಗೀತದ ಲೆಜೆಂಡ್ ಶ್ರೀ ಟಿ ಆರ್ ಮಹಾಲಿಂಗಂರವರು ಕೃಷ್ಣಮೂರ್ತಿ ದಂಪತಿಗಳಿಗೆ ಬಹಳ ಆತ್ಮೀಯರಾಗಿದ್ದರು. ಅವರ ಒಡನಾಟದಿಂದಾಗಿ ಇನ್ನೂ ಹೆಚ್ಚು ಸಂಗೀತದ ವಿಷಯಗಳನ್ನು ಅರಿತಿದ್ದರು. ಅವರ ಸಂಗೀತ ಜ್ಞಾನವನ್ನು ವೆಂಕಿಯವರಿಗೂ ನೀಡುತ್ತ ಹಂಚಿಕೊಳ್ಳುತ್ತಿದ್ದರು. ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ ಹಲವು ಸ್ವರ ಸಂಗತಿಗಳನ್ನು ಆಳವಾಗಿ ಅರಿತು ಅಧ್ಯಯನ ಮಾಡಿ ಹಾಡುವ ಗಾಯಕರೇ ವಿರಳವಾಗುತ್ತಿರುವುದು ನೋವಿನ ಸಂಗತಿ ಎನ್ನುತ್ತಾರೆ. ಅವರ ಬುದ್ಧಿವಾದದ ಮಾತುಗಳಿಂದ ಪ್ರಭಾವಿತರಾದರು. ಇಬ್ಬರು ಕುಳಿತು ಬಹಳಷ್ಟು ವಿಷಯಗಳ ಬಗ್ಗೆ ಚರ್ಚೆ ನಡೆಸುತ್ತಿದ್ದರು. 'ಇವರು ನನ್ನ ಜೀವನದಲ್ಲಿ ಮುಖ್ಯ ಪಾತ್ರವನ್ನು ವಹಿಸಿದ ಮಹನೀಯರು. ಇವರಿಂದ ಕಲೆತದ್ದು ಅಪಾರವೆನ್ನುತ್ತಾ ಕ್ಷಣಕಾಲ ಮೌನವಾದರು. ಇಂದಿಗೂ ಅವರ ಒಡನಾಟವಿದೆ. ಸ್ಫೂರ್ತಿ ಉತ್ತೇಜನ ಪ್ರೇರಣೆ ದೊರೆಯುತ್ತಲಿದೆ.

## ವಿದ್ಯಾರ್ಥಿ ವೃಂದ/ಸಂಗೀತ ಶಾಲೆ:

ಅಲ್ಲೊಂದು ಆರೋಗ್ಯವಂತ ಹೆಮ್ಮರವಿದೆಯೆಂದರೆ ಜೇನುಗೂಡು ಕಟ್ಟುತ್ತದೆ, ಹಕ್ಕಿ ಪಕ್ಷಿಗಳು ಬಂದು ನೆಲೆಸುತ್ತವೆ. ಗೂಡು ಕಟ್ಟಿ ಮರಿ ಇಡುತ್ತವೆ. ಅವುಗಳ ಇಂಚರ ಅವುಗಳ ಸಂತಸ ವರ್ಣನಾತೀತ. ಹಾಗಂತ ಮರವೇನೂ ನಾನಿದ್ದೀನೆ ಬಾ ಬಾ ಎಂದು ಕರೆಯೋಲ್ಲ ಅಲ್ವಾ? ಎಂದರು. 'ನನ್ನ ಶಾಲೆಗೆ ಯಾವ ಹೆಸರನ್ನೂ ಇಟ್ಟಿಲ್ಲ, ಕೈಬೀಸಿ ಯಾರನ್ನೂ ಬನ್ನಿ ಪಾಠ ಹೇಳಿಕೊಡ್ತೀನಿ ಎನ್ನೋಲ್ಲ. ಅವರಾಗೇ ಹುಡುಕಿಕೊಂಡು ಬರುತ್ತಾರೆ ಹಕ್ಕಿ ಪಕ್ಷಿಗಳಂತೆ. ನನ್ನ ಜ್ಞಾನದ ಮಟ್ಟಿಗೆ ಅವರಿಗೆ ಸಂಗೀತ ಪಾಠ ಮಾಡುತ್ತೇನೆ. ನನ್ನೊಳಗೊಂದು ಸಂಗೀತದ ಗ್ರಂಥ ಭಂಡಾರವೇ ಇರಬಹುದು, ಅದಂತೂ ದಿಟ. ಯಾರು ಯಾವ ರೀತಿಯಲ್ಲಿ ಕೇಳಲಿ ಕೊಡಲು ನಾ ಸಿದ್ದ. ಪುಸ್ತಕ ಜ್ಞಾನಕ್ಕಿಂತ ಮಸ್ತಕ ಜ್ಞಾನ ಮುಖ್ಯವೆನ್ನುತ್ತಾರೆ. ಬಹಳ ವಿನಮ್ರತೆಯಿಂದ. ಅಹಂಭಾವ ರಹಿತ ಮಕ್ಕಳು ಇವರ ಟೀಮ್‌ನಲ್ಲಿದ್ದಾರೆ. ಸ್ವಿಗ್ಗಿ ಹುಡುಗನಿಂದ ಹಿಡಿದು ಶ್ರೀರಂಗನಂಥ ಶ್ರೀಮಂತ ಹುಡುಗರವರೆವಿಗೂ ಇದ್ದಾರೆ. ಕಲಿಯೋ ದಾಹವಿದ್ದರೆ ಸಾಕು ಹೇಳಿಕೊಡಲು ಇವರು ಸಿದ್ಧ. ಇವರಲ್ಲಿರುವ ವಿದ್ಯೆಯನ್ನು ಧಾರೆಯೆರಲು ಕೂಡಾ. ಒಂದು ಪೈಸೆ ಫೀಸೂ ಪಡೆಯದೆ ಎಂದಿದ್ದಾರೆ.

## ವಿಶೇಷ ಮಕ್ಕಳು:

ವಿಶೇಷ ಮಕ್ಕಳ ಮೇಲಿವರಿಗೆ ವಿಶೇಷ ಆಸಕ್ತಿ. ಅದೊಂದು ಕಾಲದಲ್ಲಿ ಮನಸಿತ್ತು. ವಿಶೇಷ ಮಕ್ಕಳಿಗಾಗಿ ಏನಾದರೊಂದು ಒಳ್ಳೆಯದು ಮಾಡಬೇಕೆಂದು. ೧೫೦ ಕಲಾವಿದರು ಹಾಡಿದ ಹಾಡೊಂದ UNICEF ಬಿಡುಗಡೆಗೊಳಿಸಿತ್ತು. ಅದರಲ್ಲಿ ಇವರದೂ ಒಂದು ಪಾತ್ರವಿದೆ. ಆಗ ಓದಿದ್ದೇ ಇಂಥ ಮಕ್ಕಳನ್ನು ಗುಣಮುಖರನ್ನಾಗಿ ಮಾಡೋ ಮ್ಯೂಸಿಕ್ ಥೆರಪಿ ಕೋರ್ಸ್! ಇದನ್ನು ಬಹಳ ಆಳವಾಗಿ ಆಸಕ್ತಿಯಿಂದ ಅಧ್ಯಯನ ಮಾಡಿ ಸರ್ಟಿಫಿಕೇಟನ್ನೂ ಪಡೆದರು. ಆಗೆಲ್ಲ ಹಲವಾರು ಮಕ್ಕಳಿಗೆ ಸಂಗೀತದ ಥೆರಪಿಗಳನ್ನೂ ನೀಡುವಲ್ಲಿ ತೃಪ್ತಿ ಕಂಡುಕೊಂಡಿದ್ದರು. ಕಾಲಕ್ರಮೇಣದಲ್ಲಿ ಅವರ ಅರಿವಿಗೆ ಏನೋ ಆಲೋಚನೆ ಹೊಳೆದು 'ಇವೆಲ್ಲಾ ಸ್ಟುಪಿಡ್ ಥಿಂಕಿಂಗ್' ಎಂದು ಬಿಟ್ಟರು. 'ಇಂಥಾ ಮಕ್ಕಳು ಆಲ್‌ರೆಡಿ ಯೋಗಿಗಳಂತೆ. ಅವರಿಗೆ ಅವರದೇ ಲೋಕ ಅವರದೇ ಜೀವನವಿರುತ್ತೆ. ಯಾರಲ್ಲಾದರೂ ಸರಿ ಮುಂದೆ ನಾನು ಬಾಲಮುರಳಿಕೃಷ್ಣಾನೋ ಅರ್ಜುನ್ ಜನ್ಯಾನೋ ಆಗಬೇಕು ಅನ್ನೋ ಸಂಕಲ್ಪವಿದ್ದರೆ ಏನಾದರೂ ಮಾಡಬಹುದು. ಆದರೆ ಇಂಥ ಮಕ್ಕಳಲ್ಲಿ ಆ ರೀತಿಯ ಸಂಕಲ್ಪಗಳಿರೋದಿಲ್ಲ. ಅವರಿಗೆ ಏನೋ ಆಗ್ಬೇಕು ಅನ್ನೋದೇ ಇರೋಲ್ಲ. ಆದರೆ ಅವರ ತಂದೆತಾಯಿಗೆ ಇರುತ್ತೆ ಅಷ್ಟೇ! ಇದರಿಂದ ಅವರುಗಳಲ್ಲಿ ಬದಲಾವಣೆ ಅಂತಹ ಊಹಾ ಮಟ್ಟದ್ದಲ್ಲಿ ಆಗುವುದಿಲ್ಲ  ಎಂಬ ನಿಲುವಿಗೆ ಬಂದೆ. ಅವರ ಸಂತೋಷಕ್ಕೆ ತಂದೆತಾಯ ತೃಪ್ತಿಯ ಭಾವಕ್ಕೆ ಕೆಲವಾರು ಇಂಥ ಮಕ್ಕಳಿಗೆ ಇಂದಿಗೂ ಸಂಗೀತ ಪಾಠ ನಡೆಸುತ್ತಿರುವೆ' ಎಂದರು.

## ಮುಂದಿನ ಹಾದಿಯಲ್ಲಿ...

ಪಿಯುಸಿಯ ಕೊನೆಯ ಅಥವಾ ಡಿಗ್ರಿಯ ಪ್ರಾರಂಭಿಕ ಹಂತ. ಆಗಾಗಲೇ ಸಿನಿಮಾ ಕ್ಷೇತ್ರದಲ್ಲಿ ಸಂಗೀತದ ಅರೆಂಜ್ಮೆಂಟ್ನಲ್ಲಿ ಬ್ಯುಸಿಯಾದರು. ಪ್ರಾಮಾಣಿಕವಾಗಿ ಸಂಗೀತದಲ್ಲಿ ಕೆಲಸಗಳನ್ನ ಮಾಡುತ್ತಿದ್ದಾಗ ಘರ್ಷಣೆಗಳು ಹೆಚ್ಚಾದವು. ನಾದದಲೆಗಳು ಮೇಲೆ ಮೇಲೆ ಕಿವಿಗಪ್ಪಳಿಸ ತೊಡಗಿದಾಗ, 'ನನ್ನುಸಿರೇ ಸಂಗೀತ ಎಂದೆಂದೂ ಬಿಡಲಾರೆ' ಎನ್ನುತ್ತಾ ಎಲ್ಲವನ್ನೂ ಮೆಟ್ಟಿ ಮುಂದುವರೆದರು. ಸಂಗೀತ ಅನ್ನೋದು ಮಾರಿಕೊಳ್ಳುವ ವಸ್ತುವಲ್ಲ! 'ಅಂತರಂಗ ಮುಕ್ತಿಗಾಗಿ ಹಾಡಬೇಕು' ಎಂಬ ನಿಲುವಿಗೆ ಬಂದರು. ಹಾಗಂತ ಬಾಗಿಲು ಮುಚ್ಕೊಂಡು ಹಾಡಿದರೆ, ಹೊಟ್ಟೆಪಾಡು? ಕಣ್ಮುಂದೆ ಪ್ರಶ್ನೆಯೊಂದು ಮೂಡಿತು. ಸಂಗೀತ ಬಿಟ್ಟು ಬೇರೇನೂ ಗೊತ್ತಿಲ್ಲದ್ದಂತ ಇವರಿಗೆ ಗೊಂದಲ ಶುರುವಾಯಿತು. ಆಗಾಗಲೇ ಹಲವು ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದರೂ ಮನದಲ್ಲಿ ಇನ್ನೂ ಬೆಳೆಯಬೇಕೆಂಬ ಹಂಬಲವಿದ್ದುದರಿಂದ ಅದೇ ಕೊನೆಯಾಗಲಿಲ್ಲ. ಆಧ್ಯಾತ್ಮ ಅಥವ ಸಂಗೀತ ಆಯ್ಕೆ ಯಾವುದು? ಮನದಲ್ಲಿ ಸಂಘರ್ಷ ಪ್ರಾರಂಭವಾಯಿತು.

## ಎರಡನೆಯ ತಿರುವು:

ಅಮೇರಿಕದಲ್ಲೊಂದು ಸಂಗೀತ ಕಛೇರಿ, ಅಲ್ಲಿಗೆ ಹೋಗಬೇಕೆಂದಾಗ ಗುಹಾರವರ ಫೋನ್ ನಂಬರ್ ಕೊಟ್ಟು ಭೇಟಿಯಾಗಲು ಹೇಳಿದವರು ಬೆಂಗಳೂರಿನ ಶ್ರೀ ಚಂದ್ರಶೇಖರ್‌ರವರು. ಇವರ ಜೀವನದ ಬಹುದೊಡ್ಡ ಬದಲಾವಣೆಗೆ ಕಾರಣರಾದ ವ್ಯಕ್ತಿಯ ಪರಿಚಯವು ಅಲ್ಲಾಯಿತು. ಇವರ ಮನಸಲ್ಲಿದ್ದ ಆಧ್ಯಾತ್ಮ, ಸಂಗೀತ ಕ್ಷೇತ್ರ ಅಥವ ಮಾಧ್ಯಮದಿಂದ ಉಂಟಾದ ಸಂಘರ್ಷದ ಹಾದಿಯಲ್ಲಿ ಸಾಗುತ್ತಿದ್ದವರಿಗೆ ಆಯ್ಕೆಯ ಅಸ್ಪಷ್ಟತೆ ಇತ್ತು. ಅದೇ ಸಮಯದಲ್ಲಿ ಆಕಸ್ಮಿಕವಾಗಿ ಮಹನೀಯರರೋರ್ವರ ಭೇಟಿಯಾಯಿತು. ಜೀವನದ ತಿರುವಿಗೆ ನಾಂದಿಯಾಯಿತು. ಗುರುಗಳಾಗಿ ಆಗಮಿಸಿ, ಬದಲಾವಣೆಯ ಸಾಕಾರಮೂರ್ತಿಗಳಾದರು. ಈಗಂತೂ ಆತ್ಮೀಯ ಗೆಳೆಯರೇ ಆಗಿರುವ ಶ್ರೀ ಸಭ್ಯಸಾಚಿ ಗುಹಾರವರು! ಅವರ ನಿಲುವು ವೆಂಕಿಯನ್ನು ಆಕರ್ಷಿಸಿತು! ಗುಹಾ-ವೃತ್ತಿಯಲ್ಲಿ ವಿಜ್ಞಾನಿ!  ಭೇಟಿಯ ಪ್ರಾರಂಭಿಕದಲ್ಲಿ ಅವರ ಮಾತುಗಳನ್ನು ತನ್ಮಯತೆಯಿಂದ ಧ್ಯಾನಮಗ್ನರಾಗಿ ಆಲಿಸುತ್ತಿದ್ದರು. ಮಂತ್ರಮುಗ್ಧರಾಗುತ್ತಿದ್ದರು. ಅವರ ಎಷ್ಟೋ ವಿಚಾರಗಳು ಅರ್ಥವಾಗುತ್ತಿರಲಿಲ್ಲ. ತದನಂತರದಲ್ಲಿ ಅವುಗಳನ್ನು ಮನನ ಮಾಡಿಕೊಂಡು, ಅವರಲ್ಲಿ ಪ್ರಶ್ನಿಸಲು ಪ್ರಾರಂಭಿಸಿದಾಗ ಗುಹಾರವರಿಗೆ ಇವರಲ್ಲಿನ ಆಸಕ್ತಿ ಹಾಗೂ ಇನ್ವಾಲ್ವ್‌ಮೆಂಟ್ ಕಂಡು ಇನ್ನೂ ಹತ್ತಿರಕ್ಕೆ ಎಳೆದುಕೊಂಡರು! ಆಳವಾದ ಇವರ ಬಂಧ,  ದಿನೇದಿನೇ ಹೆಚ್ಚಾಗ ತೊಡಗಿತು. ಆಧ್ಯಾತ್ಮದ ಸೆಳೆತವೇ ಹೌದೆನ್ನುವಂತಾಯಿತು. ಈ ರೀತಿಯ ಬೆಳವಣಿಗೆ ಅಷ್ಟೇನೂ ಸುಲಭದ ಮಾತಾಗಿರಲಿಲ್ಲ! ಹುಟ್ಟು ಸಂಪ್ರದಾಯಸ್ಥ ಮನೆತನದ ಹುಡುಗ ಇದ್ದಕ್ಕಿದ್ದಂತೆ ಈ ರೀತಿಯಲ್ಲಿ ಬದಲಾದನೆಂದರೆ ಎಲ್ಲರಲ್ಲೂ ಆತಂಕ ಮನೆ ಮಾಡಿತು. ತಂದೆತಾಯಿ ಮನೆಯ ಸಂಸ್ಕಾರ ಆಚಾರ ವಿಚಾರಗಳನ್ನು ಧಿಕ್ಕರಿಸುವಂತೆಯೇ ಆಯಿತು. ಒಂದು ಕಾಲದಲ್ಲಿ ಸಾವಿರ ಗಾಯಿತ್ರಿ ಮಾಡುತ್ತಿದ್ದ ಹುಡುಗನಲ್ಲಿಂದು, ಗಂಧ ಕುಂಕುಮಗಳ ಲೇಪನ ಹೋಯಿತು, ರುದ್ರಾಕ್ಷಿ ಸ್ಪಟಿಕ ಧಾರಣೆ ಹೊರಟೇ ಹೋಯಿತು. ಬೋಳು ಹಣೆ ಖಾಲಿ ಕೊರಳಾಯಿತು. ಇವೆಲ್ಲವೂ ಬಾಹ್ಯ ಗುರುತಿಗಾಗಿ ಎಂಬಷ್ಟು ಬದಲಾವಣೆಗೆ ಬಂದು ನಿಂತರು! 'ಆಂತರಿಕ ನಿಲುವೇ ಬೇರಾಗಿದೆ. ಹಾಗಾಗಿ ಇವುಗಳಿಂದ ಹೊರ ಬಂದಿರುವೆ. ದೇಹಕ್ಕೆ ಆಮ್ಲಜನಕ ಎಷ್ಟು ಮುಖ್ಯವೋ ಈಗ ಬದುಕುಳಿಯಲು ಹಣ ಅಷ್ಟೇ ಮುಖ್ಯ ಎನ್ನುತ್ತಾರೆ ಗುಹಾರವರು! ಈ ಸಂಪ್ರದಾಯಗಳಿಗೆ ಕೊನೆಯ ಹಾಡನ್ನು ಹಾಡಿದ್ದಾರೆ. ಒಟ್ಟಿನಲ್ಲಿ ಗುಹಾರವರ ಅಪ್ಪಟ ಶಿಷ್ಯರಾದರು. ಅವರು ತೋರಿದ ಹಾದಿಯಲ್ಲಿ ನಡೆಯುತ್ತ ಸಂಗೀತದ ಸಾಧನೆಯಲ್ಲಿ ಮುಂದುವರೆದರು.

## ಹೊರದೇಶಗಳಲ್ಲಿ ಸಂಗೀತ:

೨೦೧೧ ರಲ್ಲಿ ಯೂರೋಪಲ್ಲಿ ಗಣರಾಜ್ಯೋತ್ಸವದ ದಿನ ನೀಡಿದ್ದು ಪ್ರಥಮ ಸಂಗೀತ ಕಛೇರಿ. ನಂತರದ ಹಲವಾರು ಕರ್ಯಕ್ರಮಗಳು ಇಟಲಿ ಪ್ರಾನ್ಸ್ ಸ್ವಿಜರ್ ಲ್ಯಾಂಡ್, ಆಸ್ಟ್ರೇಲಿಯಾ. ಹಲವಾರು ಸಂಗೀತ ಕರ್ಯಕ್ರಮಗಳಿಗೆ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಅಂತರಾಷ್ಟ್ರಿಯ ಮಟ್ಟದ ಹೆಸರಾಂತ ಕಲಾವಿದರಾದ ಶ್ರೀ ನರಸಿಂಹ ವೇದಾವತಿ, ವೆಂಕಟೇಶ್‌ಕುಮಾರ್, ಜಯತೀರ್ಥವೇವುಂಡಿ, ಪಂಡಿತ್ ಸುಧೀಂದ್ರಭೌಮಿಕ್, ಡಾ ವಿಲಿಯಂ ಪೋವೆಲ್, ಪ್ರೊ.ಕ್ಲಾರಿನೆಟ್(ಲಾಸ್ ಏಂಜಲೀಸ್) ಹೀಗೇ ಇನ್ನೂ ಹಲವಾರು ಪ್ರತಿಷ್ಟರೊಟ್ಟಿಗೆ ಕೆಲಸ ನಿರ್ವಹಿಸಿದುದಲ್ಲದೇ ಜೊತೆಗೆ ಸೋಲೋ ಪರ್‌ಫಾರ್ಮೆನ್ಸ್ ಕೂಡಾ ನೀಡಿರುವರು.

ಒಮ್ಮೆ ಹೊರದೇಶದಲ್ಲಿ ಸಂಗೀತ ಕಛೇರಿ ನೀಡಿದ್ದೇ ಅದೃಷ್ಟ ದೇವತೆಯೂ ಒಲಿದಳು. ಮೇಲೆ ಮೇಲೆ ಹಲವಾರು ಸಂಗೀತ ಕರ್ಯಕ್ರಮಗಳು ಬರತೊಡಗಿದವು. ಇವರಲ್ಲಿ ಕೆಲವಾರೊಂದು ವಿಷಯಗಳನ್ನು ಸೂಕ್ಷ್ಮವಾಗಿ ಗುರುತಿಸಿ, ಪ್ರೋತ್ಸಾಹಿಸುವ ನಿಟ್ಟಿನಲ್ಲಿ 'ನಿನ್ನಲ್ಲಿ ಹೇಗೆ ತಬಲಾ ಸಂಗೀತ ಕಲಿಸುವ ಗುರುವಿದ್ದಾನೋ ಹಾಗೇ ನಿನ್ನಲ್ಲೊಬ್ಬ 'ಸಂಗೀತ ಉಪನ್ಯಾಸಕನೂ' ಇದ್ದಾನೆ. ಅದನ್ನು ಹೊರ ತಂದರೆ ನಿನ್ನ ಹೊಟ್ಟೆಪಾಡಿಗೊಂದು ಗಟ್ಟಿ ಬುನಾದಿ ದೊರಕುತ್ತದೆ ಎಂದಾಗ ಅವರ ಅಣತಿಯಂತೆ ಕರ್ಯಪ್ರವೃತ್ತರಾದರು. ದೊರೆತ ಸಣ್ಣ ಪುಟ್ಟ ಅವಕಾಶಗಳನ್ನು ಉತ್ತಮವಾಗಿ ಉಪಯೋಗಿಸಿಕೊಂಡುದರ ಪರಿಣಾಮವಾಗಿ ಪಿಟ್ಸ್‌ಬರ್ಗ್, ಫಿನಿಕ್ಸ್, ಕ್ಯಾಲಿಫೋರ್ನಿಯಾ ಮುಂತಾದವೆಡೆಗಳಲ್ಲಿ ಹಲವಾರು ಉಪನ್ಯಾಸಗಳನ್ನು ನೀಡಿ ಹೆಸರುಗಳಿಸಿದರು. ಪ್ರತಿಯೊಬ್ಬ ಮನುಷ್ಯನಲ್ಲೂ ಒಂದಲ್ಲ ಒಂದು ಕಲೆ ಇರುತ್ತದೆ. ಅದನ್ನು ಹೊರ ತರೋ ಗುರು ಸಿಕ್ಕಾಗ ಮಾತ್ರ ಅವನ ಪ್ರತಿಭೆಗೆ ದೊರಕುವ ಫಲ! ಅವನೇ ನಿಜವಾದ ಗುರು. ನಿಜವಾದ ಸಂಗೀತ ಉಪನ್ಯಾಸಕನಾಗಿ, ಇವರಾಗಬೇಕೆನ್ನೋ ಹಾದಿಯಲ್ಲಿ ಪ್ರತಿ ವಿದ್ಯಾರ್ಥಿಯ ಒಳಹೊಕ್ಕು ಅವರಲ್ಲಿನ ಪ್ರತಿಭೆಯನ್ನು ಹೊರತರಬೇಕೆಂದು ಶ್ರಮಿಸುತ್ತಿದ್ದಾರೆ. ಇಂಥಹ ಗುಣಗಳಿಂದ ಇವರ ಮಾರ್ಕೆಟ್ ಈ ದೇಶಕ್ಕಿಂತ ಹೊರದೇಶಗಳಲ್ಲೇ ಹೆಚ್ಚು. ಭಾರತೀಯರಿಗೆ ಸಾಹಿತ್ಯದೊಟ್ಟಿಗಿನ ಸಂಗೀತವಿಷ್ಟವಾದರೆ ಹೊರದೇಶದವರಿಗೆ ಸಾಹಿತ್ಯ ರಹಿತ ಸಂಗೀತವಿಷ್ಟವೆಂದು ಮನಗಂಡರು. ತಬಲ ವಿದೇಶಿಯರಿಗೆ ಹಾಗೂ ಹೊರದೇಶದಲ್ಲಿ ನೆಲೆಸಿರುವ ಭಾರತೀಯರಿಗೆ ಬಹಳವೇ ಅಚ್ಚುಮೆಚ್ಚು. ಅಲ್ಲಿನವರಿಗಾಗಿ ತರಗತಿಗಳನ್ನು ತೆಗೆದುಕೊಳ್ಳಲೋಸುಗವೇ ಪ್ರಯಾಣ ಬೆಳೆಸಿ ತಿಂಗಳಾನುಗಟ್ಟಲೆ ಅಲ್ಲೇ ನೆಲೆಸಿ ತರಬೇತು ನೀಡುತ್ತಾ ಯಶಸ್ಸನ್ನು ಕಂಡುಕೊಂಡಿದ್ದಾರೆ.

## ರಿಯಾಲಿಟಿ ಶೋಗಳ ಬಗ್ಗೆ ವೆಂಕಿ ಅವರ ಅಭಿಪ್ರಾಯ:

"ಅಲ್ಲೊಂದು ಟಾಲೆಂಟ್ ಕಿಡ್ ಇದೆ ಎಂದರೆ ಸಾಕು ತಾಯ್ತಂದೆ ಮೊದಲ್ಗೊಂಡು ಗುರುಗಳು ಅಕ್ಕಪಕ್ಕದವರು ಎಲ್ಲರೂ ಪ್ರೆಷರ್ ಹಾಕ್ತಾರೆ. ಇಲ್ಲೂ ಟಾಪಲ್ಲಿ ಬಹುಮಾನ ತಗೋಬೇಕು  ಕ್ಲಾಸಲ್ಲಿಯೂ ಟಾಪರ್ ಆಗಬ್ಬೇಕು. ಹೀಗಾದರೆ ಮಗುವಿನ ಕಥೆ ಏನಾಗಬೇಡ? ಮಾನಸಿಕ ದೈಹಿಕ ಆರೋಗ್ಯದ ಕಡೆ ಇವರುಗಳಿಗೆ ಕಾಳಜಿ ಅನ್ನೋದೇ ಇಲ್ವಾ? ಸರಿ ಇಷ್ಟೆಲ್ಲಾ ಮಾಡಿ ಮಗು ವಿನ್ನರ್ ಆಯ್ತು! ಮುಂದಾ? ಸಂಗೀತಾಭ್ಯಾಸ ಕೊನೆಯಾಗುತ್ತಾ? ಇಷ್ಟೇನಾ ಸಂಗೀತವೆಂದರೆ?  ಅದೊಂದು ಅಗಾಧವಾದ ಅಂತರಂಗ ಸಾಧನೆ. ಆರೋಗ್ಯವಂತ ಬೆಳವಣಿಗೆ ಆಗಬೇಕಿದೆ. ಪ್ರತಿಯೊಂದು ಕ್ಷೇತ್ರದಲ್ಲೂ ಇರುವಂತೆಯೇ ಇಲ್ಲೂ ಕೂಡಾ ಘರ್ಷಣೆ, ಒತ್ತಡ, ಸೋಲು ಗೆಲುವುಗಳಿವೆ. ಉತ್ತಮ ಸಂಗೀತದ ಹಾದಿಯಿದಲ್ಲ. ಈ ಅನುಭಾವ ಇವರೊಬ್ಬರದಲ್ಲ. ಇಂದಿನ ಹಲವಾರು ಸಂಗೀತ ಗುರುಗಳ ಅಭಿವ್ಯಕ್ತ. ಮನದ ಮಾತು! ತಂದೆತಾಯಿ ಕೂಡಾ ಸಹಕರಿಸಬೇಕಾಗುವುದು ಅತ್ಯವಶ್ಯ."

### ಯುವಪೀಳಿಗಿಗೆಗೆ ಅಥವಾ ಪ್ರತಿಭಾನ್ವಿತ ಮಗುವಿಗೆ ಕಿವಿಮಾತು:

ಟಾಲೆಂಟ್‌ನ ಚಾನಲೈಸ್ ಮಾಡೋಕೆ ಮಗುವಿನ ಒಳ್ಳೇದಕ್ಕೆ ಪ್ರಾಮುಖ್ಯತೆ ಕೊಡಿ. ಇವರುಗಳ ಉದ್ದೇಶ ಒಳ್ಳೇದಿದೆ. ಆದರೆ ಹೋಗೋ ದಾರಿ ಸರಿಯಿಲ್ಲ. ಈ ಹಂತದಲ್ಲಿ ಮಗು ವಿಕ್ಟಿಮ್! ದುಡ್ಡು ಮಾಡೋದು ಹೇಗೆ ಬೇಕಾದ್ರೂ ಮಾಡಹುದು. ನಾವೇನಿಷ್ಟ ಪಡುತ್ತೇವೋ ಅದರಿಂದ ದುಡಿಮೆ ಗೌರವ ಜ್ಞಾನ ಸನ್ಮಾನ ಸಮಾಜದಿಂದ ಫಲ ದೊರೆಯುತ್ತಿದೆಯೋ ಅವನೇ ಅದೃಷ್ಟವಂತ. ಮುಖವಾಡ ಹಾಕಿ ಬದುಕಬೇಡಿ. ತನ್ನ ಕಂಠ, ಸಾಮರ್ಥ್ಯ, ಕಂಪನಗಳೇನೆಂಬುದನ್ನು ಅರಿತುಕೊಂಡು ತನ್ನ ಇತಿಮಿತಿಯಲ್ಲಿ ಬೆಳೆದರೆ ಅದೇ ಹಿರಿದಾದದ್ದು.

### ನಡೆಯುತ್ತಿರುವ ಹಾದಿ...(ಮರಿಭಟ್ಟನಿಗೆ)

ಈಟೀವಿ, ಝೀಟಿವಿ, ಉದಯ, ಡಿಡಿ ಹಾಗೂ ಆಕಾಶವಾಣಿಯಲ್ಲಿ ಸತತವಾಗಿ ಕಾರ್ಯಕ್ರಮಗಳನ್ನು ನೀಡುತ್ತಿರುತ್ತಾರೆ. ಮ್ಯೂಸಿಕ್ ಥೆರಪಿಸ್ಟ್ ಕೋರ್ಸ್ ಮಾಡಿರುವುದರ ಪರಿಣಾಮವಾಗಿ ಒತ್ತಡದ ಮನಸುಗಳವರಿಗೆ ಸಂಗೀತದ ಮುಖೇನ ಶಾಂತತೆಯೆಡೆಗೆ ಕರೆದೊಯ್ಯುತ್ತಿದ್ದರು ಆಗ. ಈಗ ಅದನ್ನು ಬೇರೆಯವರಿಗೆ ಜವಾಬ್ದಾರಿಯನ್ನು ವಹಿಸಿದ್ದಾರೆ. ದೊರೆತ  ಬಿರುದು ಸನ್ಮಾನಗಳು ಹಲವಾರು. ಕರ್ನಾಟಕ ಸಂಗೀತ ಹಾಗೂ ನೃತ್ಯ ಅಕಾಡೆಮಿಯವರಿಂದ ಯುವ ಪ್ರತಿಷ್ಠಾ ಪೂರ್ಣ ಚೇತನ, ಯುವ ಪ್ರತಿಭಾ ದರ್ಶನ, ರಾಮಕೃಷ್ಣ ಮಿಷನ್ ಇನ್ಸಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಕನ್ನಡ ಸಾಹಿತ್ಯ ಪರಿಷತ್ ಯೂತ್ ಮ್ಯೂಸಿಕ್, ಭಾರತ ವಿಕಾಸ್ ಪರಿಷತ್ ರವರುಗಳಿಂದ ಸನ್ಮಾನ, ಹರಿದ್ವಾರದಲ್ಲಿ ನಡೆಯುವ ಕುಂಭಮೇಳದಲ್ಲಿ ಲಕ್ಷಾಂತರ ಕೇಳುಗರ ಮುಂದೆ ನಡೆಸಿದ ಕರ್ಯಕ್ರಮ ಜೊತೆಗೆ ಸನ್ಮಾನ, ಭಾಂಗಿಯಾ ವಿಶ್ವವಿದ್ಯಾಲಯದಿಂದ 'ಸಂಗೀತ ರತ್ನ' ಬಿರುದು.



**ಮುಂದಿನ ಯೋಜನೆ:**

ಸಧ್ಯ ಬೆಂಗಳೂರಿನಲ್ಲಿ ರೆಕಾರ್ಡಿಂಗ್ ಸ್ಟುಡಿಯೋ ಒಂದರ ಒಡೆಯರಾಗಿರುವರು. ಈ ದೇಶದಲ್ಲಿ ಒಬ್ಬ ಪ್ರತಿಭೆಗೆ ಒಂದು ಸರಿಯಾದ ಚಾನಲ್‌ಗೆ ತೆಗೆದುಕೊಂಡು ಹೋಗಲು ಪ್ರಾಪರ್ ಚಾನಲ್ ಇಲ್ಲ. ಜನಸಂಖ್ಯೆಯೂ ಕಾರಣವಾಗಬಹುದು. ಬೆಳೆಯೋ ಒಬ್ಬ ಪ್ರತಿಭೆಯು ಹೂವಾಗೋ ಸಮಯದಲ್ಲಿ ಏನೇನೆಲ್ಲಾ ಕಷ್ಟಗಳನ್ನ ಎದುರಿಸಬೇಕಾಗುತ್ತೆ. ಚಾಲೆಂಜಸ್, ಫೈಟು. ಮಚ್ ಮೋರ್ ಡಿಸ್ಕ್ರಿಮಿನೇಷನ್! ಎಲ್ಲವನ್ನೂ ಮೀರಿ ಮೇಲೆ ಬಂದಿರುವ ಇವರಿಂದು 'ಸುರ್' ಪ್ರೊಡಕ್ಷನ್ಸ್ ಪ್ರಾರಂಭಿಸಿದ್ದಾರೆ. ಸುರ್ ಎಂದರೆ ಸ್ವರ! ಪ್ರೊಡಕ್ಷನ್ ಹೌಸ್ ಹಾಗೂ ಮ್ಯೂಸಿಕ್ ಇನ್ಸಿಟ್ಯೂಟ್‌ನ್ನು ನಡೆಸುತ್ತಿದ್ದಾರೆ. ಭಾರತೀಯ, ಪಾಶ್ಚಾತ್ಯ ಹಾಗೂ ಅನೇಕ ಸಂಗೀತ ಪ್ರಾಕಾರಗಳ ತರಬೇತನ್ನು ನೀಡುತ್ತಾರೆ. ಪ್ರೊಡಕ್ಷನ್ ಹೌಸ್‌ನಲ್ಲಿ ಡಾಕ್ಯುಮೆಂಟರಿಗಳು, ಜಾಹಿರಾತುಗಳು, ಫಿಲಂಗಳು ವಿಡಿಯೋ ಪ್ರೊಡಕ್ಷನ್‌ಗಳು, ಜಿಂಗಲ್ಸ್ ಮುಂತಾದವುಗಳಿಲ್ಲಿ ನಡೆಯುತ್ತದೆ. ಭಾರತೀಯರು ಹೆಚ್ಚಾಗಿ ಭಾಷಾಸಹಿತ ಸಂಗೀತ ಇಷ್ಟಪಟ್ಟರೆ, ವಿದೇಶಿಯರು ಭಾಷಾತೀತ ಸಂಗೀತವನ್ನು ಇಚ್ಛಿಸುತ್ತಾರೆ. ಇನ್ಸಿಟ್ಯೂಟ್‌ನಲ್ಲಿ ತಬಲ ಡ್ರಮ್ಸ್ ಗಿಟಾರ್ ಕೀಬೋರ್ಡ್ ಹೀಗೇ ಅನೇಕ ವಾದ್ಯಗಳನ್ನು ಹೇಳಿಕೊಡಲಾಗುತ್ತದೆ. ಇವರಿಂದ ತರಬೇತು ಪಡೆದ ಹಲವಾರು ವಿದ್ಯಾರ್ಥಿಗಳು ಇಂದು ಗುರುಗಳಾಗಿ ಗುರುತಿಸಿಕೊಂಡಿದ್ದಾರೆ. ಇಲ್ಲಿ ಇವರದೇ ಆದ ಸಿಲಬಸ್‌ಗಳಿವೆ. ಭಾರತೀಯ ಹಾಗೂ ಪಾಶ್ಚಾತ್ಯ ನೊಟೇಷನ್ ಇರುತ್ತದೆ. ಒಂದೊದ್ದಕ್ಕೂ ಒಂದೊAದು ಕರಿಕ್ಯುಲಂನ್ನು ವ್ಯವಸ್ಥಿತವಾಗಿ ಮಾಡಿದ್ದಾರೆ. ಕ್ಯಾಲಿಫೋರ್ನಿಯಾ ಚಿಕಾಗೋ ನ್ಯೂಜೆರ್ಸಿ ಈ ಮೂರು ಸ್ಥಳಗಳಲ್ಲಿ ಸುರ್ ವಿದ್ಯಾಲಯವನ್ನು ತೆರೆಯುವ ಎಲ್ಲಾ ಕರ‍್ಯಗಳು ಭರದಿಂದ ಸಾಗುತ್ತಿದೆ. ಉದ್ದೇಶವಿಷ್ಟೇ. ಇಲ್ಲಿನ ಹಾಗೂ ಅಲ್ಲಿನ ಕಲಾವಿದರನ್ನು ಒಟ್ಟುಗೂಡಿಸಿ ಆಲ್ಬಂಗಳನ್ನು ಹೊರತಂದು ಪ್ರಪಂಚಕ್ಕೆ ಉತ್ತಮ ಕಲಾವಿದರ ಪರಿಚಯವನ್ನು ಮಾಡಿಸುವುದು. ಭಾಷಾ ಪ್ರಾಮುಖ್ಯತೆ ಈ ದೇಶದಲ್ಲಿ ಹೆಚ್ಚು. ಇವರ ಸ್ಟೈöÊಲಲ್ಲೇ ಇರುತ್ತದೆಯಾದರೂ ಯೂನಿಕ್ ಆಗಿರುತ್ತದೆ.

**ಅತಿಥಿ ಉಪನ್ಯಾಸಕರು:**

ಯು ಎಸ್ ಎ, ಯೂರೋಪ್ ನಂತಹ ಅನೇಕ ಹೊರದೇಶಗಳಲ್ಲಿ ಉಪನ್ಯಾಸಗಳನ್ನು ನೀಡಿದ್ದಾರೆ. ಹೊರದೇಶದಲ್ಲಿ ಬಹಳಷ್ಟು ಮಂದಿ ಮಕ್ಕಳು ಪೋಷಕರು ಪರಿಚಿತರಿದ್ದಾರೆ. ಇವರ ತಬಲ ಹಾಗು ಭಾರತೀಯ ಶಾಸ್ತ್ರೀÃಯ ಸಂಗೀತ ಕಲೆಗೆ ಆ ದೇಶದಲ್ಲಿ ಒಳ್ಳೆ ಮಾರ್ಕೆಟ್ ಇದೆ. ನಮ್ಮ ದೇಶದಲ್ಲಿ ನಿರ್ದೇಶಕನಾಗಿ ಕಂಪೋಸರ್‌ಆಗಿ ಗುರುತಿಸಿ ಕೊಂಡಿದ್ದಾರೆ. ಇವರದು ೨೪/೭ ಸಂಗೀತವೇ ಪ್ಯಾಷನ್ ಅದೇ ಪ್ರೊಫೆಷನ್ನೂ. ಇತ್ತೀಚೆಗೆ ಸ ಹಿ ಪ್ರಾ ಶಾ ಅಲೆಯೋ ಅಲೆಗೆ ಹಾಗೂ ಇತ್ತೀಚಿನ ಬ್ಲಾಕ್ ಬ್ಲಾಸ್ಟರ್ ಮೂವಿ ಕಾಂತಾರದ ಕರ್ಮ ಹಾಡನ್ನು ಕನ್ನಡವಲ್ಲದೆ ತಮಿಳು ಹಿಂದಿಯಲ್ಲೂ ಹಾಡಿ ಪ್ರಖ್ಯಾತರಾಗಿದ್ದಾರೆ. ದೇಶ ವಿದೇಶಗಳಲ್ಲಿ ವೆಂಕಿ ಮನೆಮಗನಾಗಿ ಹೆಸರು ಮಾಡಿರುವ ಅಚ್ಚ ಕನ್ನಡದ ಪ್ರತಿಭೆ. ಉತ್ತಮ ತರಬೇತುದಾರ, ತಬಲ ಕಲಾಕಾರ, ಫರ್‌ಪರ್ಮರ್, ಸಂಗೀತ ಶಿಕ್ಷಕ, ಸಂಗೀತ ನಿರ್ದೇಶಕ, ಕಂಪೋಸರ್, ಸ್ಟುಡಿಯೋ ಒಳಗೆ ಡೈರೆಕ್ಟರ್ ಸಿಂಗರ್ ಸಾಹಿತಿ. ಎಲ್ಲವೂ ಇವರಲ್ಲಿರುವಾಗ ಉಳಿಸಿಕೊಂಡು ಬೆಳೆಸಿಕೊಂಡು ಹೋಗಲೆಂಬುದಷ್ಟೇ ನಮ್ಮ ಸದಾಶಯ! ಮಗುವಾಗಿದ್ದಾಗ ಮಾಡಿದ ಸಾವಿರ ಗಾಯಿತ್ರಿಜಪ, ಭಜನೆ ಮುಂತಾದ ಧಾರ್ಮಿಕ ಕರ‍್ಯಗಳು ವೇಸ್ಟಾ? ಎಂದಿದ್ದರು. ಖಂಡಿತ ಅದು ವೇಸ್ಟಾಗಿಲ್ಲ ವೆಂಕಿಯವರೇ ಅದರ ಉತ್ತಮವಾದ ಫಲಿತಾಂಶವೇ ಇಂದು ನೀವು ನಿಂತಿರುವ ಸ್ಥಾನ ಸಂಗೀತ ಕ್ಷೇತ್ರ ಸಮಾಜ ನಿಮ್ಮನ್ನು ಗುರುತಿಸುತ್ತಿರುವ ಪರಿ!


ವೆಂಕಿಯವರ ಎಲ್ಲ ಸುಖ ಸಂತೋಷಗಳೊಟ್ಟಿಗೆ ಸಹಿಸಿಕೊಂಡು ಸಹಬಾಳ್ವೆ ನಡೆಸುತ್ತಿರುವರು ಜೀವನ ಸಂಗಾತಿ ಶ್ರೀಮತಿ ನಾಗರತ್ನ ವೆಂಕಟೇಶ್! ಇವರಿಗೆ ಇಬ್ಬರು ಮಕ್ಕಳು ನಿಶ್ಚಿಕ ಹಾಗೂ ನಿರ್ಣಯ್! ಪತ್ನಿ ನಾಗರತ್ನಾ ಕೂಡಾ ಆಂಗ್ಲಭಾಷೆಯಲ್ಲಿ ಮಾಸ್ಟರ್ ಡಿಗ್ರಿ ಹಾಗೂ ಕರ್ನಾಟಕ ಸಂಗೀತದ ಹಾಡುಗಾರ್ತಿಯೂ ಹೌದು! ಸಧ್ಯ ಗೃಹಿಣಿ. ಪತಿಯ ಕೆಲಸಗಳಿಗೆ ಸಹಕರಿಸುತ್ತಾ ಸಂಸಾರ ತೂಗಿಸುತ್ತಿರುವರು!


ಚಿನ್ನರ ಮುತ್ತುಗಳು
ಚೈತ್ರದ ಬೃಂಗ.....

# ಯುಗಾದಿ ಹಬ್ಬ



**ಅನನ್ಯ ಪ್ರಕಾಶ್**. ನ್ಯೂಜೆರ್ಸಿ



ಯುಗಾದಿ ಹಬ್ಬ - ಅನನ್ಯ ಪ್ರಕಾಶ್

ಯುಗಾದಿ ಹಬ್ಬ ಬಂತು
ಹೊಸ ವರುಷ ತಂತು

ಹೂವು ತುಂಬಿದ ಮರಗಳು
ಚಿಕ್ಕ ಚಿಕ್ಕ ಎಲೆಗಳು.
ವಸಂತ ಕಾಲದ ಲಕ್ಷಣಗಳು.

ಯುಗಾದಿ ಹಬ್ಬ ಬಂತು
ಹೊಸ ವರುಷ ತಂತು

ಹೊಸ ಬಟ್ಟೆ ಧರಿಸುವ
ಬೇವು ಬೆಲ್ಲ ತಿನ್ನುವ
ದೇವರಲ್ಲಿ ಪ್ರಾರ್ಥಿಸುವ

ಯುಗಾದಿ ಹಬ್ಬ ಬಂತು
ಹೊಸ ವರುಷ ತಂತು

ಸಿಹಿಯಾದ ಹೋಳಿಗೆ
ಹುಳಿಯಾದ ಮಾವಿನ ಚಿತ್ರಾನ್ನ
ಹಬ್ಬದ ಊಟ ಮಾಡೋಣ


ಯುಗಾದಿ ಹಬ್ಬ ಬಂತು ಹೊಸ ವರುಷ ತಂತು

ಎಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳು!



**ಹಿತಾರ್ಥ್ ಚಂದ್ರ.** ನ್ಯೂಜೆರ್ಸಿ

ಮೃದ್ವಂಗಿ (ಆಕ್ಟೋಪಸ್)





ಗೂಳಿ (ಬುಲ್)


ಕ್ಯಾಮೆರಾ ಕಣ್ಣು
ಚೈತ್ರದ ಬೃಂಗ.....



**ಸತ್ಯನಾರಾಯಣ್ ಕೃಷ್ಣಮೂರ್ತಿ**, ನ್ಯೂಜೆರ್ಸಿ



**ಚಂದ್ರ**. ನ್ಯೂಜೆರ್ಸಿ



**ಚಂದ್ರ.** ನ್ಯೂಜೆರ್ಸಿ



**ಚಂದ್ರ.** ನ್ಯೂಜೆರ್ಸಿ


ಧನ್ಯವಾದಗಳು
ಚೈತ್ರದ ಬೃಂಗ.....






KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ